ಪ್ರಕಟನೆಯ
೫೦ನೆಯ ವರ್ಷ

ಸಂಕ್ರಮಣ

ಸಂಪಾದಕ: ಚಂದ್ರಶೇಖರ ಪಾಟೀಲ

೪೧೯

ಡಾ. ಕೆ. ರಾಘವೇಂದ್ರ ರಾವ ನಡೆದ ದಾರಿ

ರತ್ನಾಕರ ವರ್ಣಿಯ ಕಾವ್ಯ ಚಿಂತನೆ

ಕಾರಂತರ ಕಾದಂಬರಿಗಳಲ್ಲಿ ಋಣದ ಚಿಂತನೆ

ಜಿನದತ್ತ ದೇಸಾಯಿ ಅವರ ಕಾವ್ಯ

ಮರೆಯಾದ ಕವಿ ಜಗದೀಶ ಮಂಗಳೂರಮಠ

ಪುಸ್ತಕ ವಿಮರ್ಶೆ

ಚಂಪಾಕಾಲಂ
ರಾಷ್ಟ್ರಕವಿ ಪದವಿ ಮತ್ತು ವೈನಾಟ್ಕೆ

ಜನವರಿ-ಫೆಬ್ರವರಿ
೨೦೧೫

ಸಂಕ್ರಮಣ ಪ್ರಕಾಶನ, ಬೆಂಗಳೂರು

ಸಂಕ್ರಮಣ

ಸಾಹಿತ್ಯ ಸಂಕಲನ

ಸಂಪುಟ : ೫೦ ಸಂಚಿಕೆ : ೧

ಜನವರಿ - ಫೆಬ್ರವರಿ ೨೦೧೫

ಸಂಪಾದಕ

ಚಂದ್ರಶೇಖರ ಪಾಟೀಲ (ಚಂಪಾ)

ಸಹಾಯ

ನೀಲಾ ಪಾಟೀಲ

ಮೀನಾ ಪಾಟೀಲ

ವಾರ್ಷಿಕ ಚಂದಾ : ರೂ. ೨೦೦

ಐದು ವರ್ಷಕ್ಕೆ : ರೂ. ೯೦೦

ಆಜೀವ ಚಂದಾ : ರೂ. ೩,೦೦೦

ಮಹಾ ಪೋಷಕತ್ವ : ರೂ. ೫,೦೦೦

ಸಂಕ್ರಮಣ ಪ್ರಕಾಶನ

ಎರಡನೆ ಮೇನ್, ಜ್ಯೋತಿ ಲೇಔಟ್

ಯಲಚೇನಹಳ್ಳಿ, ಜೆ. ಪಿ. ನಗರ ಅಂಚೆ

ಬೆಂಗಳೂರು ೫೬೦ ೦೭೮

ಫೋನು: ೦೮೦-೨೬೩೨ ೩೩ ೪೪

ಮೊಬೈಲ್: ೯೪೪೯೦-೬೯೩೪೪

ಸಂಕ್ರಮಣ ಪ್ರಕಾಶನ : ಬ್ಯಾಂಕ್ ಖಾತೆ

ಕರೆಂಟ್ ಅಕೌಂಟ್

ಸಂಖ್ಯೆ : ೫೪೦೨೧೨-೫೫೭೪೯

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (SBM)

ಬಸವನಗುಡಿ ಶಾಖೆ, ಬೆಂಗಳೂರು - ೦೪.

IFSC No. SBMY 00 40014

ಯಾವ ಹೆಚ್ಚಿನ ವೆಚ್ಚವೂ ಇಲ್ಲದೆ ಈ ಖಾತೆಗೆ ನೀವು ಚಂದಾ ಸಂದಾಯ ಮಾಡಬಹುದು. ನಿಮ್ಮ ಬ್ಯಾಂಕ್ ಮ್ಯಾನೇಜರರ ಸಲಹೆ ಪಡೆಯಿರಿ.

ಹೀಗೆ ಮಾಡಿದ ನಂತರ ನೀವು ನಮಗೆ ಒಂದು ಪತ್ರ ಬರೆಯಬೇಕು.

ಲಿಪಿ ಜೋಡಣೆ ಹಾಗೂ ಮುದ್ರಣ

ನೇತ್ರಾ ಪ್ರಿಂಟರ್ಸ್

ಬೆಂಗಳೂರು–೫೬೦ ೦೧೮

ಈ ಸಂಚಿಕೆಯಲ್ಲಿ

ರಾಷ್ಟ್ರಕವಿ ಪದವಿ ಮತ್ತು ವೈನಾಟ್ಯ
ಚಂದ್ರಶೇಖರ ಪಾಟೀಲ ೦೧

ಡಾ. ಕೆ. ರಾಘವೇಂದ್ರ ರಾವ ನಡೆದ ದಾರಿ
ಸಿ. ಎನ್. ರಾಮಚಂದ್ರನ್ ೧೯

ರತ್ನಾಕರ ವರ್ಣಿಯ ಕಾವ್ಯ ಚಿಂತನೆ
ವಿಜಯಕುಮಾರಿ ಎಸ್. ಕರಿಕಲ್ ೩೩

ಕಾರಂತರ ಕಾದಂಬರಿಗಳಲ್ಲಿ ಋಣದ ಕಲ್ಪನೆ
ರೇಖಾ ವಿ. ಬನ್ನಾಡಿ ೪೩

ಜಿನದತ್ತ ದೇಸಾಯಿ ಅವರ ಕಾವ್ಯ
ವಿ. ಎಸ್. ಮಾಳಿ ೫೧

ಮರೆಯಾದ ಕವಿ ಜಗದೀಶ ಮಂಗಳೂರಮಠ
ಸತೀಶ ಕುಲಕರ್ಣಿ ೫೯

ಪುಸ್ತಕ ವಿಮರ್ಶೆ
ಎಂ. ಶಂಕರ / ಧರಣೇಂದ್ರ ಕುರಕುರಿ
ಕಮಲಾ ಹೆಮ್ಮಿಗೆ /
ಹೆಚ್. ಎಸ್. ಎಂ. ಪ್ರಕಾಶ ೬೩

೨೦೧೪ರ ಪ್ರಕಟಣೆಗಳು ೭೨

ಕಾವ್ಯ

ಬಿ. ಆರ್. ಲಕ್ಷ್ಮಣ ರಾವ್ ೧೫

ಅನಿತ ಮಂಗಲ ೧೮

ಅಪ್ಪಗೆರೆ ಸೋಮಶೇಖರ ೩೧

ಪ್ರಭು ಖಾನಾಪುರೆ ೪೧

ಉಪ್ಪಂಗಳ ರಾಮಭಟ್ಟ ೪೨

ಕೆ. ಬಿ. ಪವಾರ ೫೭

ಚೇತನ ಸೊಲಗಿ ೭೧

ರಾಷ್ಟ್ರಕವಿ ಪದವಿ ಮತ್ತು ವೈನಾಟ್ಕೆ

• ಚಂದ್ರಶೇಖರ ಪಾಟೀಲ

'ಚಂಪಾ... ನಾನು ಹಂಪಾ'

ಮೊಬೈಲಿನಲ್ಲಿ Hampana ಅಂತ ಮೂಡಿದ ತಕ್ಷಣ ಆ ಕಡೆಯಿಂದ ಕೇಳಿ ಬರುವ ಮೂರು ಶಬ್ದ ಇವು. ಅನೇಕ ದಶಕಗಳಿಂದ ಈ ಗೆಳೆಯನೊಂದಿಗೆ ನನ್ನದು ಬಹಳ ಸಲಿಗೆ. ಬೆಂಗಳೂರು ಸೀಮೆಯ ಸಾಹಿತ್ಯಿಕ - ಸಾಂಸ್ಕೃತಿಕ ರಾಜಕೀಯ ವಿದ್ಯಮಾನಗಳ ಒಳಸುಳಿಗಳ ಘಾಟು ಮೂಗಿಗೆ ಬೇಕೆಂದಿದ್ದರೆ ನಾನು ಇವನಿಗೇ ಮೊದಲು ಫೋನು ಮಾಡುವುದು. ಅವನು ಹೇಳುವುದೆಲ್ಲ ಖರೆ ಎಂದೂ, ಅದನ್ನು ನಂಬಲೇಬೇಕೆಂದೂ ನಿಯಮವಿಲ್ಲ. ಆದರೆ ತುಂಬ ಪ್ರಾಮಾಣಿಕ ಮಾತು. ಮಾತು ತುಟಿ ದಾಟಿ ಬರುವ ಮುನ್ನ ಸಾವಿರ ಸಲ ರಿಹರ್ಸಲ್ ಮಾಡಿರುತ್ತಾನೆ.

ಮತ್ತೇನು ಸಮಾಚಾರ? - ಅಂದೆ.

ಇತ್ತೀಚೆಗೆ ಪತ್ರಿಕೆಗಳಲ್ಲಿ ಗಟ್ಟಿಯಾಗಿಯೇ ಚರ್ಚೆಯಾಗುತ್ತಿರುವುದು: 'ಮುಂದಿನ ರಾಷ್ಟ್ರ ಕವಿ ಯಾರು?' - ಎಂಬ ಪ್ರಶ್ನೆ. ಹಿರಿಯ ಸಾಹಿತಿ - ನ್ಯಾಯಾಧೀಶ ಕೋಚೆ ಅವರ ಹಿರಿತನದಲ್ಲಿ ಒಂದು ಆಯ್ಕೆ ಸಮಿತಿ. ಆ ಸಮಿತಿಗೆ ಪ್ರಾದೇಶಿಕ ನ್ಯಾಯ - ಸಾಮಾಜಿಕ ನ್ಯಾಯ - ಲೈಂಗಿಕ ನ್ಯಾಯ ಇತ್ಯಾದಿ ನ್ಯಾಯಗಳ ಪ್ರಕಾರ ಬೇರೆ ಬೇರೆ ವಯೋಮಾನದ ಸದಸ್ಯರ ನೇಮಕ. ಎರಡು ಮೂರು ಮೀಟಿಂಗ್ ಆದರೂ ಬಗೆಹರಿಯಲಿಲ್ಲ ಅಂತ ಕಾಣುತ್ತದೆ. ಇದು ಪ್ರಜಾಪ್ರಭುತ್ವ; ವಿಷಯವನ್ನು ಜನರ ಬಳಿಯೇ ಒಯ್ಯೋಣ - ಅಂತ ಸಾರ್ವಜನಿಕ ಅಭಿಪ್ರಾಯಕ್ಕೆ ಅಣಿಯಾಯಿತು ಸರಕಾರ. ಸರಿ. ಹತ್ತಾರು ಮಾನದಂಡಗಳ ಪಟ್ಟಿಯ ಬಿಡುಗಡೆ. ಅದಕ್ಕೆ ನಮ ನಮೂನೆಯ ಪ್ರತಿಕ್ರಿಯೆಗಳು ಬಂದಿವೆ ಈಗಾಗಲೇ....

*

"ಏನಪಾ ನೀ ಏನಂತೀ? ನೀ ಯಾವಾಗಲೂ ನಿಷ್ಪಕ್ಷಪಾತವಾಗಿ, ನೇರವಾಗಿ ಮಾತಾಡೋ ಮನುಷ್ಯ. ಅದಕ್ಕೇ ನಿನಗೀ ಫೋನು." - ಹಂಪನಾನ ಈ ಮಾತು ಕೇಳಿ ನನಗೆ ಖುಶಿ. ನಾಡಿನ ಜನತೆಯನ್ನು ಅನೇಕ ವರ್ಷಗಳಿಂದ ಈ ಭ್ರಮೆಯಲ್ಲಿ ಯಶಸ್ವಿಯಾಗಿ ಇಟ್ಟಿದ್ದಕ್ಕೆ ನನಗೇ ನನ್ನ ಬಗ್ಗೆ ಹೆಮ್ಮೆ. ಆದರೆ ಯಾರಾದರೂ ತಾವಾಗಿಯೇ ನನ್ನ ಸಲಹೆ - ಸೂಚನೆ - ಆದೇಶ - ಉಪದೇಶ - ಸಂದೇಶಗಳನ್ನು ಕೇಳಿದರೆ, ಅವರನ್ನು ಎಷ್ಟು ಬಗೆಯಲ್ಲಿ ಹಾದಿ ತಪ್ಪಿಸಬಹುದೆಂದೇ ನನ್ನ ಒಳಗಿನ ಲೆಕ್ಕಾಚಾರ. "ಹಾಗೆ ಮಾಡಿರಿ ಹೀಗೆ ಮಾಡಿರಿ" - ಅಂತ

ಹೇಳುವುದಿಲ್ಲ. "ನಾನಾಗಿದ್ದರೆ ಹಾಗೆ ಮಾಡುತ್ತಿದ್ದೆ. ಹೀಗೆ ಮಾಡುತ್ತಿದ್ದೆ" - ಇದು ನನ್ನ ಶೈಲಿ. ಆದರೆ ಈ ಹಂಪನಾನೂ ಇದೇ ಜಾತಿಯ ಆಸಾಮಿಯಾಗಿರುವುದರಿಂದ ಅವನನ್ನು 'ಹಾದಿ ತಪ್ಪಿಸುವ ಮಾತೇ' ಇಲ್ಲ. ಹೀಗಾಗಿ ನನ್ನ ಅವನ ಆಪ್‌ಸಾತ್ ಮಾತು ಅಂದರೆ ಅದು 'ನನಗೆ ಅವಗೆ ಗೊತ್ತು'.

ಇಂಡಿಯಾದ ಬೇರೆ ರಾಜ್ಯಗಳಲ್ಲಿ ಈ ಸಮಸ್ಯೆ ಇದ್ದಂತಿಲ್ಲ. ಏಕೀಕರಣ ಪೂರ್ವದಲ್ಲಿ ಮಂಜೇಶ್ವರ ಗೋವಿಂದ ಪೈಗಳಿಗೆ ಆಗಿನ ಮದ್ರಾಸ್ ಸರಕಾರ 'ರಾಷ್ಟ್ರಕವಿ' ಪದವಿ ನೀಡಿತ್ತು. ನಾಡು ಒಂದಾದ ನಂತರ ಕುವೆಂಪು ಆ ಪದವಿಗೆ ಭಾಜನರಾದರು. ಆಗೆಲ್ಲ ಈಗಿನ ಹಾಗೆ ಹುಯಿಲು ಎದ್ದಿರಲಿಲ್ಲ. ಸಾಹಿತಿಗಳಿಗೆ ಸಹಜವಾಗಿ ಸಲ್ಲಬೇಕಾದ ರಾಜ ಮರ್ಯಾದೆ ಅಂತಲೇ ಆಗಿನ ಭಾವನೆ. ಕುವೆಂಪು ತೀರಿಕೊಂಡ ನಂತರ ಈ ಪದವಿಗೆ ಹನ್ನೆರಡು ವರ್ಷದ 'ವನವಾಸ'. ಯಾರೋ ಎಬ್ಬಿಸಿದರು. ಯಾಕೆ ಈ ಪರಂಪರೆ ಮುಂದುವರಿಯಬಾರದು? ಅವರಿವರು ದೊಡ್ಡವರು ಆಗಲಿ ಆಗಲಿ ಅಂದರು. ಸರಕಾರವೂ ಆಗಲಿ ಎಂದಿತು. ಸರಕಾರದ ಕೆಲಸ ದೇವರ ಕೆಲಸ - ಅಂತ ವಿಧಾನ ಸೌಧದ ಅಗಸೆ ಬಾಗಿಲ ಮೇಲೆ ಕೆತ್ತಿಸಿಕೊಂಡಿದ್ದರೂ. ಸರಕಾರ ದೇವರೂ ಅಲ್ಲ, ದಿಂಡಿರೂ ಅಲ್ಲ. ಪ್ರೊಸೀಜರ್ ಅಂತ ಇರುತ್ತದಲ್ಲ. ಆ ಪ್ರಕಾರ ಒಂದು ಆಯ್ಕೆ ಸಮಿತಿ ರಚನೆ. ಇದು ಬಹಳ ನಾಜೂಕಿನ ಕೆಲಸ. ಪದವಿಗೆ ಯೋಗ್ಯರೆಂದೆನಿಸುವ 'ಸಂಭವನೀಯರು' ಅಂತ ಒಂದು ಪಟ್ಟಿ ಇರುತ್ತದೆ. ಅಂಥವರನ್ನು ಹವುರಗೆ ಆಚೆಗಿಟ್ಟು, ಉಳಿದವರಲ್ಲಿಯೇ ಹಿರಿಯರು, ಖ್ಯಾತರು ಎಂಬವರು ಸಮಿತಿಯಲ್ಲಿ ಇರುತ್ತಾರೆ.

ಜಿ.ಎಸ್.ಎಸ್. ಆಯ್ಕೆಯ ಸಂಧರ್ಭ : ದೇ.ಜ.ಗೌ. ಅಧ್ಯಕ್ಷತೆಯ ಸಮಿತಿಯಯ ಸಿದ್ಧಲಿಂಗ ಪಟ್ಟಣ ಶೆಟ್ಟಿ, "ಕುವೆಂಪು ನಂತರ ಈ ಪದವಿಗೆ ಯೋಗ್ಯ ಬೇಂದ್ರೆ ಒಬ್ಬರೇ. ಮರಣೋತ್ತರ ಕೊಡುವುದಾದರೆ ಅವರಿಗೇ ಕೊಡೋಣ. ಇಲ್ಲವಾದರೆ ಯಾರಿಗೂ ಬೇಡ. "ಎಂದು ಪತ್ರವನ್ನೇ ಬರೆದುಕೊಟ್ಟು ಹೊರನಡೆದರು. ಮತ್ತೊಬ್ಬ ಸದಸ್ಯ ನಿಸಾರ ಅಹಮ್ಮದ ಮುಗುಮ್ಮಾಗಿಯೇ ಉಳಿದು ಸಭೆಗೇ ಬರಲಿಲ್ಲವಂತೆ. ಬಾಕಿ ಉಳಿದವರು, ಶೆಟ್ಟರ ಪತ್ರದ ಪ್ರಸ್ತಾಪವನ್ನೇ ಮಾಡದೆ, 'ಸರ್ವಾನುಮತ'ದಿಂದ ಡಾ. ಜಿ. ಎಸ್. ಶಿವರುದ್ರಪ್ಪ ಅವರನ್ನು 'ರಾಷ್ಟ್ರಕವಿ' ಅಂತ ಆಯ್ಕೆ ಮಾಡಿದರು. ಈ ಆಯ್ಕೆಯ ಬಗ್ಗೆ ಅಲ್ಲಲ್ಲಿ ಅಪಸ್ವರ - ಉಪಸ್ವರಗಳು ಕೇಳಿಬಂದರೂ ಪ್ರತಿಭಟನೆ - ಸತ್ಯಾಗ್ರಹ -ಶವಯಾತ್ರೆ - ಬಂದ್ ಇತ್ಯಾದಿ ಯಾವುದೂ ನಡೆಯಲಿಲ್ಲ. ಮಾತು ಬರಹ ಬದುಕುಗಳಲ್ಲಿ ಘನತೆಯನ್ನೇ ಕಾಪಾಡಿಕೊಂಡ ಜಿ. ಎಸ್. ಎಸ್. ಪಡಕೊಂಡ ಪದವಿಗೆ ಯೋಗ್ಯರಾಗಿಯೇ ಇದ್ದರು. ಕುವೆಂಪು ಅವರಿಗೆ ಇವರನ್ನು ಹೋಲಿಸುವುದು ಅಪ್ರಸ್ತುತ; ಇಬ್ಬರಿಗೂ ಮಾಡುವ ಅನ್ಯಾಯ ಅದು. ಕುವೆಂಪು ಸುತ್ತ ಕಟು-ವಿಮರ್ಶಕರಿದ್ದರೆ, ಜಿ.ಎಸ್.ಎಸ್. ಸುತ್ತ ಇದ್ದವರು ವಟು-ವಿಮರ್ಶಕರು.

ಈಗಿನ ಪರಿಸ್ಥಿತಿ ಮೊದಲಿನಂತಿಲ್ಲ. ಕುವೆಂಪು ಕಾಲಕ್ಕೆ ಸಾಹಿತ್ಯಿಕ ಸಾಧನೆಯ ನಿಟ್ಟಿನಿಂದ ಅವರಿಗೆ ಸರಿದೊರೆಯಾಗಿದ್ದ ನವೋದಯದ ಅನೇಕ ಹಿರಿಯರಿದ್ದರು : ಕಾರಂತ, ಮಾಸ್ತಿ,

ಬೇಂದ್ರೆ, ಪುತಿನ. ... ಹೀಗೆ. ಆದರೆ ಕುವೆಂಪು ಪಡೆದ ಸಾಮಾಜಿಕ ಸಾಂಸ್ಕೃತಿಕ ಮಹತ್ವ ಉಳಿದವರಿಗೆ ಬರಲೇ ಇಲ್ಲ. ಹೀಗಾಗಿ ಮೊದಲ ಜ್ಞಾನಪೀಠ, ಮೊದಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅವರಿಗೆ ಲಭಿಸಿದ್ದು ಸಹಜ, ಆದ್ದರಿಂದ ಪ್ರಶ್ನಾತೀತ, ಪ್ರಕ್ರಿಯೆಯಾಗಿತ್ತು. ನವೋದಯದ ನಂತರದ ಅವಧಿ ಪೈಪೋಟಿಯ ಕಾಲ. ಪ್ರಗತಿಶೀಲ ಸಾಹಿತ್ಯದ ನಿರಂಜನ ಕಟ್ಟೀಮನಿ-ಅನಕೃ, ಸಮನ್ವಯದ ಜಿ.ಎಸ್.ಎಸ್. - ಕಣವಿ - ಕೆ.ಎಸ್. ನ., ನವ್ಯದ ಮೊದಲ ಹಂತದ ಅಡಿಗ - ಗೋಕಾಕ: ಇವರೆಲ್ಲ ಹೆಚ್ಚು ಕಡಿಮೆ ಸಮಾನ ವಯಸ್ಕರು ಮತ್ತು ಯಾವುದೇ ಪದವಿ ಪುರಸ್ಕಾರಗಳ ಸಂದರ್ಭದಲ್ಲಿ ಸಮಾನ- ಆಕಾಂಕ್ಷಿಗಳು. (ಈ ನಡುವೆ ಕೆಲವರು - ಉದಾ ಅನಂತಮೂರ್ತಿ, ಗಿರೀಶ ಕಾರ್ನಾಡ ರಂತವರು... ಕ್ಯೂ ಜಂಪ್ ಮಾಡಿ. ಪ್ರಶಸ್ತಿ ಹೊಡಕೊಂಡವರೂ ಇದ್ದಾರೆ. ಆ ಇತಿಹಾಸವೇ ಬೇರೆ, ಆ ಪುರಾಣವೇ ಬೇರೆ.)

'ರಾಷ್ಟ್ರ ಕವಿ' ಪ್ರಶಸ್ತಿಯ ವೈಶಿಷ್ಟ್ಯವೆಂದರೆ ಅದು ಶನಿ-ಮಹಾತ್ಮನಂತೆ ಜೀವಮಾನವಿಡೀ ಜೀವಕ್ಕಂಟಿಕೊಂಡ ಹೆಗ್ಗಳಿಕೆ. ಉಳಿದವು - (ಪಂಪ, ರನ್ನ, ನೃಪತುಂಗ, ಬಸವ ಇತ್ಯಾದಿಗಳು: ಕೇಂದ್ರ ಅಕಾಡೆಮಿ - ಜ್ಞಾನಪೀಠ ಪ್ರಶಸ್ತಿಗಳು) ರೆಗ್ಯುಲರ್ ಆಗಿ ಟ್ರೇನು - ಬಸ್ಸುಗಳಂತೆ ಬರುತ್ತಲೇ ಇರುವ, ಹೋಗುತ್ತಲೇ ಇರುವ, ಪದವಿಗಳಾದ್ದರಿಂದ ಅಲ್ಲಿ ಕಾಯುವುದಕ್ಕೆ ಒಂದು ಅವಕಾಶವಿದೆ. ಇಂದಲ್ಲ ನಾಳೆ ಭಗವಂತ ಕಣ್ಣು ತೆರೆದಾನು ಅಂತ ಕಣ್ಣು ಮುಚ್ಚಿಕೊಂಡು ಪ್ರಾರ್ಥನೆ ಸಲ್ಲಿಸಬಹುದು. ಹೀಗಾಗಿ 'ರಾಷ್ಟ್ರಕವಿ'ಯಾಗುವ ಕನಸು ಕಾಣುವವರು ಸ್ವಲ್ಪ ಅಮಾನವೀಯ ನೆಲೆಯಲ್ಲಿ 'ಹಾಲಿ'ಗಳ ವರ್ಷಗಣನೆ - ದಿನಗಣನೆ ಮಾಡುತ್ತಲೇ ಇರಬೇಕಾಗುತ್ತದೆ. ಜಿ. ಎಸ್. ಎಸ್. ಅವರ ಆರೋಗ್ಯ ವಿಷಮಿಸುತ್ತ ಬಂದ ಹಾಗೆಲ್ಲ, 'ಮುಂದೆ ಯಾರು' ಎಂಬ ಪ್ರಶ್ನೆ ಹಲವರನ್ನಾದರೂ ಕಾಡಿರಬೇಕು. ಹರೆಯದ ಹಂಗಾಮಿನಲ್ಲಿರುವವರ ವ್ಯಾಪ್ತಿ ಪ್ರದೇಶಕ್ಕೆ ಇದು ಮೀರಿದ್ದು. ಸಾಧ್ಯವಾದದನ್ನೆಲ್ಲ ಸಾಧಿಸಿ, ಪಡೆಯಬೇಕಾದ್ದನ್ನೆಲ್ಲ ಪಡಕೊಂಡು, ಮಿಲಿಟರಿ ಸೇನಾಪತಿಗಳ ಹಾಗೆ ಸಮವಸ್ತ್ರದ ತುಂಬ ಮೆಡಲು ಧರಿಸಿಕೊಂಡು, 'ಇನ್ನೇನು ಅದೊಂದು ಬಂದರೆ ಸಾಕು!' ಎಂದು ಸಾಕಷ್ಟು ನಿರ್ಲಿಪ್ತ ಕಣ್ಣುಗಳಿಂದಲೇ ಆಕಾಶದ ನಕ್ಷತ್ರಗಳನ್ನು ಕಾಣಬೇಕೆಂದರೆ ಸಾಕಷ್ಟು ವಯಸ್ಸೂ ಆಗಿರಬೇಕು. ಅಂಥವರ ಸಂಖ್ಯೆ ವಿರಳವಾಗಿದ್ದಷ್ಟೂ ಆಯ್ಕೆ ಮಾಡುವವರಿಗೆ ಸುಲಭ. ಆದರೆ ಈಗಿನ ಸಮಸ್ಯೆ ಅಷ್ಟು ಸರಳವಾಗಿಲ್ಲ.

ಈಗ ಮೊದಲಿನಂತೆ ಅಷ್ಟು ಪುಸ್ತಕ ಬರೆದೆ, ಇಷ್ಟು ಪುಸ್ತಕ ಬರೆದೆ ಅನ್ನುವಂತಿಲ್ಲ. ತುಂಬ ಬೇಕಾದ ಫಾರ್ಮಿನಲ್ಲಿ ಅನೇಕ ಕಾಲಮ್ಮುಗಳಿವೆ. ಧರ್ಮ-ಜಾತಿ - ಒಳಜಾತಿ - ಒಳಪಂಗಡ ಇವಂತೂ ಕಂಪಲ್ಸರಿ; ಮತ್ತು ಒಮ್ಮೊಮ್ಮೆ - ಆಯ್ಕೆಯ ಅಂತಿಮ ಹಂತದಲ್ಲಿ - ಇವೇ ನಿರ್ಣಾಯಕ. ಜೊತೆಗೆ ಸಾಹಿತ್ಯೇತರ ಸಾಧನೆಗಳ ಪಟ್ಟಿ ಕೊಡಬೇಕು. ನಾಡಿನ ವಿದ್ಯಮಾನಗಳಲ್ಲಿ ನಿಮ್ಮ ಪಾಲುಗಾರಿಕೆ ಎಷ್ಟು ; ಯಾವ ಚಳುವಳಿಗಳಲ್ಲಿ ಯಾವ ಶೈಲಿಯಲ್ಲಿ ಪಾಲುಗೊಂಡಿದ್ದೀರಿ; ಪಂಪ ಪಂಪ ಅನ್ನುತ್ತಾರಲ್ಲ ಆ ಪಂಪನ ನೂರಾರು ಮೈಲುದ್ದದ

ಪಂಪಿನ ಒಳಹರಿವಿನಲ್ಲಿ ನಿಮ್ಮ ಸ್ಥಾನ ಏನು; ಕಾವೇರಿಯಿಂದ ಮಾ ಗೋದಾವರಿವರೆಗ ಮಿರ್ದ - ('ಇರುವ' ಅಲ್ಲ) - ಈ ಕನ್ನಡ ಮೆನಿಪ್ಪಾ ನಾಡಿನ ಒಳನಾಡು - ಗಡಿನಾಡು - ಹೊರನಾಡುಗಳ ಸಂಪರ್ಕ ನಿಮಗೆ ಇದೆಯೇ; ಯಾವ ದಿಕ್ಕಿನಲ್ಲಿ ನಿಮ್ಮ ಕೀರ್ತಿಯ ಕಂಪು ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಹರಡಿದೆ; ನಿಮ್ಮ ಜನ್ಮ ಎಲ್ಲಿ, ಯಾವಾಗ, ಯಾಕೆ... ಇಂಥ ಇನ್ನೂ ಹಲವು ವಿವರಗಳಿಗಾಗಿ ಸರಕಾರವು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಮಾನದಂಡಗಳ ಪಟ್ಟಿಯನ್ನು ನೋಡಬಹುದು.

*

ಅಂದ ಹಾಗೆ, ಜಿ.ಎಸ್. ಎಸ್. ನಿಧನರಾಗಿ, ಕಲಾಗ್ರಾಮದಲ್ಲಿ ಸಾಕಷ್ಟು ವಾದ-ವಿವಾದಗಳ ನಡುವೆಯೇ ಅವರ ಅಂತ್ಯ ಸಂಸ್ಕಾರ ನೆರವೇರಿದ ಹೊಸತರಲ್ಲಿಯೇ ನಮ್ಮ ಹರಿಹರಪ್ರಿಯ 'ಮುಂದೆ ಯ್ಹಾರು?' ಎಂಬ ಶೀರ್ಷಿಕೆಯ ಲೇಖನವೊಂದನ್ನು ಕನ್ನಡ ಪ್ರಭದಲ್ಲಿ ಬರೆದರು. ನಮ್ಮ ಚುನಾವಣಾ ಪೂರ್ವ ಸಮೀಕ್ಷೆಗಳ ಶೈಲಿ ಅದು. ವಿನೋದ ಪ್ರಜ್ಞೆ ಇಲ್ಲದ ತಮ್ಮ ಹಾಸ್ಯಮಯ ಧಾಟಿಯಲ್ಲಿ ಒಂದು ಸಂಭಾವ್ಯ ಪಟ್ಟಿಯನ್ನೂ ಕೊಟ್ಟಿದ್ದರು. 'ವಿಜಯ ಕರ್ನಾಟಕ'ದ ಸಂಪಾದಕ ಸುಗತ ಶ್ರೀನಿವಾಸರಾಜು ಬಹಳ ಗಂಭೀರವಾಗಿಯೇ 'ರಾಷ್ಟ್ರಕವಿ' ಎಂಬ ಪರಿಕಲ್ಪನೆಯೇ ಅಸಂಬದ್ಧವೆಂದು ವಾದಿಸಿ, ಜಿ.ಎಸ್. ಎಸ್. ನಮ್ಮ ಕೊನೆಯ ರಾಷ್ಟ್ರಕವಿ ಆಗಿಬಿಡಲಿ ಎಂದು ಹಾರೈಸಿದ್ದರು. ಸ್ವಲ್ಪ ದಿನ ಎಲ್ಲಾ ತಣ್ಣಗಿತ್ತು. ಮತ್ತೆ ಸಿದ್ಧರಾಮಯ್ಯ ಸರಕಾರ ವಿಷಯ ಕೈಗೆತ್ತಿಕೊಂಡು 'ಆಯ್ಕೆ ಸಮಿತಿ' ರಚಿಸಿದ ಮೇಲೆ ಬಿಸಿ ಬಿಸಿ ಚರ್ಚೆ ಸುರುವಾಗಿದೆ. ಡೇ-ವನ್ ಅನ್ನುತ್ತಾರಲ್ಲ ಹಾಗೆ, ಮೊದಲ ದಿನದಿಂದಲೇ ಮೊದಲ ವರದಿಯನ್ನೇ ವ್ಯಂಗ್ಯ ಚಿತ್ರ ವಿಡಂಬನೆಯೊಂದಿಗೆ ಪ್ರಕಟಿಸಿದ್ದು 'ವಿಜಯ ಕರ್ನಾಟಕ'. ಅದು ಸಾರ್ವಜನಿಕರ ಅಭಿಪ್ರಾಯಗಳನ್ನೂ ಫೋಟೋ ಸಮೇತ ಹೊರಹಾಕಿದೆ. ಯಾಕೋ 'ಪ್ರಜಾವಾಣಿ' ಪತ್ರಿಕೆ - (ನಾನದನ್ನು ಪ್ರೀತಿಯಿಂದಲೇ 'ಕನ್ನಡ ಸಾಹಿತ್ಯದ ಕೇಶವ ಕೃಪಾ' ಅಂತ ಕರೆಯುತ್ತಾ ಬಂದಿರುವೆ)- ಒಡೆದು ಕಾಣುವಂತೆ ತನ್ನ ಒಲವು ತೋರಿಸದಿದ್ದರೂ ಕೆಲವು ಗಂಭೀರ ಲೇಖನಗಳನ್ನು ಪ್ರಕಟಿಸಿದೆ. ಅಂತೂ ಗಾಡಿ ಚಾಲ್ತಿಯಲ್ಲಿದೆ.

*

ಮಾನದಂಡಗಳು ಹೊರನೋಟಕ್ಕೆ ಸರಳವಾಗಿ, ಒರಟಾಗಿ ಕಂಡರೂ ಒಮ್ಮೊಮ್ಮೆ ಸೂಕ್ಷ್ಮವಾಗಿ ಒಳ ಸಂರಚನೆಯಲ್ಲಿಯೇ ಕೆಲವು ಪ್ರತಿಬಂಧಕಗಳನ್ನು ಹೊಂದಿರುತ್ತವೆ. 'ರಾಷ್ಟ್ರಕವಿ' ಪದ ಪುಂಜದಲ್ಲಿ 'ರಾಷ್ಟ್ರ'ವೆಂಬ ಶಬ್ದವೇ ವಾದಾಸ್ಪದ. ಕರ್ನಾಟಕವು ಭಾರತ ಒಕ್ಕೂಟದ ಒಂದು ರಾಜ್ಯವೇ ಹೊರತು ಅದೊಂದು 'ರಾಷ್ಟ್ರ'ವಲ್ಲ. ಅದಿರಲಿ. ಈಗ ರಾಜ್ಯಸರಕಾರ ಪ್ರತಿ ವರ್ಷ ನೀಡುತ್ತಿರುವ 'ಪಂಪ ಪ್ರಶಸ್ತಿ' ಸಾಹಿತ್ಯವಲಯದ ಅತ್ಯುನ್ನತ ಪ್ರಶಸ್ತಿ ಎಂದು ಜನಜನಿತವಾಗಿದೆ. ಹಾಗಾದರೆ ಈ ಪ್ರಶಸ್ತಿ ಪಡೆದ ಸಾಹಿತಿ ಮತ್ತು 'ರಾಷ್ಟ್ರಕವಿ' ಅನ್ನಲಾಗುವ ಸಾಹಿತಿ - ಇಬ್ಬರ ನಡುವೆ ಯಾರು ಶ್ರೇಷ್ಠ? ಇದು ಹೀಗೆಯೇ ಬೆಳೆದರೆ ಮುಂದೆ

ಇಬ್ಬರ ನಡುವೆಯೂ ಮಾರಾಮಾರಿ ನಡೆಯುವ ಸಂಭವವಿದೆ. ಏಕೆಂದರೆ ಪಂಪ ಪ್ರಶಸ್ತಿಗರಿಗೆ ಸದ್ಯ ಮೂರು ಲಕ್ಷ ರೂ ನಗದು, ಶಾಲಾರ್ಪಣೆ ಮತ್ತು ಮಾಲಾರ್ಪಣೆ, ಮೇಲೊಂದು ಪ್ರಶಸ್ತಿ ಫಲಕ - (ಅದಕ್ಕೆ ಜಿ. ಎಸ್. ಎಸ್. ಅವರು 'ಒಂದು ತಗಡು' ಅಂತಲೇ ಹೆಸರಿಟ್ಟಿದ್ದರು). ರಾಷ್ಟ್ರಕವಿಗೆ ಮಾತ್ರ ಒಟ್ಟಿಗೇ ಹತ್ತು ಲಕ್ಷ ರೂ ಮತ್ತು ತಗಡು ಇತ್ಯಾದಿ ಅಲ್ಲದೆ ಆಡಳಿತಾರೂಢ ಸರಕಾರಕ್ಕೆ ಉಚಿತ ಸಲಹೆ -ಮಾರ್ಗದರ್ಶನ ನೀಡುವ ಸದವಕಾಶ. ಸುದೈವದಿಂದ ಅನಾರೋಗ್ಯಕ್ಕೆ ಈಡಾದರಂತೂ ರಾಜಮರ್ಯಾದೆ. ಎಲ್ಲ ವೈದ್ಯಕೀಯ ವೆಚ್ಚ ಸರಕಾರದ್ದು. ನಾಡಿನ ತುಂಬ ಕನ್ನಡ ಡಿಂಡಿಮ ಬಾರಿಸ ಬೇಕೆಂದರೆ ಒಂದು ಸರಕಾರಿ ಕಾರು. ಅಲ್ಲದೆ ಇಡೀ ಎಲ್ಲ ಹಾಳಾಮೂಳಾ ಸೇರಿಸಿದ ಸಮಗ್ರ ಸಾಹಿತ್ಯಕ್ಕೆ ಪುನರ್ಮುದ್ರಣದ ಭಾಗ್ಯ.

*

ಯಾರೋ ಮುಗ್ಧರು ಕೇಳಿದ ಒಂದು ಪ್ರಶ್ನೆ : ಸಾರ್, ರಾಷ್ಟ್ರಕವಿ ಆದರೆ ಏನು ಪ್ರಯೋಜನ?

ಥಟ್ ಅಂತ ಹೇಳಿ : ಎಂಬ ಶೈಲಿಯಲ್ಲಿ ನಾನು ತಟ್ಟನೆ ಕೊಟ್ಟ ಉತ್ತರ -

ಕ್ಯಾಲೆಂಡರ್ ಮೇಲೆ ಫೋಟೋ
ಸತ್ತಾಗ ಸರಕಾರಿ ಸಲಾಮು
ಕಲಾಗ್ರಾಮದಲ್ಲಿ ಸುಂದರ ಸಮಾಧಿ

ಈಗ ನೀವೇ ಹೇಳಿರಿ. ಸಮಸ್ಯೆ ಎಷ್ಟು ಸಂಕೀರ್ಣವಾಗಿದೆಯಲ್ಲವೇ? ಇನ್ನೂ ಒಂದು ಗಂಭೀರ ತೊಡಕಿದೆ. ನಮ್ಮ ಸಾಹಿತ್ಯ ಪರಂಪರೆಯಲ್ಲಿ 'ಕಾವ್ಯ', 'ಕವಿ' ಎಂಬ ಪದಗಳಿಗೆ ವ್ಯಾಪಕವಾದ ಅರ್ಥವಿದೆ. ಬರೆಯುವ ಪ್ರಕಾರ ಯಾವುದೇ ಇರಲಿ - ಅವೆಲ್ಲ ಕಾವ್ಯವೇ. (ನಮ್ಮ ಹಳ್ಳಿಯ ಕಡೆಗೆ ನಾಟಕದ 'ಮಾಸ್ತರು' ಇದ್ದ ಹಾಗೆ. ಮಾಸ್ತರರೇ ಎಲ್ಲಾ : ನಾಟಕಕಾರ, ನಿರ್ದೇಶಕ, ನಿರ್ಮಾಪಕ, ವ್ಯವಸ್ಥಾಪಕ, ಸಂಕಲನಕಾರ ಇತ್ಯಾದಿ) ಆದರೆ ಪರಿಸ್ಥಿತಿ ಈಗ ಹಾಗಿಲ್ಲ. ಕವಿ - ಕತೆಗಾರ - ಕಾದಂಬರಿಕಾರ - ಪ್ರಬಂಧಕಾರ - ವಿಮರ್ಶಕ - ಸಂಶೋಧಕ - ನಾಟಕಕಾರ - ಹೀಗೆ ಅಕ್ಷರ ಕುಟುಂಬ ಎಂಬುದು ಚಿನ್ನಾಚಿದ್ರಿಯಾಗಿದೆ.

ಈ ವರೆಗಿನ ರಾಷ್ಟ್ರಕವಿಗಳು - (ಮಂಜೇಶ್ವರ ಗೋವಿಂದ ಪೈ - ಕುವೆಂಪು - ಜಿ.ಎಸ್. ಎಸ್.) ಮೂವರೂ ಪ್ರಧಾನವಾಗಿ ಕಾವ್ಯ ರಚನಾಕಾರರು. ಉಳಿದ ಪ್ರಕಾರಗಳಲ್ಲಿ ಸಾಕಷ್ಟು ಕೈ-ಕಾಲು ಆಡಿಸಿದ್ದಾರೆ. ಅದರೆ ಅವರು ತಮ್ಮ ಬದುಕಿನ ಯಾವ ಹಂತದಲ್ಲೂ ಕಾವ್ಯ-ಕನ್ನಿಕೆಯ ಸಹವಾಸ ಮಾಡಿರದೇ ಇದ್ದಿದ್ದರೆ ಅವರಿಗೆ 'ರಾಷ್ಟ್ರಕವಿ' ಪ್ರಶಸ್ತಿ ದೊರಕುತ್ತಿತ್ತೇ? ಇದು ಕೇಳಲೇ ಬೇಕಾದ ಪ್ರಶ್ನೆ.

ಈ ಬಾಬತ್ತಿನಲ್ಲಿ ಇವತ್ತಿಲ್ಲ ನಾಳೆ ದಂಗೆಯಾಗುವ ಸಂಭವವಿದೆ. ಈ ಪದ್ಯ-ಗಿದ್ಯ ಬರೆಯುವ ಮಂದಿ ಏನು ಮೇಲಿಂದ ಇಳಿದು ಬಂದಿದ್ದಾರೆಯೇ? ಅಥವಾ ಭೂಮಿಯೊಳಗಿಂದ ಸ್ಪೆಷಲ್ಲಾಗಿ ಉದ್ಭವಿಸಿದ್ದಾರೆಯೇ? ಯಾಕೆ ಸದ್ಯದ ಚರ್ಚೆಗಳಲ್ಲಿ ಬರಿ 'ಕವಿ'ಗಳ ಹೆಸರೇ ಓಡಾಡಬೇಕು?

ನನಗನಿಸುತ್ತದೆ: ನಮ್ಮ ಅನಂತಮೂರ್ತಿಗಳಿಗೆ ಈ 'ರಾಷ್ಟ್ರಕವಿ' ಪ್ರಶಸ್ತಿಯ 'ಕಾವ್ಯ' - ಪಕ್ಷಪಾತದ ವಾಸನೆ ಏನಾದರೂ ಬಡಿದಿದ್ದರೆ ಜ್ಞಾನಪೀಠದ ಉಸಾಬರಿಗೇ ಹೋಗುತ್ತಿರಲಿಲ್ಲ. ಅವರು ಕತೆ -ಕಾದಂಬರಿಗಳಿಗೆ ಪ್ರಖ್ಯಾತರು : ಜೊತೆಗೆ ನಾಲ್ಕೈದು ನೂರು ಪುಟಗಳಷ್ಟು ಕವನಗಳನ್ನು ಬರೆದಿದ್ದರೂ, ಅವೆಲ್ಲ ನಮ್ಮ ಘನ ವಿಮರ್ಶಕರಿಗೆ ಕಟ್ ಕಟ್ ಮಾಡಿ ಒಂದರ ಕೆಳಗೊಂದು ಹೊಂದಿಸಿಟ್ಟ ಗದ್ಯದ ತುಣುಕುಗಳಾಗಿಯೇ ಕಂಡು, ಅವರನ್ನು ಕಾವ್ಯ ಲೋಕದ ಆಚೆಗೆ ತಳ್ಳಿ, 'ಆನು ದೇವಾ ಹೊರಗಣವನು' ಎನ್ನುವಂತೆ ಮಾಡಿಬಿಟ್ಟರು ಕೇವಲ 'ಕವಿ'ಯಾಗಿಯೇ ಉಳಿದುಬಿಟ್ಟಿದ್ದರೆ. ಜಿ. ಎಸ್. ಎಸ್. ಅವರಿಗೂ ಸೈಡು ಹೊಡೆದು 'ರಾಷ್ಟ್ರಕವಿ' ಅಗುತ್ತಿದ್ದರು. ಆದರೂ ನಾವು ನೀವು ಕಂಡಂತೆ ಅವರು ತಮ್ಮ ಕೊನೆಯ ದಿನಗಳನ್ನು ಸರಕಾರಿ ಆತಿಥ್ಯದಲ್ಲಿಯೇ ಕಳೆದು, ಇಂಗ್ಲಂಡಿನ 'ಪೋಯೆಟ್ ಲಾರಿಯಟ್' ಮಾದರಿಯ 'ಸರಕಾರೀ ಸಾಹಿತಿ' ಯಾಗಿಯೇ ಬದುಕಿ, ಅಧಿಕೃತ 'ರಾಷ್ಟ್ರಕವಿ'ಯ ಮಗ್ಗುಲಿಗೇ 'ಸಮಾನ -ಸಮಾಧಿಸ್ಥ'ರಾದದ್ದು ಅಂತಿಂಥ ಆರ್ಡಿನರಿ ಪವಾಡವೇನಲ್ಲ. ಇರಲಿ. ಇಲ್ಲದವರ ಬಗ್ಗೆ ಅಲ್ಲದ್ದು ಮಾತಾಡಬಾರದು.

*

ಇನ್ನೊಂದು ಆಂತರಿಕ ಪ್ರತಿಬಂಧಕವು ಅಧಿಕೃತವಾಗಿ ಮಾನದಂಡಗಳ ಪಟ್ಟಿಯಲ್ಲಿ ಇಲ್ಲ. ಅದು ಸಮಿತಿಯ ಸದಸ್ಯರಲ್ಲೊಬ್ಬರಾದ ಬಂಜಗೆರೆ ಜಯಪ್ರಕಾಶರು ಪತ್ರಿಕಾಗೋಷ್ಠಿಯಲ್ಲಿ ಆಡಿದರೆನ್ನಲಾದ ಮಾತು. ಅದೆಂದರೆ: 'ರಾಷ್ಟ್ರಕವಿಗಳು ಮಠಾಧೀಶರ ಕಾಲಿಗೆ ಬೀಳಬಾರದು'. ಇಂದು ಬಂಜಗೆರೆಯವರ ಅಧಿಕೃತ ವೈಯಕ್ತಿಕ ನಿಲುವು ಆಗಿದ್ದರೂ, ಅನಧಿಕೃತವಾಗಿ ಆಯ್ಕೆ ಸಮಿತಿಯ ನಿಲುವೂ ಆಗಿದ್ದರೆ ಈ ಮಾನದಂಡ ಎಲ್ಲೆಲ್ಲಿಗೋ ಹೋಗಿ ಯಾರ್ಯಾರಿಗೋ ಬಡಿಯುವ ಸಾಧ್ಯತೆ ಇದೆ.

ನಾವೆಲ್ಲ ಕಂಡಂತೆ, ಅಂತರಾಷ್ಟ್ರೀಯ-ರಾಷ್ಟ್ರೀಯ ನೆಲೆಯಲ್ಲಿ ಜಾಗತೀಕರಣ- ಖಾಸಗೀಕರಣ - ಉದಾರೀಕರಣ ಹೀಗೆ ತ್ರಿ-ಕರಣಗಳು ಕ್ರಿಯಾಶೀಲವಾಗಿರುವಂತೆ, ನಮ್ಮ ರಾಜ್ಯದಲ್ಲಿ ರಾಜಕಾರಣ - ಧರ್ಮಕಾರಣ - ಅಕ್ಷರಕಾರಣಗಳು ಈಗ ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಒಂದಕ್ಕೊಂದು ತಳಕು ಹಾಕಿಕೊಂಡಿವೆ. ಮಠಾಧೀಶರು ತಮ್ಮ ಸಾಮ್ರಾಜ್ಯವನ್ನು ರಾಜಕಾರಣ ಮತ್ತು ಅಕ್ಷರ ವಲಯಕ್ಕೆ ವಿಸ್ತರಿಸಿದ್ದಾರೆ. ಆಯಾ ಪ್ರದೇಶಗಳಲ್ಲಿ ನಡೆಯುವ ಸಾಹಿತ್ಯ-ಸಮ್ಮೇಳನಗಳನ್ನೇ ನೋಡಿರಿ. ರಾಜಕಾರಣಿಗಳ 'ಉಪಸ್ಥಿತಿ'ಗಿಂತ ಮಠಾಧೀಶರ 'ದಿವ್ಯಸಾನಿಧ್ಯ'ವೇ ಅಲ್ಲಿ ಕಣ್ಣು ಕುಕ್ಕುವುದು. ಅನೇಕ ಸಾಹಿತಿಗಳು ಈ

ಮಠಾಧೀಶರ ಪಾದಪದ್ಮಗಳಿಗೆ ಪೊಡಮಟ್ಟೇ ತಮ್ಮ ವಚನಾಮೃತ ಸಿಂಪಡಿಸುವುದು. ನನ್ನ ಅಧ್ಯಯನದ ಅನುಕೂಲಕ್ಕಾಗಿ ನಾನು 'ಪೊಡಮಟ್ಟು' ಸಾಹಿತಿಗಳು - 'ಅಡಮುಟ್ಟ' ಸಾಹಿತಿಗಳು ಎಂಬ ವರ್ಗೀಕರಣ ಮಾಡಿಕೊಂಡು, ತಾಲೂಕು ವಾರು ಪಟ್ಟಿ ತಯಾರಿಸಿದ್ದೇನೆ. ('ಅಡಮುಟ್ಟ' - ಅಂದರೆ ನಾನು ಮತ್ತು ನನ್ನಂಥವರು).

ವಿಷಯ ಯಾಕೋ ಹೊಳೆ ದಂಡೆಯ ಮೇಲಿನ ಕಳ್ಳ ಹುದುಲಿನ ಹಾಗೆ ಆಳವಾಗುತ್ತಲೇ ಇದೆ. ಎಲ್ಲಿಗೆ ಹೋಗಿ ಮುಟ್ಟುತ್ತದೋ ಈ ಹಂತದಲ್ಲಿ ನನಗೆ ಗೊತ್ತಿಲ್ಲ. ಕೊನೆಗೆ ಎಲ್ಲವನ್ನೂ ಅವರವರ ದರುಶನಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವುದು ವಾಚಕರ ಸಾಹಿತ್ಯಿಕ ಜವಾಬ್ದಾರಿ. ರಾಷ್ಟ್ರಕವಿ ಮಾನದಂಡಗಳ ಚರ್ಚೆ ಒತ್ತಟ್ಟಿಗಿಟ್ಟು ಹಾಲಿ ಜನರ ನಾಲಿಗೆಯ ಮೇಲೆ ಮತ್ತು ಪತ್ರಿಕೆಗಳ ಅಕ್ಷರಗಳ ಸಂದಿಗೊಂದಿಗಳಲ್ಲಿ ಹರಿದಾಡುತ್ತಿರುವ ಸಂಭವನೀಯ ಹೆಸರುಗಳನ್ನು ನೋಡೋಣ. ಅತ್ಯಂತ ವಸ್ತುನಿಷ್ಠವಾದ ಅಳತೆಗೋಲೆಂದರೆ ಸೀನಿಯಾರಿಟಿ.

ವಯೋಮಾನದ ಪ್ರಕಾರ ಸಾಹಿತ್ಯ ಲೋಕದಲ್ಲಿ ಮೊದಲ ಕೆಟಗರಿಯಲ್ಲಿ ಬರುವವರು- ಜಿ. ವೆಂಕಟಸುಬ್ಬಯ್ಯ, ಕಯ್ಯಾರ ಕಿಂಞಣ್ಣ ರೈ ಮತ್ತು ದೇ. ಜವರೇಗೌಡ ಮುಂತಾದವರು. (ಈ 'ಮುಂತಾದವರು' ಜಾಗೆಯಲ್ಲಿ ನಿಮ್ಮ ಮೆಚ್ಚಿನ ಹೆಸರು ಸೇರಿಸಬಹುದು. ಕಯ್ಯಾರರು ಮುಖ್ಯವಾಗಿ ಕವಿಯೇ. ಕಾಸರಗೋಡು ಕರ್ನಾಟಕಕ್ಕೆ ಸೇರಿದ್ದನ್ನು ನೋಡಿಯೇ ಕಣ್ಣು ಮುಚ್ಚುತ್ತೇನೆ - ಇದು ಅವರ ಶಪಥ. ಆದರೆ ನಮ್ಮ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ಇಂಥ ಗ್ಯಾರಂಟಿ ಕೊಡಲು ಸಾಧ್ಯವಿಲ್ಲ. ನಮ್ಮ ಕನ್ನಡ ಹೋರಾಟಗಾರರ ಪೈಕಿ ವಾಟಾಳರೊಬ್ಬರೇ ಆಗೊಮ್ಮೆ ಈಗೊಮ್ಮೆ ಕಾಸರಗೋಡಿಗೆ ವಿಸಿಟ್ ಕೊಡುತ್ತಾರೆಯೇ ಹೊರತು, ಉಳಿದವರ ಅಜಂಡಾದಲ್ಲಿ ಇರುವುದು ಕರ್ನಾಟಕ - ಮಹಾರಾಷ್ಟ್ರ ಗಡಿಯ ಬೆಳಗಾವಿ ಒಂದೇ. ಕಯ್ಯಾರರ ಪರವಾಗಿ ಅಲ್ಲಲ್ಲಿ ವಾಚಕರ ವಾಣಿ ಕೇಳುತ್ತಲಿವೆ. (ಅವರಿಗಾಗಿ 'ಕರ್ನಾಟಕ ರತ್ನ' ಎಂಬ ಇನ್ನೊಂದು ವಾರ್ಷಿಕ ಪದವಿಯ ಆಯ್ಕೆಯೂ ಇದೆ. ಅದನ್ನು ಪರಿಶೀಲಿಸಬಹುದು). ಅವರಿಗೆ ಸಾಕಷ್ಟು ವಯಸ್ಸೂ ಆಗಿಬಿಟ್ಟಿದೆ. ಇನ್ನು ಮೈಸೂರು ಸೀಮೆಯ ದಿಗ್ಗಜರಾದ ದೇಜಗೌ ಅವರು ದಿವಂಗತ ಸಾಯಿಬಾಬಾನ ಪ್ರೇರಣೆ ಇದ್ದರೆ 'ರಾಷ್ಟ್ರಕವಿ' ಪದವಿಗಾಗಿ ದಿಗ್ಗನೆ ಎದ್ದು ನಿಲ್ಲಬಹುದು. ನಮ್ಮ ಎಂ.ಜಿ.ಅರ್. ಅರಸ್ ಅವರು ದೇಜಗೌ ಅವರ ಚುಟುಕುಗಳ ಸಂಕಲನವನ್ನು ಪ್ರಕಟಿಸಿದ್ದಾರೆ. ಅದು ಸಾಲದು ಅಂದರೆ, "ನಾನು ಯೌವನದಲ್ಲಿ ಬರೆದ ಒಂದು ಮಹಾಕಾವ್ಯದ ಹಸ್ತಪ್ರತಿ ಕಳೆದು ಹೋಗಿತ್ತು. ಮೊನ್ನೆ ಮೊನ್ನೆ ಅಕಸ್ಮಾತ್ತಾಗಿ ಅದು ಸಿಕ್ಕಿದೆ" ಅಂತ ಸುದ್ದಿ ಸ್ಫೋಟಗೊಳಿಸಿ, ಸಿಪಿಕೆಯವರ ಚುಟುಕು - ಮುನ್ನುಡಿ ಹಾಗೂ ಮಳಲಿ ವಸಂತ ಕುಮಾರರ - (ಇವರಿಗೆ 'ಮರಳಿ ವಸಂತಕುಮಾರ' ಎಂದೂ ಕರೆಯುತ್ತಾರಂತೆ)- ದೀರ್ಘ ಮುನ್ನುಡಿಯೊಂದಿಗೆ ಆ ಮಹಾಕಾವ್ಯವನ್ನು ಆನೆ - ಅಂಬಾರಿಯ ಮೆರವಣಿಗೆ ಮೂಲಕ ಲೋಕಾರ್ಪಣೆ ಮಾಡಿದರೂ ಅಚ್ಚರಿಪಡ ಬೇಕಾಗಿಲ್ಲ. ಇನ್ನು 'ನಡೆದಾಡುವ ನಿಘಂಟು' ಎಂಬ ಹೊರೆಯನ್ನು ಹೊತ್ತುಕೊಂಡೇ ಇನ್ನೂ ಲುಟುಪುಟು ಓಡಾಡುತ್ತಿರುವ ಜಿ. ವೆಂಕಟಸುಬ್ಬಯ್ಯನವರು ಮೊದಲ ಇಬ್ಬರು ಹಿರಿಯರಿಗೆ ಪೈಪೋಟಿ

ಕೊಡಲಿಕ್ಕಿಲ್ಲ ಎಂದು ನನ್ನ ಅಂದಾಜು. ಕೇಳಿದರೆ ಅವರು 'ಕವಿ' 'ಕಾವ್ಯ' ಶಬ್ದಗಳಿಗೆ ಡಿಕ್ಷನರಿಯಲ್ಲಿರುವ ಮತ್ತು ಇರಬಹುದಾಗಿದ್ದ ಅನೇಕ ಅರ್ಥಗಳನ್ನು ಹೇಳಬಹುದೇ ಹೊರತು, ಶಬ್ದಗಳನ್ನು ಕೂಡಿಸಿ ಕವನ ಬರೆಯಲಾರರು. ('ಕರ್ನಾಟಕ ರತ್ನ' ಎಂಬ ಕನ್ಯಾರತ್ನದ ಎದುರಿಗಿನ ಸ್ವಯಂವರದ ಕ್ಯೂನಲ್ಲಿ ಇವರೂ ನಿಲ್ಲಬಹುದು. ಜೊತೆಗೆ ಪಾಪು ಕಂಪನಿ ಕೊಡಬಹುದು.)

*

ಇನ್ನು ಮುಂದಿನ ನಮ್ಮ ಪ್ರಯಾಣ ಕೇದಾರನಾಥದ ಪ್ರಯಾಣವಿದ್ದಂತೆ. ಯಾಕೆಂದರೆ 'ರಾಷ್ಟ್ರಕವಿ' ಪಟ್ಟಿಗಾಗಿ ಅನೇಕ ಭಂಗಿಗಳಲ್ಲಿ ಈಗಾಗಲೇ ಮೇಕಪ್ಪಿಗೆ ಸುರು ಮಾಡಿರುವವರು - ಸೀನಿಯಾರಿಟಿ ಪ್ರಕಾರವೇ - ಪ್ರಮುಖವಾಗಿ ಮೂವರಿದ್ದಾರೆ: ಚೆನ್ನವೀರ ಕಣವಿ, ಕೆ. ಎಸ್. ನಿಸಾರ್ ಅಹಮದ, ಚಂದ್ರಶೇಖರ ಕಂಬಾರ. ಆಮೇಲೆ ಮರೆತೇನೆಂಬ ಹೆದರಿಕೆ ಯಿಂದ ಮೊದಲೇ ಹೇಳಿಬಿಡುವೆ : ಸಮಕಾಲೀನ ಕನ್ನಡ ಸಾಹಿತ್ಯ ಸಂಚಯಕ್ಕೆ ಮೂವರದೂ ಅನನ್ಯ, ಅಮೂಲ್ಯ ಕೊಡುಗೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಇರುವುದು ಒಂದೇ ಮಾತು. (ವಂದೇ ಮಾತರಂ ಇದ್ದ ಹಾಗೆ...)

ಮೊದಲ ಸಾಲಿನಲ್ಲಿ ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಹೇಳಲಾಗುವ ಧಾರವಾಡ ನಗರದ ಚೆಂಬೆಳಕಿನ ಕವಿ ಕಣವಿಯವರ ಹೆಸರು ಇರುವುದು - ತರ್ಕಬದ್ಧ ಮತ್ತು ನ್ಯಾಯಬದ್ಧ. ಇತ್ತೀಚೆಗೆ ತಮ್ಮ ಅಕಾಲ ನಿಧನದಿಂದಾಗಿ ಈ ಸಮಸ್ಯೆ ಸೃಷ್ಟಿಸಿಹೊದ ಶಿವರುದ್ರಪ್ಪನವರೊಂದಿಗೆ ಕಣವಿ ಅವರದು ಅವಳಿ-ಜವಳಿ ಸಂಬಂಧ. ಒಂದು ಆತ್ಮ ಎರಡು ದೇಹವಿದ್ದಂತೆ. ಪಂಪ-ರನ್ನ, ಕುವೆಂಪು-ಬೇಂದ್ರೆ, ಮಾಸ್ತಿ-ಕಾರಂತ, ಅನಕೃ-ತರಾಸು, ಅಡಿಗ-ಶರ್ಮ ರೀತಿಯಲ್ಲಿ ಜಿ.ಎಸ್.ಎಸ್. - ಕಣವಿ ಒಂದು ಜೋಡುಪದ. ಒಂದೇ ಪದ ಹೇಳಿದರೆ ಅದು ಉಚ್ಚಾರ ದೋಷವೇ. ಇಬ್ಬರೂ ಹೇಳಿ-ಕೇಳಿ 'ಸಮನ್ವಯ' ಕವಿಗಳು. (ಇದೊಂದು ವ್ಯಂಗ್ಯ ಪದ ಎಂಬ ಸಂಶಯವೂ ಅವರಲ್ಲಿತ್ತು) ಇನ್ನೊಂದು ಸಮಾನ ಅಂಶವೆಂದರೆ : ಉತ್ತರ ಕರ್ನಾಟಕದಲ್ಲಿ ಬೇಂದ್ರೆ - ವಾರಸುದಾರರೆಂದು ಕಣವಿ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕುವೆಂಪು - ವಾರಸುದಾರರೆಂದು ಜಿ. ಎಸ್. ಎಸ್. ... ಅವರವರ ಅಭಿಮಾನಿಗಳಿಂದ ಪಡೆದ ಮೆಚ್ಚುಗೆಯ ಬಿರುದುಗಳು.

(ಈ ನಾಲ್ವರೂ ಮಹಾನುಭಾವರನ್ನು ಅವರೆಲ್ಲರಿಗಿಂತ ಕಿರಿಯನಾಗಿರುವ ನಾನು ಅನೇಕ ಸಂದರ್ಭಗಳಲ್ಲಿ, ಅನೇಕ ಅಂತರಗಳಲ್ಲಿ, ಅವತಾರಗಳಲ್ಲಿ ನೋಡಿರುವೆನಾದ್ದರಿಂದ ನನ್ನದೊಂದು ಸಣ್ಣ ತಕರಾರು. ಒಮ್ಮೆ ಯಾವುದೋ ಕಾರ್ಯಕ್ರಮದಲ್ಲಿ ನಗುನಗುತ್ತ ಅಡಿಬಿಟ್ಟಿದ್ದೆ.: ಈ ಹಕೀಕತ್ತು ಹೀಗೆ ಹೀಗೆ ಅಂತ ಬೇಂದ್ರೆ, ಕುವೆಂಪು ಅವರಿಗೆ ಮೊದಲೇ ಗೊತ್ತು ಇದ್ದಿದ್ದರೆ ಅವರು ಸಾಯುತ್ತಲೇ ಇರಲಿಲ್ಲ.)

ಹೀಗಾಗಿ ಜನಾಭಿಪ್ರಾಯದ ಮೂಲಕವೋ, ಆಯ್ಕೆ ಸಮಿತಿಯ ಸರ್ವಾನುಮತ ಅಥವಾ ಬಹುಮತದ ಮೂಲಕವೋ ಜಿ. ಎಸ್. ಎಸ್. ಖಾಲಿ ಮಾಡಿದ ಸೀಟಿನ ಮೇಲೆ ಕಣವಿ ಕುಂತರೆ ಯಾರಿಗೂ ಆಘಾತವಿರಲಿ, ಆಶ್ಚರ್ಯ ಕೂಡ ಆಗುವಂತಿಲ್ಲ.... ಆದರೆ ಒಂದೆರಡು ಸಾಹಿತ್ಯೇತರ ಎನ್ನಬಹುದಾದ ಆತಂಕಗಳಿವೆ. ಇವರಿಬ್ಬರ ಸಾಹಿತ್ಯಿಕ - ಸಾಂಸ್ಕೃತಿಕ ಮಹತ್ವದ ಬಗ್ಗೆ ನ-ಕಾರವನ್ನಾಗಲೀ, ಚ-ಕಾರವನ್ನಾಗಲೀ ಎತ್ತುವಂತಿಲ್ಲ. ಆದರೆ ಇಬ್ಬರೂ ಒಂದೇ ಸಮುದಾಯಕ್ಕೆ ಸೇರಿದವರು - ಅಂದರೆ 'ಲಿಂಗಾಯತ' ಸಮುದಾಯಕ್ಕೆ. ಏನು, ಇದು ಒಂದೇ ಜಾತಿಯವರಿಗೆ ಬರೆದು ಕೊಟ್ಟ ಗುತ್ತಿಗೆಯೇ? ಹಿಂದುಳಿದ ವರ್ಗದವರಿಲ್ಲವೇ? ದಲಿತರಿಲ್ಲವೇ? ಧಾರ್ಮಿಕ ಅಲ್ಪ ಸಂಖ್ಯಾತರಿಲ್ಲವೇ....? ಇತ್ಯಾದಿ ಪ್ರಶ್ನೆ ಏಳುವುದು ಸಹಜ. ಆಯ್ಕೆ ಸಮಿತಿಯ ಅಧ್ಯಕ್ಷ ಕೋಚೆ ಅವರ ಕೊರಳಿಗೇ ಈ ಉರುಳು ಬರಬಹುದು. (ನಮ್ಮ ರಾಮಲೀಲಾ ಖ್ಯಾತಿಯ ಗೋ-ಸ್ವಾಮಿ ಪ್ರಕರಣದ ವಿಚಾರಣೆಯಿಂದ ಅನೇಕ ನ್ಯಾಯಾಧೀಶರು ಹಿಂದೆ ಸರಿದ ಉದಾಹರಣೆ ನಮ್ಮ ಕಣ್ಣ ಮುಂದೆ ಇದೆ.)

ಈ ಹಂತದಲ್ಲಿ ಸೈಡ್‌ವಿಂಗಿನಿಂದ ರಂಗಮಧ್ಯಕ್ಕೆ ಹರಿದು ಬರುವ ಹೆಸರು - ಕೆ. ಎಸ್. ನಿಸಾರ್ ಅಹಮದ. ಕಣವಿ ಅವರಿಗೆ ಈಗ ಎಂಬತ್ತೇಳು. ನಿಸಾರರು ಮೊನ್ನೆ ಮೊನ್ನೆ ಎಂಬತ್ತನೆಯ ಜನ್ಮದಿನೋತ್ಸವ ಅದ್ದೂರಿಯಾಗಿ ಆಚರಿಸಿಕೊಂಡರು. ಮಾಜಿ ಕೇಂದ್ರ ಸಚಿವ ಮಹಾಕವಿ ವೀರಪ್ಪ ಮೊಯಿಲಿ ಯವರು, ಅದು ಇದು ಹೋಗಲಿ ಇಂಥ ನಿತ್ಯೋತ್ಸವದ ಕವಿಗೆ ಈ ವರೆಗೂ ಪಂಪ ಪ್ರಶಸ್ತಿ ಕೂಡ ಬಂದಿಲ್ಲ ಎಂಬ ಶೋಚನೀಯ ದುರಂತವನ್ನು ಸಾರ್ವಜನಿಕರ ಗಮನಕ್ಕೆ ತಂದರು. ಇದು ನಿಜ ಕೂಡ. ಅವರಿಗೆ ಬಂತು ಬಂತು ಎನ್ನುವಷ್ಟರಲ್ಲಿ ತಪ್ಪಿಹೋದ, ಎಂದೋ ಬರಬೇಕಾಗಿದ್ದ ಪ್ರಶಸ್ತಿ ಇದು. ಇತ್ತೀಚಿನ ಕೆಲವು ದಶಕಗಳ ಸಾಹಿತ್ಯಿಕ ರಾಜಕೀಯದ ಗೂಢ ರಹಸ್ಯಗಳನ್ನು ಬಲ್ಲವರಿಗೆ ಎಲ್ಲವೂ ಗೊತ್ತು. ನಿಸಾರರಿಗೂ ಅನೇಕರ ಮೇಲೆ ಆಧಾರ ಸಹಿತ ಅನುಮಾನವಿದೆ-'ಬಾಹ್ಯ ಶಕ್ತಿಗಳ ಕೈವಾಡ'ದ ಹಾಗೆ.

'ನಿಮ್ಮೊಡನಿದ್ದೂ ನಿಮ್ಮಂತಾಗದೆ' - ಶೀರ್ಷಿಕೆಯ ಅವರ ಪ್ರಖ್ಯಾತ ಕವನದ ವಾಚ್ಯಾರ್ಥಗಳಲ್ಲಿ ಮೆಟಫಿಜಿಕಲ್ ಆಯಾಮದ ಅನಾಥಪ್ರಜ್ಞೆ ಕಂಡು ಬಂದರೂ, ಒಳಗಿನ ಪದರಗಳಲ್ಲಿ ನಮ್ಮ ಸಾಹಿತ್ಯಿಕ ರಾಜಕೀಯದ ಅಳಲೂ ಇದೆ. ತಮ್ಮ ಗೇಯ ಕವನಗಳ ಮೂಲಕ ಅತ್ಯಂತ ಜನಪ್ರಿಯ ಕವಿ; ಕ್ಯಾಸೆಟ್ ಯುಗದ ಹರಿಕಾರ ಎಂಬ ಹೆಗ್ಗಳಿಕೆ. (ಹಾಗೆಯೇ 'ಸಮನ್ವಯ' ಪದದ ರೀತಿಯಲ್ಲಿ ಇದು ಹೀಗಳಿಕೆಯ ಶಬ್ದವೂ ಹೌದು.)

ಅವರೊಬ್ಬ ಧಾರ್ಮಿಕ ಅಲ್ಪಸಂಖ್ಯಾತ - (ಮುಸ್ಲಿಂ) - ಸಾಹಿತಿ ಎಂಬುದು ಅವರಿಗೆ ಪ್ಲಸ್ಸೂ. ಹೌದು; ಮೈನಸ್ಸೂ ಹೌದು. ಇದು ವಾಸ್ತವ ಸಂಗತಿ. ಯಾವ ಹಂತದಲ್ಲೂ ತಮ್ಮ ಮುಸ್ಲಿಂ ಸಂವೇದನೆಯನ್ನು, ಪ್ರಜ್ಞೆಯನ್ನು ತೋರಗೊಡದ ನಿಸಾರ್, ಬಹುಸಂಖ್ಯಾತ 'ಹಿಂದೂ' ಎಂದು ಕರೆಯಲ್ಪಡುವವರಿಗೆ ಸ್ವೀಕಾರಾರ್ಹರಾಗಲು ಕಾರಣ ಇನ್ನೂ ಒಂದಿದೆ. ಎಪ್ಪತ್ತರ

ದಶಕದ ಹೊತ್ತಿಗೆ ಸ್ಪಷ್ಟವಾದ ರೂಪ ಪಡೆದ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ದಟ್ಟವಾಗಿ ಕಾಣಿಸಿಕೊಂಡದ್ದು : 'ದಲಿತ' ಸಂವೇದನೆಯ ಜೊತೆಗೇ 'ಮುಸ್ಲಿಂ' ಸಂವೇದನೆ. ಅನೇಕ ಬರಹಗಾರರು ಆ ಸಮುದಾಯದ ಒಳಗಿನಿಂದಲೇ ಸ್ಫೋಟಗೊಂಡು ಖುಲ್ಲಂ ಖುಲ್ಲಾ ಆಗಿ ಒಳಗಣ ವೈರುಧ್ಯಗಳನ್ನು ಬಯಲಿಗಿಡತೊಡಗಿದರು. ಆದರೆ ಸಾಕಷ್ಟು 'ಜನಪ್ರಿಯ'ರಾಗಿದ್ದ ನಿಸಾರ್ ಇಂಥ ಯಾವ ಪ್ರಕ್ರಿಯೆಯಲ್ಲೂ ತೊಡಗಿಕೊಳ್ಳಲೇ ಇಲ್ಲ. ಯಾವುದೇ ಚಳುವಳಿ ಇರಲಿ, ಅದರಿಂದ ಇವರು ಯಾವಾಗಲೂ ಸದಾ ದೂರ. ಒಂದು ನಮೂನೆ 'ಸಮನ್ವಯ'. ಇದರ ಅರ್ಥ: ವ್ಯವಸ್ಥೆಯೊಂದಿಗೆ ಒಡಂಬಡಿಕೆ; ದೊರೆಯಬಹುದಾದ ಎಲ್ಲ ಸವಲತ್ತುಗಳನ್ನು ಪಡೆಯುವುದು; ಹೊಟ್ಟೆ ತುಂಬುತ್ತಲೇ ಇದ್ದರೂ ಮುಖದ ಮೇಲೆ ಸದಾ ಹಸಿವಿನ ಕಳೆ; ಸಾರ್ವಜನಿಕ ಅನುಕಂಪಕ್ಕಾಗಿ ಮೊರೆ. ಬೃಹತ್ತಾದ ಬರವಣಿಗೆಯ ಮೊತ್ತ ವಿದ್ದರೂ ಅಷ್ಟೇನೂ ಮೌಲಿಕ ಅನ್ನಿಸದಂಥದು-ನಿಸಾರ್ ಸಾಹಿತ್ಯ.

ಪಂಪ ಪ್ರಶಸ್ತಿ ಬಾರದೆ ಇದ್ದುದಕ್ಕೆ ಅವರಿಗೂ ಸಹಜ ತಳಮಳವಿದೆ. ಪ್ರತಿ ವರ್ಷವೂ ಆ ಪ್ರಶಸ್ತಿಯ ಆಯ್ಕೆಯ ಸಂದರ್ಭದಲ್ಲಿ ಕಾಣಬೇಕಾದವರನ್ನು ಕಂಡು, ಕ್ಷೇಮ -ಸಮಾಚಾರ ವಿಚಾರಿಸಿ, ಹಲೋ ಅಂತ ಹೇಳಿ ಬರುತ್ತಾರಂತೆ. ಅದೇನೂ ವಿಶೇಷವಲ್ಲ. ಬಹಳ ಜನ ಅದನ್ನೇ ಮಾಡುವುದು. ಅವರವರ ಶೈಲಿ ಅವರಿಗೆ. ನೇರವಾಗಿ ಯಾರೂ ಅರ್ಜಿ ಸಲ್ಲಿಸುವುದಿಲ್ಲ. ಲಾಬಿ ಮಾಡಲು ಖಾಸಾ ವಲಯವಿರುತ್ತದೆ. ಅಭಿಮಾನಿ ಓದುಗರಿರುತ್ತಾರೆ. ಪತ್ರಿಕೆಗಳ ವಾಚಕರ ವಾಣಿಗಳಂತೂ ಇದ್ದೇ ಇದೆ.

ನಿಸಾರರ ಸಮಕಾಲೀನನಾಗಿ ನಾನು ಅವರ ಸಾಹಿತ್ಯದ ನಿರಂತರ ಓದುಗ. ಜೊತೆಗೆ ನನಗೆ ಅನಿಸಿದ್ದನ್ನು ನನ್ನ ಮಾತಿನ ಶೈಲಿಯಲ್ಲಿ ಬರೆಯುತ್ತಲೇ ಬಂದಿರುವೆ. ಒಮ್ಮೆ ಅವರ ಅಭಿನಂದನಾ ಸಭೆಗೆ ಕರೆದಿದ್ದರು. ಮಾತಿನಲ್ಲಿ, 'ನಿಸಾರರ ಗೇಯ ಪದ್ಯಗಳು ಬಹಳ ಇಂಪು. ಆದರೆ ಅನೇಕ ದೀರ್ಘ ಕವನಗಳು ಚಿಕ್ಕ ಚಿಕ್ಕ ಲಲಿತ ಪ್ರಬಂಧಗಳಂತೆ ಕಾಣುತ್ತವೆ.' ಅಂತ 'ವಿಮರ್ಶಾತ್ಮಕ'ವಾಗಿ ಮಾತಾಡಿದೆ. ಪರಿಣಾಮ? ಮುಂದೆಂದೂ ನನ್ನನ್ನು ಅಂಥ ಕಾರ್ಯಕ್ರಮಕ್ಕೆ ಕರೆಯಲಿಲ್ಲ. ಅಷ್ಟೆ.

ನನ್ನ ಕಸಾಪ ಅವಧಿಯಲ್ಲಿ ಶಿವಮೊಗ್ಗೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಈ ಹಿರಿಯ ಗೆಳೆಯನನ್ನು ಅಧ್ಯಕ್ಷನನ್ನಾಗಿ ಮಾಡಲು ಸಂಪೂರ್ಣ ಬೆಂಬಲಿಸಿದವರು ಆಗಿನ ಕೋಶಾಧ್ಯಕ್ಷ - (ಮತ್ತು ಈಗಿನ ಕಸಾಪ ಅಧ್ಯಕ್ಷ) - ಪುಂಡಲೀಕ ಹಾಲಂಬಿ. ಸಾಮಾಜಿಕ ನ್ಯಾಯದ ಚಳುವಳಿಗಳ ಹಿನ್ನೆಲೆಯಲ್ಲಿ ಬೆಳೆದ ನನ್ನಂಥವನಿಗೆ ಇದೊಂದು ಸೈದ್ಧಾಂತಿಕ ಆಯ್ಕೆಯೂ ಆಗಿತ್ತು. ಆ ವರೆಗೆ ನಡೆದ ಎಪ್ಪತ್ತೆರಡು ಸಮ್ಮೇಳನಗಳ ಅಧ್ಯಕ್ಷರ ಪಟ್ಟಿಯಲ್ಲಿ ಒಂದೇ ಒಂದು ಮುಸ್ಲಿಂ ಹೆಸರು ಇರಲಿಲ್ಲ. ಕರ್ನಾಟಕದ ಸಂಸ್ಕೃತಿಗೆ ಅಪಾರ ಕೊಡುಗೆ ಈ ಸಮುದಾಯದ್ದು. ಶಿಶುನಾಳ ಶರೀಫ ಆದಿಯಾಗಿ ನೂರಾರು ಸಂತರು, ಸೂಫಿಗಳು ನಮಗೆ ವಂದ್ಯರು. ಆಧುನಿಕ ಸಾಹಿತ್ಯದಲ್ಲೂ ಗಣನೀಯ ಸಂಖ್ಯೆ ಇದೆ. ಅಕ್ಬರ ಆಲಿ, ಬಿ.ಎ. ಸನದಿ,

ನಿಸಾರ ಅಹಮದ - ನಮ್ಮ ಎದುರಿಗೇ ಇದ್ದಾರೆ. ನಮ್ಮ ಸಂಕಲ್ಪಕ್ಕೆ ಒಂದು ರೂಪ ಬಂತು. ಆದರೆ ರಾಜ್ಯದ ಆಡಳಿತದಲ್ಲಿ ಕೋಮುವಾದಿ ಶಕ್ತಿಗಳ ಪ್ರಾಬಲ್ಯ. ಸಮಾಜವಾದಿ ನಾಡಾದ ಶಿವಮೊಗ್ಗವಂತೂ ಕೇಸರಿಮಯ. ಇಂಥ ಪರಿಸ್ಥಿತಿಯಲ್ಲಿ ನಿಸಾರ್ ಆಯ್ಕೆ ಸುಲಭದ್ದಾಗಿರಲಿಲ್ಲ. ನನಗಿನ್ನೂ ನೆನಪಿದೆ. ಕಾರ್ಯಕಾರಿ ಸಮಿತಿಯ ಅಂದಿನ ಸಭೆಗೆ ಮುನ್ನ ಜಿಲ್ಲಾ ಕಸಾಪ ಅಧ್ಯಕ್ಷ ಡಿ. ಮಂಜುನಾಥ ಅವರ ಮೂಲಕ ನನಗೆ ಯಡಿಯೂರಪ್ಪ - ಈಶ್ವರಪ್ಪ - ಶಂಕರ ಮೂರ್ತಿ ಅವರ ಕೇಸರಿ ವಲಯದಿಂದ ಬಂದ ಸಂದೇಶ: ಸಮ್ಮೇಳನಕ್ಕೆ ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿರಿ - ಅದರೆ ಸಾಬರನ್ನು ಮಾತ್ರ ಬೇಡ... ಮುಂದೆ ಐದೇ ನಿಮಿಷದಲ್ಲಿ ನಾವು ನಿಸಾರ್ ಅಧ್ಯಕ್ಷತೆಯನ್ನು ಲೋಕಕ್ಕೆ ಜಾಹೀರು ಪಡಿಸಿದೆವು. ಅದೊಂದು ಜಿದ್ದಾಜಿದ್ದಿ ಯಾಗಿತ್ತು ನಮಗೆ.

ಮುಂದೆ ಮತ್ತೆ ಬೇರೆ ಬೇರೆ ಸಮಸ್ಯೆಗಳಿಂದಾಗಿ ಆ ಸಮ್ಮೇಳನ ಒಂದು ಸೈದ್ಧಾಂತಿಕ ಸಂಘರ್ಷವೇ ಅಗಿ, ಸಾಹಿತ್ಯ ಪರಿಷತ್ತಿನ ಸ್ವಾಯತ್ತತೆ ಸಾರ್ವಭೌಮತೆಯನ್ನು ಕಾಪಾಡಿಕೊಳ್ಳುವ ದಿಟ್ಟ ಪ್ರಯತ್ನವಾದದ್ದು ರಾಜಕೀಯ ಶಕ್ತಿಗಳಿಗೆ ತಕ್ಕ ಪಾಠವೇ ಅಗಿತ್ತು.

ನಿಸಾರ್ ಇದನ್ನೆಲ್ಲ ನಿರೀಕ್ಷಿಸಿರಲಿಲ್ಲ. ಅವರನ್ನು ಸಹಜವಾಗಿ, ಆದರೆ ಕೇವಲ ಸಾಹಿತ್ಯಿಕ ಸಾಧನೆ ಮೇಲೆ, ಅಧ್ಯಕ್ಷರನ್ನಾಗಿ ಮಾಡಬಹುದಾದ ಆರೋಗ್ಯಕರ ಸ್ಥಿತಿ ಆವತ್ತು ಇರಲಿಲ್ಲ. ಇವತ್ತೂ ಇಲ್ಲ. ಸಾಹಿತ್ಯೇತರ ಮಾನದಂಡಗಳೇ ಈಗ ನಿರ್ಣಾಯಕ. ಅಂದರೆ, ಒಂದು ನಿರ್ಲಕ್ಷಿತ, ಅಲ್ಪಸಂಖ್ಯಾತ ಸಮುದಾಯದ 'ಕೋಟಾ'ಕ್ಕೆ ಪ್ರಾತಿನಿಧ್ಯ ಎಂಬ ಮುಖ್ಯ ಲೆಕ್ಕಾಚಾರದಲ್ಲಿಯೇ ಇಂಥ ಆಯ್ಕೆಯಾಗುತ್ತಿರುವುದು ವಾಸ್ತವ. ಶಿವಮೊಗ್ಗ ಸಮ್ಮೇಳನದ ನಿಸಾರ, ಮಡಿಕೇರಿ ಸಮ್ಮೇಳನದ ನಾ. ಡಿಸೋಜ, ಶ್ರವಣ ಬೆಳಗೊಳ ಸಮ್ಮೇಳನದ ಸಿದ್ಧಲಿಂಗಯ್ಯ - ಒಂದು ನೆಲೆ ಯಲ್ಲಿ 'ಕೋಟಾಧ್ಯಕ್ಷ'ರೇ.

ಈಗ ಕೂಡ 'ರಾಷ್ಟ್ರಕವಿ' ಪ್ರಶಸ್ತಿಯ ರೇಸು ನಡೆದರೆ ನಿಸಾರರ ಬಗ್ಗೆ ಇದೇ ಮಾನದಂಡ ಮುಂಚೂಣಿಗೆ ಬರುವುದು ಒಂದು ಸಹಜ ಪ್ರಕ್ರಿಯೆ ಅಷ್ಟೆ.

ಇನ್ನೂ ಮೂರನೇ ಸಂಭಾವ್ಯ ಕ್ಯಾಂಡಿಡೇಟ್ ಚಂದ್ರಶೇಖರ ಕಂಬಾರರದು ಇನ್ನೂ ತೊಡಕು ತೊಡಕಿನ ಸಮಸ್ಯೆ. ಆಲ್ ಇಂಡಿಯಾ ಲೆವಲ್ಲಿನ ಜ್ಞಾನಪೀಠ ಪ್ರಶಸ್ತಿ ಪಡೆದವರು ರಾಜ್ಯಮಟ್ಟದ 'ರಾಷ್ಟ್ರಕವಿ' ಪ್ರಶಸ್ತಿಯ ಕನಸು ಕಾಣಬಹುದೇ? ಅದಕ್ಕಾಗಿ ಅದು ಇದು ಖಟಿಪಿಟಿ ಮಾಡಬಹುದೇ - ಎಂಬ ಪ್ರಶ್ನೆ ಮುಖ್ಯ. ಪ್ರಶಸ್ತಿ ಪ್ರಪಂಚದಲ್ಲಿ ಸಾಕಷ್ಟು ಅನುಭವ ಪಡೆದವರು ಡಾ. ಎಂ. ಎಂ. ಕಲಬುರ್ಗಿ. ಅವರು ಈ ಫೀಲ್ಡಿನಲ್ಲಿ 'ವಿಷಯ ತಜ್ಞ'ರು. ಅನೇಕ ಮುಖ್ಯ ಮುಖ್ಯ ಸರಕಾರಿ-ಅರೆಸರಕಾರಿ-ಖಾಸಗಿ ಪ್ರಶಸ್ತಿಗಳ ಆಯ್ಕೆ ಸಮಿತಿಗಳಲ್ಲಿದ್ದು ಕೊಂಡು ಕೆಲವರಿಗೆ ಕೊಡಿಸಿದ್ದಾರೆ; ಕೆಲವರಿಗೆ ತಪ್ಪಿಸಿದ್ದಾರೆ; ಈ ಗದ್ದಲದಲ್ಲಿ ತಾವೂ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡೂ ಇದ್ದಾರೆ. ಅವರ ಪ್ರಕಾರ ಕಂಬಾರರು ರಾಷ್ಟ್ರಕವಿ ಪ್ರಶಸ್ತಿಗೆ ಲಾಬಿ ಮಾಡಲು ಯಾವ ಪ್ರತಿಬಂಧವೂ ಇರಲಾರದು. ಅದೇ ಬೇರೆ-ಇದೇ ಬೇರೆ. (ಇದು

ಕಂಬಾರಿಗೆ ಸ್ವಲ್ಪ ಫೇವರೆಬಲ್ ಆಗಬಹುದಾದ ಪಾಯಿಂಟ್). ಇದೂ ಅಲ್ಲದೆ 'ದ್ವಿತೀಯ ರಾಷ್ಟ್ರಕವಿ ಕುವೆಂಪು ಅವರೂ ಜ್ಞಾನಪೀಠ ಪಡೆದವರೇ ಅಲ್ಲವೇ?' ಎಂಬ ಮಹತ್ವದ ಲಾ-ಪಾಯಿಂಟನ್ನೂ ಅವರು ಹಾಕಬಹುದು!

ಕಂಬಾರರಿಗೆ ಅಡ್ಡ ಬರಬಹುದಾದದ್ದು - (ನಾನು ಪ್ರಾರಂಭದಲ್ಲಿ ಸೂಚಿಸಿದಂತೆ) - ಬಂಜಗೆರೆ ಆಡಿದ ಅಡ್ಡಮಾತು: "ರಾಷ್ಟ್ರಕವಿ ಪಟ್ಟ ಬಯಸುವವರು ಮಠಾಧೀಶರಿಗೆ ಅಡ್ಡ ಬೀಳಬಾರದು". ಇದು ನುಂಗಲಾರದ ತುತ್ತೇ ಸರಿ. ಏಕೆಂದರೆ ಅಪ್ಪಟ ದೇಸೀ ಪರಂಪರೆಯ ಈ ಜಾನಪದ ಪ್ರತಿಭೆ ಬದುಕಿನುದ್ದಕ್ಕೂ ಕಂಡ ಕಂಡವರಿಗೆಲ್ಲ ಅಡ್ಡ ಬಿದ್ದೇ ಇಷ್ಟು ಉದ್ದ ಬೆಳೆದಿರುವುದು ಎಲ್ಲರಿಗೂ ಗೊತ್ತು. ಜ್ಞಾನಪೀಠ ಬಂದಾಗ ಪೇಜಾವರರಿಗೇ ಅಡ್ಡ ಬಿದ್ದದ್ದು ಫೋಟೋ ಸಮೇತ ಎಲ್ಲಾ ಪೇಪರಿನಲ್ಲೂ ಬಂದಿತ್ತು. ಪೇಜಾವರರು ಯತಿಗಳು. ಆದರೆ ಪತ್ರಿಕಾ ಲೋಕದ ಜಗದ್ಗುರುವಿನಂತಿರುವ ಪಾಟೀಲ ಪುಟ್ಟಪ್ಪನವರು, 'ಜ್ಞಾನಪೀಠಕ್ಕೆ ಕಂಬಾರ ಅಯೋಗ್ಯ' ಅಂತ ಪ್ರಕಟಣೆ ಕೊಟ್ಟು ಕೋಲಾಹಲ ಎಬ್ಬಿಸಿದಾಗ, ಕಂಬಾರರು ಆ ಜಗದ್ಗುರುವಿಗೆ ಹುಬ್ಬಳ್ಳಿ ರೈಲ್ವೇ ಸ್ಟೇಷನ್ ಪ್ಲಾಟ್ ಫಾರ್ಮಿನ ಮೇಲೆ ಅಡ್ಡಬಿದ್ದರಂತೆ! (ಆಮೇಲೆ ಅವರೂ ರಿಪೇರಿಯಾಗಿ ಆಶೀರ್ವಾದ ಮಾಡಿದರಂತೆ.)

ಕಂಬಾರ-ಕಲಬುರ್ಗಿ-ನಾನು-ಗಿರಡ್ಡಿ-ಪಟ್ಟಣಶೆಟ್ಟಿ : ನಾವೆಲ್ಲ ಕರ್ನಾಟಕ ಯೂನಿವರ್ಸಿಟಿಯಲ್ಲಿ ಒಂದೇ ವಾರಿಗೆಯ ಗೆಳೆಯರು. ಒಬ್ಬರೊಬ್ಬರ ಅಡ್ಡೆಲಬು ಬಲ್ಲವರು. ಹೀಗಾಗಿ ಬಯ್ದಾಡುತ್ತಲೇ ಬೆಳೆದಿದ್ದೇವೆ. "ಈ ಮಗ ಏನು ಮಾಡಿದರೂ ಪ್ರೀತಿಯಿಂದಲೇ ಮಾಡುತ್ತಾನೆ" - ಎಂಬ ಮೂಢನಂಬಿಕೆಯನ್ನು ನಾನು ಜಾಲ್ತಿಯಲ್ಲಿ ಇಟ್ಟಿರುವುದರಿಂದ ನಾನು ಏನು ಬರೆದರೂ ಇವರು ಗಂಭೀರವಾಗಿ ಪರಿಗಣಿಸಲಾರರು. (ಇದು ಆಪರೇಷನ್‌ಗೆ ಕೊಡುವ ಮುಂಚೆಯೇ ಅನೆಸ್ತಿಸಿಯಾ ಕೊಟ್ಟಹಾಗೆ. ಎಚ್ಚರಾದ ಮೇಲೆ ಉಂಟಾಗುವ ನೋವು-ನಲಿವುಗಳಿಗೆ ಅವರೇ ಜವಾಬ್ದಾರರು.)

ಇತ್ತೀಚಿನ ಒಂದೆರಡು ಪ್ರಸಂಗ ಹೇಳಿ ಈ ಉಪಾಖ್ಯಾನಕ್ಕೆ ಶುಭಂ ಹೇಳಲು ಪ್ರಯತ್ನಿಸುವೆ. ಹೋದ ವರ್ಷ ಒಂದು ದಿನ ಮೊಬೈಲಿಗೊಂದು ಕರೆ : "ಸರ್, ಒಂದು ರಾಜ್ಯದವರ ಒಂದು ದೊಡ್ಡ ಪ್ರಶಸ್ತಿಗೆ ನಿಮ್ಮ ಹೆಸರು ಸೂಚಿಸಬೇಕೂಂತ ಮಾಡೇನಿ, ಒಪ್ಪಿಗೆ ನೀಡ್ತಿರೇನು?"

ದನಿ ಮನು ಬಳಿಗಾರ ಅವರದು. ನನಗೆ ಅಚ್ಚರಿ : ಯಾವ ರಾಜ್ಯ? ಎಂಥ ಪ್ರಶಸ್ತಿ? ಏನು ಸಮಾಚಾರ? : ವಿವರ ಸಿಕ್ಕವು. ಭಾರತ ಒಕ್ಕೂಟದ ಒಂದು ರಾಜ್ಯ. ಅವರು ಆಲ್ ಇಂಡಿಯಾ ಮಟ್ಟದಲ್ಲಿ ಒಂದು ಪ್ರಶಸ್ತಿ ನೀಡುತ್ತಾರಂತೆ. ಐವತ್ತೊ-ಅರವತ್ತೊ ಸಾವಿರ. ಜೊತೆಗೆ ಯಥಾ ಪ್ರಕಾರ ಒಂದು ತಗಡು, ಫ್ಲೈಟ್ ಚಾರ್ಜು, ಆತಿಥ್ಯ ಇತ್ಯಾದಿ.

ನಾನು: ಅಲ್ರೀ ಹೆಸರು ಸೂಚಿಸಲಿಕ್ಕೆ ನಿಮ್ಮನ್ನು ಯಾಕ ಕೇಳಿದರು? - ಅಂತ ಕೇಳಿದಾಗ ಅವರು ಕೊಟ್ಟ ವಿವರ ಕನ್ನಡ ಸಾರಸ್ವತ ಲೋಕಕ್ಕೆ ತಿಳಿಯಬೇಕು.

ಸದರೀ ರಾಜ್ಯ ಸರಕಾರದವರು ಸದರೀ ಪ್ರಶಸ್ತಿಗೆ ಕನ್ನಡದ ಒಬ್ಬ ಪ್ರಮುಖ ಸಾಹಿತಿಯ ಹೆಸರು ಶಿಫಾರಸ್ಸು ಮಾಡಲು ಕೇಳಿಕೊಂಡದ್ದು - ಕನ್ನಡದ ಒಬ್ಬ ಹಾಲೀ ಜ್ಞಾನಪೀಠ ಪ್ರಶಸ್ತಿಧಾರಕರಿಗೆ. ಅವರು ತಕ್ಷಣ ಹೇಳಿದ್ದು : ವೈ ನಾಟ್ ಐ? (Why not I)

ಸಾರ್, ತಮಗೆ ಈಗಾಗಲೇ ಜ್ಞಾನಪೀಠ ಬಂದಿದೆಯಲ್ಲ! ಬೇರೆಯವರ ಹೆಸರು ಸೂಚಿಸುವಿರಾ? ಅಂದಿದ್ದಕ್ಕೆ ಜ್ಞಾನಪೀಠಿ ಉತ್ತರಿಸಲೇ ಇಲ್ಲವಂತೆ.

ಅವರು ಯಾರಂತ ನಿಮಗೆ ಹೇಳಬೇಕಾಗಿಲ್ಲ. ಆ ರಾಜ್ಯದವರು ಅನಿವಾರ್ಯವಾಗಿ ಮನು ಬಳಿಗಾರ ಅವರನ್ನು ಸಂಪರ್ಕಿಸಿದ್ದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದವರು ಬಳಿಗಾರ.

ಮನು ನಮ್ಮೂರ ಕಡೆಯವರು. ಅಲ್ಲದೆ ನಮ್ಮದು ಧಾರವಾಡ ಕರ್ನಾಟಕ ಕಾಲೇಜಿನ (ಕೆಸಿಡಿ) ಬಳಗದ ಬಳ್ಳಿ. 'ನಾನು ಚಂಪಾ ಅವರ ಶಿಷ್ಯೆಯ ಶಿಷ್ಯ' ಅಂತಲೇ ಅವರು ಹೇಳುವುದು. (ಈ ಶಿಷ್ಯೆ-ವೀಣಾ). ವಿಶ್ವಾಸದಿಂದ ಗೋಗರೆದರು : "ಸರ್ ಇದನ್ನ ಸಂಕ್ರಮಣದಾಗ ಬರದ ಗಿರದೀರಿ ಮತ್ತ".

ನನಗೆ ನಮ್ಮ ಸಾಹಿತ್ಯಿಕ - ಸಾಂಸ್ಕೃತಿಕ ಲೋಕದ ಗುಪ್ತಾತಿಗುಪ್ತ ವಿದ್ಯಮಾನಗಳು ಅನೇಕ ಖಾಸಗೀ ಚಾನಲ್‌ಗಳ ಮೂಲಕ - (ಕೆಲವು ನಂಬಲರ್ಹ ಹಲವು ನಂಬಲನರ್ಹ)- ಲಭ್ಯವಾಗುತ್ತವೆ. ಹೇಳುವುದೆಲ್ಲ ಹೇಳಿ, "ಸಂಕ್ರಮಣದಾಗ ಬರದ - ಗಿರದೀರ್ಯಪ ಮತ್ತ!" ಎಂಬುದು ಮಾಮೂಲಿ. ಅದೇನು 'ಬರೆಯಲಿ' ಎಂಬ ಕೋರಿಕೆಯೋ 'ಬರೆದಾರು' ಎಂಬ ಆತಂಕವೋ - ಗೊತ್ತಾಗುವುದೇ ಇಲ್ಲ. ಪೋಲೀಸ ಸ್ಟೇಶನ್ನಿಗೆ ಬರುವ ಸುಳ್ಳು ಕರೆಗಳ ಹಾಗೆ, ಬೇನಾಮಿ ಪತ್ರಗಳ ಹಾಗೆ ಇವು. ಯಾವುದನ್ನೂ ಇಗ್ನೋರ್ ಮಾಡುವಂತಿಲ್ಲ.

ಸಹಜ ಇಂಗ್ಲಿಷ್ ನುಡಿಗಟ್ಟು ಬಲ್ಲವರಿಗೆ ಗೊತ್ತು : Why not I ಇದು ತಪ್ಪು. ಸರಿಯಾದ ಪ್ರಯೋಗ, Why not me ಎಂಬುದು. ಆದರೆ ಸದರೀ ಜ್ಞಾನಪೀಠಿಯ ಇಂಗ್ಲಿಷ್ ಸ್ವಲ್ಪ ತುಟ್ಟಿ. ಈ ಕೀಳರಿಮೆಯೂ ಅವರಿಗಿದೆ.

ತಾತ್ಪರ್ಯ ಇಷ್ಟೆ : 'ರಾಷ್ಟ್ರಕವಿ' ಪ್ರಶಸ್ತಿ ಬೇಡ ಎಂಬ ಪರಿಸ್ಥಿತಿಯಲ್ಲಿ ನಮ್ಮ ಕಂಬಾರ ಇಲ್ಲ. ಇತ್ತೀಚೆಗೆ ದೇವನೂರು - ಹಾಲಂಬಿ - ಸಿದ್ಧಲಿಂಗಯ್ಯ ಮುಖ್ಯ ಪಾತ್ರಧಾರಿಗಳಾಗಿದ್ದ ಮಹಾ ಪ್ರಹಸನದಲ್ಲಿ,"ಶ್ರವಣಬೊಳಗೊಳ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ನನಗೇಕೆ ನೀಡಬಾರದು? ವೈ ನಾಟ್ ಐ?" ಅಂತ ಕಂಬಾರರು ಬಾಯಿ ಬಿಟ್ಟು ಕೇಳಿದ್ದರಂತೆ : ಇದು ಕ.ಸಾ.ಪ. ದ ಹಾಲಿ ಪದಾಧಿಕಾರಿಯೊಬ್ಬರು ನನಗೆ ಹೇಳಿದ ಹಕೀಕತ್ತು.

*

ಅಂತೂ ಇಂತೂ ರಾಷ್ಟ್ರಕವಿ ಆಯ್ಕೆಯ ಪುರಾಣ ಇತ್ತೀಚಿನ ಬಸವ-ಪುರಸ್ಕಾರ ಪುರಾಣಕ್ಕಿಂತಲೂ ಗೊಂದಲಮಯವಾಗುವ ವಾತಾವರಣವಿದೆ. ಹಂಪನಾ ಜೊತೆ ನಡೆದ ದೀರ್ಘ ಮಾತುಕತೆಯಲ್ಲಿ ಪ್ರಸ್ತಾಪಿತವಾದ ಕೆಲವು ಅಂಶಗಳನ್ನು ಬಳಸಿಕೊಂಡು ಅವರು ಮರುದಿನವೇ ಪತ್ರಿಕೆಗಳಿಗೆ ಬರೆದುಬಿಟ್ಟರು. ಸದ್ಯ ಸುತ್ತಲೂ ಅಂಥ ಯೋಗ್ಯ ವ್ಯಕ್ತಿ ಕಾಣಿಸುತ್ತಿಲ್ಲ

ಆಯ್ಕೆ ಪ್ರಕ್ರಿಯೆ ಸ್ಥಗಿತಗೊಳಿಸಿ. ಕೆಲವು ವರ್ಷ ಕಾಯುವುದು ಒಳ್ಳೆಯದೆಂದು ಅವರ ಅಭಿಪ್ರಾಯ. ಅಸೆಂಬ್ಲಿಯನ್ನು ಡಿಸಾಲ್ವ ಮಾಡದೆ ಅದನ್ನು ಸಸ್ಪೆಂಡೆಡ್ ಅನಿಮೇಶನ್‌ದಲ್ಲಿ ಇಡುವುದು. ಇಂದೇ ಆಗಲಿ, ಮುಂದೇ ಆಗಲಿ, ಬರುವ ಮುಖ್ಯ ತೊಡಕು: ಆಯ್ಕೆಯಾದವರ ಆಯುಷ್ಯ ಮತ್ತು ಆರೋಗ್ಯದ್ದು. ಎರಡೋ ಮೂರೋ ನಾಲ್ಕೋ ಐದೋ ವರ್ಷಕ್ಕೆ ಮತ್ತೆ 'ಆಯ್ಕೆ' ಮಾಡುವ ಪ್ರಸಂಗ ಬಂದರೆ? ಏನೇನೋ ಕಟಿಪಿಟಿ ಮಾಡಿ ಕನ್ಯಾ ಹುಡುಕಿ ಮದುವೆ ಮಾಡಿಕೊಟ್ಟ ಮೇಲೆ ಅವಳು ಮುತ್ತೈದೆ ಸಾವು ಪಡೆದರೆ ಹೇಗೆ? ಹಂಪನಾ ಸಲಹೆಯಲ್ಲಿ ಮತ್ತೂ ಒಂದು ಸೂಚನೆ ಇದ್ದಂತಿದೆ. ಹಂಪನಾ, ಪ್ರಸಂಗ ಬಂದಾಗ ಇರಲಿ ಅಂತ ಒಂದು ಮಹಾಕಾವ್ಯವನ್ನು ಬರೆದಿದ್ದಾರೆ. ಮುಂದಿನ ಅನಿರ್ದಿಷ್ಟ ಅವಧಿಯ ಮಧ್ಯಂತರದಲ್ಲಿ ಇನ್ನೂ ೪-೫ ಮಹಾಕಾವ್ಯ ಬರೆದರೆ. ಅವರೇ 'ವೈ ನಾಟ್ ಐ' ಅಂತ ಕಣಕ್ಕೆ ಯಾಕೆ ಧುಮುಕ ಬಾರದು?

ಇನ್ನೂ ಒಂದು ಮಜಾ ಕೇಳಿರಿ.

ನಮ್ಮ ಕಿಟ್ಟೂನ ಫೋನ್ : 'ಅಲ್ಲೋ ಚಂಪಾ, ಪೇಪರು ನೋಡೀ ಏನು?'

ನಾನು : 'ಏನೋ ಸಮಾಚಾರ?'... ರಾಷ್ಟ್ರಕವಿಯ ಮಾನದಂಡಗಳನ್ನು ಒಂದೊಂದಾಗಿ ಓದಿದ. ನಾನು ಹೂಂ ಹೂಂ ಅನ್ನುತ್ತಲೇ ಇದ್ದೆ. ಅವನು : "ಅಲ್ಲೋ, ಇದರಾಗ ಶೇಕಡಾ ಅರವತ್ತರಷ್ಟು ನಿನಗ ಅಪ್ಲಾಯ್ ಆಗ್ತಾವಲ್ಲೋ!" ಅಂದ.

ನನಗೆ ಆಶ್ಚರ್ಯ. ನನಗಷ್ಟೇ ಗೊತ್ತಿದೆ ಅಂದುಕೊಂಡ ಸತ್ಯ ಈ ಮಗನಿಗೆ ಹೇಗೆ ಗೊತ್ತಾಯಿತು-ಅಂತ. ಪಂಪ-ಕುವೆಂಪು-ವೈಚಾರಿಕತೆ-ಏಕೀಕರಣ - ಕನ್ನಡ ಚಳುವಳಿ-ಒಳನಾಡು-ಹೊರನಾಡು - ಗಡಿನಾಡು - ಸಾಹಿತ್ಯ ಸೃಷ್ಟಿಯ ಸಮೃದ್ಧಿ - ವೈವಿಧ್ಯ-ಮೂಢ ನಂಬಿಕೆ ವಿರೋಧ-ಕೋಮು ಸೌಹಾರ್ದ - ಭಾವೈಕ್ಯತೆ : ಇವೆಲ್ಲ ನನ್ನ ಬದುಕು ಬರಹದ ವ್ಯಾಪ್ತಿಯಲ್ಲೂ ಬರುವ ಶಬ್ದಗಳೇ. ಬಂಜಗೆರೆ ಅಳತೆಗೋಲಂತೂ ನನಗಾಗಿಯೇ ಇದ್ದಂತಿದೆ. ಅಲ್ಲದೆ ಸಂಭಾವ್ಯರ ಪಟ್ಟಿಯನ್ನು ಸೀನಿಯಾರಿಟಿ ಪ್ರಕಾರ ಇನ್ನು ಸ್ವಲ್ಪ ಉದ್ದೀಕರಣ ಮಾಡಿದರೆ ಮೊದಲ ಹತ್ತು ಹೆಸರುಗಳಲ್ಲಿ ನನ್ನದೂ ಸೇರುವುದು ಗ್ಯಾರಂಟಿ.

ಕಿಟ್ಟು ಹುರುಪಿನಿಂದ 'ಸರಕಾರಕ್ಕೆ ನಿನ್ನ ಹೆಸರೇ ಪ್ರಪೋಜ್ ಮಾಡ್ತೀನಿ' ಅಂದ. 'ಒಗೆಂಗ ಒಗೀ ಒಂದು ಕಲ್ಲು, ಅವನೌನ!!' ಅಂತ ನಾನೂ ಹೇಳಿರುವೆ.

ಪ್ರಿಯ ಕನ್ನಡಿಗರೇ, ಅಂತೂ ಕನ್ನಡಾಂಬೆಯ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ.

●

ಕಾವ್ಯ

ಮೂರು ಕವನಗಳು*

• ಬಿ. ಆರ್. ಲಕ್ಷ್ಮಣರಾವ್

ಎಲ್ಲಿಗೆ ಬಂತು ಸಂಗಯ್ಯ

ಬ್ಯಾಂಕಾಕಿನಲ್ಲಿದೆ
ಗೊತ್ತಿದೆ
ನಮ್ಮ ರಾಮಾಯಣ

ಪಟಾಯಾದಲ್ಲಿದೆ
ಮಹಾಭಾರತವೂ ಇದೆ
ಗೊತ್ತ?

ವಾಕಿಂಗ್ ಸ್ಟ್ರೀಟಿನಲ್ಲಿ ಸಂಜೆ ಅಡ್ಡಾಡಿ
ನೂರು ಅಪ್ಸರೆಯರನ್ನು ಕಣ್ಣಲ್ಲೇ ಜಾಲಾಡಿ
ಒಂದು ಪೊಗದಸ್ತಾದ ಮಾಲನ್ನು ಆಯ್ಕೆಮಾಡಿ

ವಸತಿಗೆ ಕರೆದುತಂದು
ಮಜಾ ಉಡಾಯಿಸಲೆಂದು

ಅಣಿಗೊಂಡ
ನನ್ನ ಭಾರತೀಯ ಗೆಳೆಯ
ಕಂಡದ್ದು

ಒಬ್ಬ ಆಧುನಿಕ
ಶಾಪಗ್ರಸ್ತ
ಬೃಹನ್ನಳೆಯ!

ಎಷ್ಟಾದರೆ ಸಾಕು

ಕಾನ್ವೆಂಟ್ ಸೇರಲು ಮಗು, ಡೊನೇಷನ್
ಎಷ್ಟಾದರೆ ಸಾಕು?
ಮೆಡಿಕಲ್ ಸೀಟು ಗಿಟ್ಟಲು ಮಾರ್ಕ್ಸ್
ಎಷ್ಟಾದರೆ ಸಾಕು?

* ನನ್ನ ಮಟ್ಟಿಗೆ (೨೦೧೪) ಸಂಕಲನದಿಂದ

ಕನ್ಯಾಸೆರೆ ಹರಿಯಲು ವರದಕ್ಷಿಣೆ
ಎಷ್ಟಾದರೆ ಸಾಕು?
ವಿವಾಹ ಬಂಧನ ಮುರಿಯಲು ಕಾರಣ
ಎಷ್ಟಾದರೆ ಸಾಕು?

ಬೇಕುಬೇಡದ್ದು ಕೊಳ್ಳಲು ಗಿಂಬಳ
ಎಷ್ಟಾದರೆ ಸಾಕು?
ಸರ್ಕಾರ ಉರುಳಿಸಲು ಬೆಂಬಲ
ಎಷ್ಟಾದರೆ ಸಾಕು?

ರಸ್ತೆಗುಂಡಿಗಳ ಮುಚ್ಚಲು ನರಬಲಿ
ಎಷ್ಟಾದರೆ ಸಾಕು?
ಭ್ರಷ್ಟಾಚಾರವ ಗುಡಿಸಲು ಪೊರಕೆ
ಎಷ್ಟಾದರೆ ಸಾಕು?

ರೈತರ ಆತ್ಮಹತ್ಯೆಗೆ ಸಾಲ
ಎಷ್ಟಾದರೆ ಸಾಕು?
ಸಿಡಿದೇಳಲು ಬಡಬಗ್ಗರ ಬವಣೆ
ಎಷ್ಟಾದರೆ ಸಾಕು?

ಜಿಜ್ಞಾಸೆ

ಹರಿ ಮತ್ತು ಗಿರಿ, ಅವಳಿ, ಜವಳಿ,
ಒಬ್ಬರಿನ್ನೊಬ್ಬರು ತದ್ರೂಪಿ;
ಕಂಡವರಿಗೆಲ್ಲ ಅಚ್ಚರಿಯೋ ಅಚ್ಚರಿ!
ಇದೆಂಥ ಜೆರಾಕ್ಸ್ ಕಾಪಿ!

ದುರ್ದೈವದಿಂದ, ಪುಟ್ಟಮಕ್ಕಳಾಗಿದ್ದಾಗಲೇ
ಇವರಲ್ಲೊಬ್ಬ ಮೃತ ಪಟ್ಟ;
ಸತ್ತವನ್ಯಾರು? ಹರಿಯೋ? ಗಿರಿಯೋ?
ಸ್ವತಃ ಹೆತ್ತವರಿಗೂ ಅಸ್ಪಷ್ಟ.

ಹರಿಯೇ ಇರಬೇಕೆಂದು ಹೇಗೋ ಅಂದಾಜಿಸಿ
ಉಳಿದವ ಗಿರಿ ಎಂದುಕೊಂಡರು
ಹೀಗಾಗಿ ಉಳಿದವನ ಪಾಲಾಗಿ ಉಳಿಯಿತು
ಗಿರಿ ಎಂಬ ಹೆಸರು

ಗಿರಿ ಕನ್ನಡಿ ನೋಡಿಕೊಂಡಾಗಲೆಲ್ಲ ಅಲ್ಲಿ
ಕಂಡಂತಾಗುತ್ತಿತ್ತು ಹರಿ;
ಹರಿ ಹೇಳುತ್ತಿದ್ದ, 'ಲೋ ಗಿರಿ,
ಚೆನ್ನಾಗಿ ಓದು, ಬರಿ'

ತಪ್ಪು ಮಾಡಿದಾಗ ಗಿರಿ, ಅನ್ನುತ್ತಿದ್ದ ಹರಿ,
'ಅದು ತಪ್ಪಲ್ಲವೇನೋ ಮರಿ?'
ಗಿರಿ ಅವನ ಮಾತಿಗೆ ಹಾಕುತ್ತಿದ್ದ ಕತ್ತರಿ,
'ಈ ಕಾಲಕ್ಕೆ ಇದೇ ಸರಿ'.

ಮುಂದೆ ಗಿರಿ ಖ್ಯಾತ ಕಲಾವಿದನಾಗಿ ಬೆಳೆದ;
ಪಡೆದ ಹಲವು ಪ್ರಶಸ್ತಿಗಳ ಗರಿ;
ಆದರೆ ಅವನ ಮನಸ್ಸನ್ನು ಒಳಗೇ ಕೊರೆಯುತ್ತಿತ್ತು
ಸದಾ ಒಂದು ಕಿರಿಕಿರಿ

'ನಾನು ಗಿರಿಯೇ ಆಗಿದ್ದರೆ ಸರಿ, ಹಾಗಲ್ಲದೆ
ನಾ ನಿಜಕ್ಕೂ ಆಗಿದ್ದರೆ ಹರಿ,
ಕಷ್ಟ ಪಟ್ಟು ನಾ ಗಳಿಸಿದ ಈ ಹೆಸರು, ಪ್ರತಿಷ್ಠೆ,
ನನಗೇ ಇಲ್ಲವಾಯ್ತಲ್ಲರಿ!'

ಹರಿಯ ಈ ಪರಿಯ ಕಿರಿಕಿರಿಯ ಪರಿಹರಿಸಲು
ನಿರ್ಧರಿಸಿದ ಕೊನೆಗೆ ಗಿರಿ;
ಕನ್ನಡಿಯ ಮುಂದೆ ಹರಿಗೆದುರಾಗಿ ನಿಂತು
ಮಾಡಿಕೊಂಡ ಹರಾಕಿರಿ

●

ದೊಡ್ಡವಳಾದೆನೆ.....

● ಅನಿತ ಮಂಗಲ

೧

ಶಾಲೆ ಬಿಟ್ಟೊಡನೆ
ಗೆಳೆಯ ಗೆಳತಿಯರೊಡನೆ
ಕುಂಟೆಬಿಲ್ಲೆ ಮರಕೋತಿಯಾಡಿ
ಕಣ್ಣಾಮುಚ್ಚೆ ಕಾಡೇಗೂಡೆ ಎಂದು ಸಂಭ್ರಮಿಸಿ
ಗೂಡು ಸೇರಿದೆ ನಾನು

೨

ಉಟ್ಟ ಬಟ್ಟೆಯಲಿ ಕೆಂಬಣ್ಣದ ಕಲೆಯ ಕಂಡೊಡನೆ
ಕಟ್ಟಳೆಯ ಕಟಕಟೆಯಲಿ ನಿಲ್ಲಿಸಿ ಮೆಲ್ಲನೆ ಉಸಿರಿದರು
'ನೀನಿನ್ನು ದೊಡ್ಡವಳಾದೆ'
ಗಾಬರಿಯಿಂದ ಬೆಚ್ಚಿ ಬಿದ್ದೆ!
ನಾ... ಇನ್ನೂ ಚಿಕ್ಕವಳಿದ್ದೆ!
ಈಗಷ್ಟೇ ದೊಡ್ಡವಳಾದೆನೇ?
ಮತ್ತೆ ಅಣ್ಣಾ...? ಅಜ್ಜಿ, ಅಮ್ಮ, ಅಪ್ಪ
ಎಲ್ಲರೂ ದೊಡ್ಡವರಲ್ಲವೆ?
ಪ್ರಶ್ನೆಗಳ ರೆಕ್ಕೆಗತ್ತರಿಸಿ ಕತ್ತಲ ಸೆರಗಿನಲಿ ಬಂಧಿಸಿದರು.

೩

ಹಸಿರು ಚಪ್ಪರದಡಿಯ ನಿರಾಸೆಯ ಗೂಡಿನೊಳಗೆ
ಬಣ್ಣದ ಆಸೆಗಳೆಷ್ಟೋ ಬೆಳಕು ಕಾಣದೆ ಮುಕ್ಕಾಗಿವೆ
ಆಲವಾಗುವ ಅಜ್ಜ ಅಪ್ಪಂದಿರ ಕಟ್ಟಲೆಯ ಕಟ್ಟುಗಳನು
ಕೆಡವಿ ಬಂದರು ಅವ್ವ, ಅಜ್ಜಿಯವರು.

೪

ಎಳ್ಳುಂಡೆ, ತಂಬಿಟ್ಟುಗಳ ಸವಿದು ಸಂಭ್ರಮಿಸಿದ
ಬಂಧುಗಳೆದುರು ಗೊಂಬೆಯಾದೆ
ಎತ್ತಿದ ಆರತಿಯ ಬೆಳಕಿನಲಿ ಕಣ್ಣನ್ನಿಟ್ಟು
ಕತ್ತಲೆಯ ಸರಹದ್ದ ದಾಟುತ್ತಿದ್ದೇನೆ ನಾನು.

ಡಾ. ಕೆ. ರಾಘವೇಂದ್ರ ರಾವ ನಡೆದ ದಾರಿ

● ಸಿ. ಎನ್. ರಾಮಚಂದ್ರನ್

೧೯೮೫-೮೬ ಇರಬಹುದು. ಆಗ ರಾಘವೇಂದ್ರ ರಾವ್ ಮಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾಗಿದ್ದರು. ನಾನು ಇಂಗ್ಲೀಷ್ ವಿಭಾಗದಲ್ಲಿ ರೀಡರ್ ಮತ್ತು ಮುಖ್ಯಸ್ಥನಾಗಿದ್ದೆ. ಸರದಿಯ ಪ್ರಕಾರ ರಾಘವೇಂದ್ರ ರಾವ್ ಆಗ ವಿವಿಯ ಸಿಂಡಿಕೇಟ್ ಸದಸ್ಯರಾಗಿದ್ದರು. ಒಮ್ಮೆ ಸಿಂಡಿಕೇಟ್ ಸಭೆಯ ನಂತರ ಅವರು ಸಿಕ್ಕಿದಾಗ ಸಭೆಯ ಹೈಲೈಟ್ಸ್ ಏನು ಎಂದು ಅವರನ್ನು ಕೇಳಿದೆ; 'ಓ ಏನೇನೋ ಚರ್ಚೆ ಆಯ್ತು. ಐ ಡೋಂಟ್ ರಿಮೆಂಬರ್' ಎಂದರು. ಏನೋ ತುಂಬಾ ಕಾನ್‌ಫಿಡೆನ್ಶಿಯಲ್ ವಿಷಯಗಳಿರಬಹುದೆಂದು 'ಇರಲಿ - ಸೂಕ್ಷ್ಮವಾಗಿ ಹೇಳಿ' ಎಂದೆ. 'ಇಲ್ಲಾ ರಾಮಚಂದ್ರನ್, ಹೇಳಬಾರದು ಅಂತೇನೂ ಇಲ್ಲ; ನಾನು ಗಮನ ಕೊಡಲಿಲ್ಲ, ಅಷ್ಟೇ.' 'ಹಾಗಾದರೆ ಏನು ಮಾಡ್ತಾ ಇದ್ದಿರಿ ಸುಮಾರು ಮೂರು ಘಂಟೆ ಕಾಲ?' 'ಐ ವಾಸ್ ರೀಡಿಂಗ್ ದಿಸ್' ಎಂದು ಅವರು ತಮ್ಮ ಕೈಯಲ್ಲಿದ್ದ ಇಂಗ್ಲೀಷ್ ಗ್ರಂಥವನ್ನು ತೋರಿಸಿದರು. ಅದು ಮಾರ್ಕ್ಸ್‌ವಾದದ ಬಗ್ಗೆ ಅಮೆರಿಕನ್ ಪ್ರಾಧ್ಯಾಪಕರೊಬ್ಬರು ಬರೆದಿದ್ದ ಹೊಸ ಪುಸ್ತಕ -- ಸುಮಾರು ೫೨೦ ಪುಟಗಳ ಪುಸ್ತಕ. 'ಇದನ್ನ ಓದಬೇಕು ನೀವು ರಾಮಚಂದ್ರನ್; ಮಾರ್ಕ್ಸ್‌ವಾದಕ್ಕೆ ಒಂದು ಹೊಸ ವ್ಯಾಖ್ಯಾನವನ್ನು ಈ ಪುಸ್ತಕ ಕೊಡುತ್ತೆ' ಎಂದರು ತುಂಬಾ ಉತ್ಸಾಹದಿಂದ. 'ಓಕೆ' ಎಂದು ಸುಮ್ಮನಾದೆ.

ಇದು ವಾಸ್ತವ ಘಟನೆಯಾದರೂ ರಾಘವೇಂದ್ರ ರಾವ್ ಅವರ ಇಡೀ ವ್ಯಕ್ತಿತ್ವದ ರೂಪಕವೂ ಆಗಬಹುದೆಂದು ನನಗೆ ತೋರುತ್ತದೆ.

*

ರಾಘವೇಂದ್ರ ರಾವ್ ಜನಿಸಿದ್ದು ಬಳ್ಳಾರಿಯಲ್ಲಿ, ೧೯೨೮ರಲ್ಲಿ. ಅವರ ತಂದೆ ಹೈಸ್ಕೂಲ್ ಶಿಕ್ಷಕನಾಗಿದ್ದು ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ದೈವಾಧೀನರಾದರು. ಆಗ, ರಾಘವೇಂದ್ರ ರಾವ್ ಹೇಳುವಂತೆ ಅವರ ಅಜ್ಜಿಯೇ (ತಾಯಿಯ ತಾಯಿ) ಅವರ ಕುಟುಂಬವನ್ನು ನಿಭಾಯಿಸಿದರು. ಬಳ್ಳಾರಿ-ಹೊಸಪೇಟೆ ತೆಲುಗು ಶಾಲೆಗಳಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ರಾವ್ ಗುಂಟೂರಿನ ಹಿಂದು ಕಾಲೇಜಿನಲ್ಲಿ ಎರಡು ವರ್ಷಗಳ ಇಂಟರ್ಮೀಡಿಯಟ್ ವ್ಯಾಸಂಗವನ್ನು ಪ್ರಥಮ ದರ್ಜೆಯಲ್ಲಿ ಮುಗಿಸಿದರು. ಅನಂತರ ಅಂದಿನ ಮದ್ರಾಸ್ ನಗರಕ್ಕೆ ಹೋದರು; ಅಲ್ಲಿಗೆ ಹೋದದ್ದು ಮೆಡಿಕಲ್ ಕಾಲೇಜಿನಲ್ಲಿ ಸೇರುವುದಕ್ಕೆ; ಆದರೆ ಅವರ ಗೆಳೆಯರ ಪ್ರಭಾವದಿಂದ ಮದ್ರಾಸ್ ಕ್ರಿಶ್ಚಿಯನ್ ಕಾಲೇಜು ಸೇರಿ ಇಂಗ್ಲೀಷ್ ಆನರ್ಸ್ ಕೋರ್ಸಿಗೆ ಸೇರಿದರು. ಈ ಕಾಲಘಟ್ಟದಲ್ಲಿ ಅದೇ ವಿಭಾಗದಲ್ಲಿ ಓದುತ್ತಿದ್ದ - (ಮುಂದೆ ಭಾರತದ ರಾಯಭಾರಿಯಾಗಿ ಅನೇಕ ದೇಶಗಳಲ್ಲಿ ಸೇವೆ ಸಲ್ಲಿಸಿದ)

ಬಾಗಲೋಡಿ ದೇವರಾಯರ ಸ್ನೇಹವಾಗಿ, ಬಹುಕಾಲ ಆ ಸ್ನೇಹ ಮುಂದುವರೆಯಿತು. ೧೯೪೮ರಲ್ಲಿ ಇಂಗ್ಲೀಷ್ ಆನರ್ಸ್ ಮುಗಿಸಿದ ರಾವ್ ಅನೇಕ ಕಾರಣಗಳಿಂದ ಮೂರನೆಯ ದರ್ಜೆಯಲ್ಲಿ ತೇರ್ಗಡೆಯಾದುದರಿಂದ ಪಿ.ಎಚ್‌ಡಿ ಪದವಿಗಾಗಿ ಸಂಶೋಧನೆ ಮಾಡುತ್ತಾ ಆ ಸಂಸ್ಥೆಯಲ್ಲಿಯೇ ಟ್ಯೂಟರ್ ಆಗಿ ಸೇರಿಕೊಂಡರು. ಆಗ ಟಿ. ಎನ್. ಶೇಷನ್, ಸಿ. ಟಿ. ಕುರಿಯನ್ ಮುಂತಾದ ಪ್ರತಿಭಾಶಾಲಿಗಳು ಇವರ ವಿದ್ಯಾರ್ಥಿಗಳಾಗಿದ್ದರು. ಅನಂತರ ಐ. ಎ. ಎಸ್. ಪರೀಕ್ಷೆಗೆ ಎರಡು ಬಾರಿ ಪ್ರಯತ್ನಿಸಿದರೂ ಯಶಸ್ವಿಯಾಗದೆ ಬೇಸತ್ತ ರಾವ್ ಕೊನೆಗೆ ತಮ್ಮ ಅಧ್ಯಯನ ಕ್ಷೇತ್ರವನ್ನೇ ಬದಲಾಯಿಸಲು ನಿರ್ಧರಿಸಿ, ಮದ್ರಾಸ್ ವಿವಿಯಿಂದ ರಾಜ್ಯಶಾಸ್ತ್ರ ವಿಷಯದಲ್ಲಿ ಎಂ.ಎ. ಪದವಿಯನ್ನು ೧೯೫೪ರಲ್ಲಿ ಗಳಿಸಿದರು; ಆಗ ಅವರು ಇಡೀ ವಿವಿಗೇ ಆ ವಿಷಯದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದರು. ಮುಂದೆ ರಾಜ್ಯಶಾಸ್ತ್ರ ವಿಷಯದಲ್ಲಿಯೇ ತಮ್ಮ ಬೋಧನೆ-ಸಂಶೋಧನೆಗಳನ್ನು ಮುಂದುವರೆಸಿದರು.

ಮೊದಲಿಗೆ, ಹೊಸದಾಗಿ ಸ್ಥಾಪಿಸಲಾಗಿದ್ದ ಗೌಹತಿಯ ವಿವಿಯನ್ನು ರಾಜ್ಯಶಾಸ್ತ್ರದ ಅಧ್ಯಾಪಕನಾಗಿ ೧೯೫೫ರಲ್ಲಿ ಸೇರಿ, ಆ ವಿಭಾಗವನ್ನು ರಾವ್ ಕಟ್ಟಿ ಬೆಳೆಸಿದರು. ಆದರೆ ಕರ್ನಾಟಕಕ್ಕೆ ಮರಳುವ ಆಸೆ ಕಮರಲಿಲ್ಲವಾದುದರಿಂದ, ೧೯೫೯ರಲ್ಲಿ ಧಾರವಾಡದ ಕರ್ನಾಟಕ ವಿವಿಯ ರಾಜ್ಯಶಾಸ್ತ್ರ ವಿಭಾಗವನ್ನು ಸೇರಿದರು. ತಮ್ಮ ವೃತ್ತಿಯ ಬಹು ಹೆಚ್ಚಿನ ಸೇವೆಯನ್ನು - (ಸುಮಾರು ೨೫ ವರ್ಷಗಳನ್ನು) - ಈ ವಿವಿಯಲ್ಲಿಯೇ ಸಲ್ಲಿಸಿದರು. ಅದೇ ವರ್ಷದಲ್ಲಿಯೇ, ಎಂದರೆ ೧೯೫೯ರಲ್ಲಿ, ಪ್ರಭಾ ಬೆಂಡಿಗೇರಿ ಅವರನ್ನು ವಿವಾಹವಾದರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು (ಭೀಮಸೇನ ಮತ್ತು ಗೋಪೀನಾಥ) ಮತ್ತು ಇಬ್ಬರು ಹೆಣ್ಣು ಮಕ್ಕಳು (ಮಧುವಂತಿ ಮತ್ತು ವೈಜಯಂತಿ) ಜನಿಸಿದರು. ಈ ಕಾಲಘಟ್ಟದಲ್ಲಿಯೇ ರಾವ್ ಇಂಗ್ಲೀಷ್ ಕವನಗಳನ್ನು ರಚಿಸಲು ಪ್ರಾರಂಭಿಸಿದರು ಮತ್ತು ಸಾಕಷ್ಟು ಪ್ರಸಿದ್ಧಿಯನ್ನೂ ಪಡೆದರು. ಅನಂತರ, ೧೯೬೭ರಲ್ಲಿ ಮತ್ತೆ ಅಲೆದಾಟದ ಮೋಹ ರಾವ್ ಅವರನ್ನು ಕಾಡಲು ಪ್ರಾರಂಭಿಸಿತು.

ಧಾರವಾಡದಲ್ಲಿ ನೆಲೆಸಿದ ನಂತರ, ರಾಘವೇಂದ್ರ ರಾವ್ ಅವರಿಗೆ ಅಲ್ಲಿಯ ಪ್ರಸಿದ್ಧ ಸಾಹಿತಿಗಳಾದ ಸರ್ವಶ್ರೀ ದ. ರಾ. ಬೇಂದ್ರೆ, ಚನ್ನವೀರ ಕಣವಿ, ಹಿರೇಮಲ್ಲೂರ್ ಈಶ್ವರನ್ ಮುಂತಾದವರ ಹಾಗೂ ತತ್ವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಎ. ಬಿ. ಶಾ ಅವರ ಸ್ನೇಹ ದೊರಕಿತು. ಇವರುಗಳಲ್ಲಿ ರಾವ್ ಅವರ ಚಿಂತನೆ-ಸಾಹಿತ್ಯಗಳನ್ನು ಗಾಢವಾಗಿ ಪ್ರಭಾವಿಸಿದವರಲ್ಲಿ ಬೇಂದ್ರೆ ಮತ್ತು ಪ್ರೊ. ಶಾ ಪ್ರಮುಖರು ಎಂದು ಹೇಳಬಹುದು. (ಮುಂದಿನ ಕಾಲಘಟ್ಟದಲ್ಲಿ ರಾವ್ ಬೇಂದ್ರೆಯವರ ಅನೇಕ ಕವನಗಳನ್ನು ಇಂಗ್ಲೀಷ್‌ಗೆ ಭಾಷಾಂತರಿಸಿದರು.) ಸಮಾಜಶಾಸ್ತ್ರದ ವಿಭಾಗದಲ್ಲಿದ್ದ ಹಿರೇಮಲ್ಲೂರ್ ಈಶ್ವರನ್ ಅಂದು ತಮ್ಮ ಸಣ್ಣ ಕಥೆಗಳಿಗಾಗಿ ಸಾಕಷ್ಟು ಪ್ರಸಿದ್ಧರಾಗಿದ್ದರು. ಅವರು ಯಾರ್ಕ್ ವಿವಿಯಲ್ಲಿ (York University, Toranto) ಅಧ್ಯಾಪಕರಾಗಿ ಆಯ್ಕೆ ಆಗಿ ಕೆನಡಾಕ್ಕೆ ಹೋಗುವಾಗ, 'ನಿಮ್ಮನ್ನೂ ಅಲ್ಲಿಗೆ ಆದಷ್ಟು ಬೇಗ ಕರೆಸಿಕೊಳ್ಳುತ್ತೇನೆ' ಎಂದು ರಾವ್‌ಗೆ ವಚನ ನೀಡಿದ್ದರಂತೆ. ಅದರಂತೆ, ಮೂರ್ನಾಲ್ಕು ವರ್ಷಗಳ ನಂತರ, ೧೯೬೭ರಲ್ಲಿ,

ಟೋರಾಂಟೊ ವಿವಿಯ ರಾಜ್ಯಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ಮಾಡಲು ರಾವ್ ಅವರನ್ನೂ ಈಶ್ವರನ್ ಕರೆಸಿಕೊಂಡರು. ಪಿ.ಎಚ್.ಡಿ. ಅಧ್ಯಯನಕ್ಕಾಗಿ ರಾವ್ ಆರಿಸಿಕೊಂಡ ವಿಷಯ 'ಕರ್ನಾಟಕ ಏಕೀಕರಣ'ವಾದುದರಿಂದ ಕ್ಷೇತ್ರಕಾರ್ಯಕ್ಕಾಗಿ ೧೯೬೯ರಲ್ಲಿ ಧಾರವಾಡಕ್ಕೆ ಮರಳಿ, ಮತ್ತೆ ಕೆನಡಾಕ್ಕೆ ಹೋಗಿ, ಕೊನೆಗೆ ೧೯೭೫ರಲ್ಲಿ ಡಾಕ್ಟರೇಟ್ ಪದವಿ ಪಡೆದು ಧಾರವಾಡಕ್ಕೆ ಹಿಂತಿರುಗಿದರು; ಕರ್ನಾಟಕ ವಿವಿಯಲ್ಲಿಯೇ ರೀಡರ್ ಆಗಿ ಮುಂದುವರೆದರು.

೧೯೬೬-೧೯೭೫ : ಈ ಕಾಲಘಟ್ಟದಲ್ಲಿ, ರಾವ್ ಅವರ ಪತ್ನಿ ಪ್ರಭಾ ತೋರಿದ ಧೈರ್ಯ, ಕರ್ತೃತ್ವ ಶಕ್ತಿ ಮತ್ತು ಆತ್ಮವಿಶ್ವಾಸವನ್ನು ರಾವ್ ಮತ್ತೆ ಮತ್ತೆ ಕೃತಜ್ಞತೆಯಿಂದ ನೆನೆಯುತ್ತಾರೆ. ಅವರು ಕೆನಡಾಕ್ಕೆ ಹೋದಾಗ ಕರ್ನಾಟಕ್ ವಿವಿ ಅವರಿಗೆ ಅಧ್ಯಯನ-ರಜಾ ಕೊಡಲು ನಿರಾಕರಿಸಿತು. ಪರಿಣಾಮತಃ, ನಾಲ್ಕು ಮಕ್ಕಳ ಕುಟುಂಬವನ್ನು ನಡೆಸುವ ಸಂಪೂರ್ಣ ಜವಾಬ್ದಾರಿ ಪ್ರಭಾ ಅವರ ಹೆಗಲಮೇಲೆ ಬಿದ್ದಿತು. ಎಂದೋ ಪಡೆದಿದ್ದ ತಮ್ಮ ಬಿ.ಎ. ಪದವಿಯ ಡಿಗ್ರೀ ಸರ್ಟಿಫಿಕಿಟ್ ಅನ್ನು ಹುಡುಕಿ ತೆಗೆದು, ಅದರ ಆಧಾರದ ಮೇಲೆ ಹೈಸ್ಕೂಲ್ ಶಿಕ್ಷಕಿಯಾಗಿ, ರಾವ್ ಅವರ ಅನುಪಸ್ಥಿತಿಯಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುತ್ತಾ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿದರು ಪ್ರಭಾ ರಾವ್. ಒಂದೆರಡು ವರ್ಷಗಳ ನಂತರ ಪ್ರಭಾ ಬಿ.ಎಡ್. ಪದವಿಯನ್ನೂ ಗಳಿಸಿದರು.

ಕಾಲಿಗೆ ಚಕ್ರವನ್ನು ಕಟ್ಟಿಕೊಂಡೇ ಇದ್ದ ರಾವ್ ೧೯೮೮ರಲ್ಲಿ ಆಗ ತಾನೇ ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದ ಮಂಗಳೂರು ವಿವಿಯ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ-ಮುಖ್ಯಸ್ಥರಾಗಿ ಕೋಣಾಜೆಗೆ ಬಂದರು. (ಈ ಕಾಲದಲ್ಲಿಯೇ ನನಗೆ ಅವರ ಪರಿಚಯವಾಗಿ ಸ್ನೇಹ ಬೆಳೆದದ್ದು.) ಆಗ ಆ ವಿಭಾಗದಲ್ಲಿಯ ರಾಡ್ರಿಗಸ್, ಸದಾನಂದ, ಜಮೀಲ್ ಅಹಮದ್ ಮುಂತಾದವರೊಡನೆ ರಾವ್ ಆ ವಿಭಾಗವನ್ನು ಸಮರ್ಥವಾಗಿ ಬೆಳೆಸಿ, ೧೯೮೮ರಲ್ಲಿ ನಿವೃತ್ತರಾದರು. ಅನಂತರ, ಎಮರಿಟಸ್ ಫೆಲೋ ಆಗಿ ಆಯ್ಕೆಯಾಗಿ ಮತ್ತೆ ಎರಡು ವರ್ಷಗಳ ಕಾಲ ಮಂಗಳೂರು ವಿವಿಯಲ್ಲಿ ಕಾರ್ಯ ನಿರ್ವಹಿಸಿದರು. ಸದ್ಯ ಮಕ್ಕಳು-ಮೊಮ್ಮಕ್ಕಳೊಡನೆ ಧಾರವಾಡದಲ್ಲಿ ನೆಲೆಸಿ, ತಮ್ಮ ಅಧ್ಯಯನ ಹಾಗೂ ಬರವಣಿಗೆಗಳನ್ನು ಇತೋಪ್ಯತಿಶಯವಾಗಿ ಮುಂದುವರೆಸಿದ್ದಾರೆ.

ರಾಘವೇಂದ್ರ ರಾವ್ ಅವರಿಗೆ ಅನೇಕ ಪ್ರಶಸ್ತಿ-ಪುರಸ್ಕಾರಗಳು ಸಂದಿವೆ; ಇವುಗಳಲ್ಲಿ ಮುಖ್ಯವಾದವುಗಳೆಂದರೆ: ಬಿ. ಎಚ್. ಶ್ರೀಧರ ಪ್ರಶಸ್ತಿ (೨೦೦೧), ಬೇಂದ್ರೆ ರಾಷ್ಟ್ರೀಯ ಪ್ರಶಸ್ತಿ, ಕಾರ್ಲ್ ಮಾರ್ಕ್ಸ್ ಅವಾರ್ಡ್ ಇತ್ಯಾದಿ ಸೇರಿವೆ. ಶಿಮ್ಲಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಂಸ್ಥೆಯ ಫೆಲೋಷಿಪ್ (೧೯೯೩-೯೬), ಮೈಸೂರು ವಿವಿಯಲ್ಲಿ 'ಜಾಕಿರ್ ಹುಸೇನ್ ವಿಸಿಟಿಂಗ ಪ್ರೊಫೆಸರ್‌ಷಿಪ್' (೨೦೦೫-೨೦೦೭), ಇತ್ಯಾದಿ ಸಾಂಸ್ಥಿಕ ಪುರಸ್ಕಾರಗಳು ಇವರ ವಿದ್ವತ್ತನ್ನು ಅರಸಿಕೊಂಡು ಬಂದಿವೆ.

*

ಕಳೆದ ಶತಮಾನದ ೫೦ರ ದಶಕದಲ್ಲಿಯೇ ಇಂಗ್ಲೀಷ್ ಭಾಷೆಯಲ್ಲಿ ಕಾವ್ಯರಚನೆಯನ್ನು ಪ್ರಾರಂಭಿಸಿದ ರಾಘವೇಂದ್ರ ರಾವ್ ಆ ಕಾಲಘಟ್ಟದಲ್ಲಿ ಭಾರತೀಯ ಇಂಗ್ಲೀಷ್ ಕಾವ್ಯಕ್ಷೇತ್ರದಲ್ಲಿ ತುಂಬಾ ಕ್ರಿಯಾಶೀಲವಾಗಿದ್ದ ಪಿ. ಲಾಲ್ ಅವರ ಜೊತೆಗೂಡಿ, ನವ್ಯ ಕಾವ್ಯವನ್ನು ರಚಿಸುತ್ತಾ, ಮೊದಲ ಘಟ್ಟದ ತೋರೋದತ್, ಸರೋಜಿನಿ ನಾಯ್ಡು, ಅರಬಿಂದೋ ಮುಂತಾದವರ 'ರಮ್ಯ' ಕಾವ್ಯವನ್ನು ಖಾರವಾಗಿ ವಿಮರ್ಶಿಸುತ್ತಾ, ಭಾರತೀಯ ಇಂಗ್ಲೀಷ್ ಕಾವ್ಯದಲ್ಲಿ ನವ್ಯತೆಯನ್ನು ಸ್ಥಾಪಿಸಲು ಸಾಕಷ್ಟು ಪ್ರಯತ್ನಿಸಿದರು. ಲಾಲ್ ಅವರೊಡನೆ *The Modern Indo-Anglian Poetry* ಎಂಬ 'ನವ್ಯ' ಕವನಗಳ ಸಂಕಲನವನ್ನು ಸಂಪಾದಿಸಿ, ೧೯೫೯ರಲ್ಲಿ ಪ್ರಕಟಿಸಿದರು. ಈ ಪ್ರಕಟಣೆಯಿಂದಲೇ ಮುಂದೆ ತುಂಬಾ ಪ್ರಸಿದ್ಧವಾದ ಲಾಲ್ ಅವರ 'The Writers Workshop' ಪ್ರಕಾಶನ ಸಂಸ್ಥೆ ಜನ್ಮ ತಾಳಿತು. ಈ ಸಂಕಲನಕ್ಕೆ ಲಾಲ್ ಮತ್ತು ರಾವ್ ಇಬ್ಬರೂ ಸೇರಿ ಬರೆದ ವಿಮರ್ಶಾತ್ಮಕ ಪ್ರಸ್ತಾವನೆಯನ್ನು 'ಭಾರತೀಯ ನವ್ಯ ಇಂಗ್ಲೀಷ್ ಕಾವ್ಯ'ದ ಘೋಷಣಾಪತ್ರದಂತೆ ನಾವು ನೋಡಬಹುದು. ರಾವ್ ಅವರ ಮೊದಲ ಕವನ ಸಂಕಲನ *Poems* ೧೯೬೮ರಲ್ಲಿ ಪ್ರಕಟವಾಯಿತು. ಅಂದಿನಿಂದ ಇಲ್ಲಿಯವರೆಗೆ ಒಟ್ಟು ೨೫ ವೈವಿಧ್ಯಪೂರ್ಣ ಕೃತಿಗಳನ್ನು ರಾಘವೇಂದ್ರ ರಾವ್ ರಚಿಸಿದ್ದಾರೆ. *Contradictions* (1974), *Population Policy: Society And Culture* (1988), ಇತ್ಯಾದಿ ವೈಚಾರಿಕ ಗ್ರಂಥಗಳು : *Aluru Venkatarao* (೧೯೮೦), *Rashtrabandhu S. Nijalingappa: Man And Statesman* (1999), ಇತ್ಯಾದಿ ಜೀವನಚರಿತ್ರೆಗಳು; *Poems* (1968), *The Road Taken* (1991) ಎಂಬ ಎರಡು ಇಂಗ್ಲೀಷ್ ಕವನ ಸಂಕಲನಗಳು; *The Cocroach Man* (2007) ಎಂಬ ಇಂಗ್ಲೀಷ್ ಕಾದಂಬರಿ, ಮತ್ತು ಕನ್ನಡದಿಂದ ಇಂಗ್ಲೀಷ್‌ಗೆ ಮಾಡಿರುವ ಅನುವಾದಗಳು, ಇವೆಲ್ಲವೂ ಸೇರಿವೆ. ಇವುಗಳಲ್ಲಿ ನಾನು ಇವರ ಕವನಗಳು, ಕಾದಂಬರಿ ಮತ್ತು ಕನ್ನಡದಿಂದ ಇಂಗ್ಲೀಷ್‌ಗೆ ಆಗಿರುವ ಅನುವಾದಗಳನ್ನು ಮಾತ್ರ ಗಮನಿಸಿದ್ದೇನೆ.

ಅ) ಅನುವಾದ : ಕನ್ನಡದಲ್ಲಿ ಅನುವಾದ - ವಾಙ್ಮಯ ಸಾಕಷ್ಟು ಶ್ರೀಮಂತವಾಗಿದ್ದರೂ ಕನ್ನಡದಿಂದ ಇತರ ಭಾಷೆಗಳಿಗೆ - ಅದರಲ್ಲಿಯೂ ಇಂಗ್ಲೀಷ್‌ಗೆ - ಆಗಿರುವ ಅನುವಾದಗಳು ಗಣನೀಯವಾಗೇನೂ ಇಲ್ಲ. ಇಂದೂ ಕೂಡ ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದಿಸುವವರ ಸಂಖ್ಯೆ ಬೆರಳೆಣಿಕೆಯಷ್ಟು; ಅಂತಹವರಲ್ಲಿ ರಾಘವೇಂದ್ರ ರಾವ್ ಒಬ್ಬರು.

ಕನ್ನಡದಿಂದ ಇಂಗ್ಲೀಷ್‌ಗೆ ರಾಘವೇಂದ್ರ ರಾವ್ ಈ ಕೆಳಗಿನ ಕೃತಿಗಳನ್ನು ಅನುವಾದಿಸಿದ್ದಾರೆ.
ಬೇಂದ್ರೆ: "ನಾಕು ತಂತಿ" (*Four Strings,* ವಾಮನ ಬೇಂದ್ರೆ ಮತ್ತು ಕೆ. ಎಸ್

ಶರ್ಮ ಅವರೊಡನೆ, ೧೯೭೬); ಆಯ್ದ ಕವನಗಳು (*Spring Fire,* ೨೦೧೩); **ಚೆನ್ನವೀರ ಕಣವಿ:** ಆಯ್ದ ಕವನಗಳು (*Inviting Life* ೨೦೦೩); **ಎಸ್. ಎಲ್. ಭೈರಪ್ಪ:** "ವಂಶವೃಕ್ಷ" (ಕಾದಂಬರಿ, *The Uprooted,* ೧೯೯೨), "ಪರ್ವ" (*Parva,* ೧೯೯೩); **ಕೀರ್ತಿನಾಥ ಕುರ್ತುಕೋಟಿ:** "ಪ್ರತ್ಯಭಿಜ್ಞಾನ" (ವಿಮರ್ಶಾ ಲೇಖನಗಳ ಸಂಕಲನ, *Re-cognition,* ೨೦೧೧) ಇವಲ್ಲದೆ, ಬೇರೆ ಬೇರೆ ಸಂಕಲನಗಳಿಗಾಗಿ, ಕುವೆಂಪು, ಕೆ. ಎಸ್. ನರಸಿಂಹಸ್ವಾಮಿ ಇತ್ಯಾದಿ ಕನ್ನಡದ ಇತರ ಪ್ರಸಿದ್ಧ ಕವಿಗಳ ಕವನಗಳನ್ನೂ ಅನುವಾದಿಸಿದ್ದಾರೆ.

ಅನುವಾದ ಕ್ಷೇತ್ರದಲ್ಲಿ ಯಾರೊಬ್ಬರೂ ಇದಮಿತ್ಥಂ ಎಂದು ತೀರ್ಮಾನಿಸುವುದು ಸಾಧ್ಯವಿಲ್ಲ. ಏಕೆಂದರೆ, ಅನುವಾದ ಕ್ರಿಯೆಯೂ ಮೂಲದ 'ಒಂದು' ವ್ಯಾಖ್ಯಾನ, ಗ್ರಹಿಕೆಯ ಒಂದು ರೂಪ. ಆದುದರಿಂದ, ಪ್ರತಿಯೊಬ್ಬ ವಿಮರ್ಶಕ/ವಿಮರ್ಶಕಿಯೂ ತನ್ನದೇ ಆದ ಭಾಷಾಂತರ ಮೀಮಾಂಸೆಯನ್ನು ಕಟ್ಟಿಕೊಂಡಿರುತ್ತಾನೆ/ಳೆ. ಒಂದು ಕವನವಿರಲಿ, ಒಂದು ವಾಕ್ಯವನ್ನೂ ಕೂಡ ಇಬ್ಬರು ಭಿನ್ನ ರೀತಿಯಲ್ಲಿ ಅನುವಾದಿಸಬಹುದು ಮತ್ತು ಇಬ್ಬರ ಅನುವಾದವನ್ನು ಕುರಿತು ಭಿನ್ನಭಿಪ್ರಾಯಗಳು ಸಾಧ್ಯ. ರಾಘವೇಂದ್ರ ರಾವ್ ಅವರ ಅನುವಾದಕ್ರಿಯೆಯ ಸ್ವರೂಪದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರು ಮೂಲದೊಡನೆ ಅತೀವ ಸ್ವಾತಂತ್ರ್ಯವನ್ನು ವಹಿಸುವುದಿಲ್ಲವಾದರೂ, ಮೂಲದ ಎಲ್ಲಾ ಪದ-ವಾಕ್ಯಗಳಿಗೂ ಸಮಾನ ಇಂಗ್ಲೀಷ್ ಪದ-ವಾಕ್ಯಗಳನ್ನು ಹುಡುಕುತ್ತಾ ಹೋಗುವುದಿಲ್ಲ. ಒಟ್ಟಾರೆಯಾಗಿ, ಮೂಲ ಕವನದ/ಕಥನದ ಗತಿ ಮತ್ತು ಭಾವನನ್ನು ಇಂಗ್ಲೀಷ್‌ನಲ್ಲಿ ತರಲು ಪ್ರಯತ್ನಿಸುತ್ತಾರೆ. ಈ ಧೋರಣೆ ಕಥೆ- ಕಾದಂಬರಿಗಳ ಅನುವಾದದಲ್ಲಿ ಹೆಚ್ಚು ಯಶಸ್ವಿಯಾಗುತ್ತದಾದರೂ ಕವನಗಳ ಅನುವಾದದಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡುತ್ತದೆ. (ಉದಾಹರಣೆಗೆ, ಬೇಂದ್ರೆಯವರ "ಕುರುಡು ಕಾಂಚಾಣ" ಕವನದ "ಬಾಣಂತಿಯೆಲುಬು" ಪದವನ್ನು ರಾವ್ "bones of pregnant women" ಎಂದು ಭಾಷಾಂತರಿಸುತ್ತಾರೆ. ಬಿಳಿಚಿಕೊಂಡಿರುವವಳು (ಮಗುವನ್ನು ಆಗತಾನೆ ಹೆತ್ತಿರುವ) 'ಬಾಣಂತಿ'ಯೇ ವಿನಃ ಬಸುರಿಯಲ್ಲ; ಆದುದರಿಂದ ಇಲ್ಲಿ 'ಪ್ರೆಗ್ನಂಟ್' (ಬಸುರಿ/ಗರ್ಭ ಧರಿಸಿದ) ಪದಕ್ಕೆ ಬದಲಾಗಿ 'nascent' / 'post-parturition' ಇತ್ಯಾದಿ ಪದಗಳನ್ನು ಸಂವಾದಿಯಾಗಿ ಉಪಯೋಗಿಸಬಹುದಿತ್ತು. ಕವನದ ಕೊನೆಯ ವಾಕ್ಯ "It fell face upward, heaving its shoulders" "ಅಂಗಾತ ಬಿತ್ತೋ, ಹೆಗಲಲ್ಲಿ ಎತ್ತೋ" ಎಂಬ ವಾಕ್ಯದ ಅರ್ಥವನ್ನು ಕೊಡುವುದಿಲ್ಲ; 'ತನ್ನ ಮಂಗಾಟಗಳಿಂದಲೇ ಸತ್ತು ಬಿದ್ದ ಮಂಗನ ಶವವನ್ನು ಹೆಗಲ ಮೇಲೆ ಹಾಕಿಕೊಂಡು ಹೋಗು' ಎಂಬುದು ಮೂಲ ಕವನದ ಅರ್ಥ. ಹೀಗೆಯೇ ಇವರ ಅನುವಾದಗಳಲ್ಲಿ ಅನೇಕ ಓರೆಕೋರೆಗಳನ್ನು ಪಟ್ಟಿ ಮಾಡಬಹುದು.) ಆದರೆ, ಇಲ್ಲಿ ನಾವು ಗಮನಿಸಬೇಕಾದುದು ರಾವ್ ಮಾಡಿರುವ ಅನುವಾದ ಸಾಹಿತ್ಯದ ಗಾತ್ರ: ಬೇಂದ್ರೆ-ಕಣವಿಯಂತಹವರ ಕ್ಲಿಷ್ಟ ಕಾವ್ಯ, ೪೦೦-೫೦೦ ಪುಟಗಳ ಭೈರಪ್ಪನವರ ಕಾದಂಬರಿಗಳು, ಕುರ್ತುಕೋಟಿಯವರ ಪ್ರಮುಖ ವಿಮರ್ಶನ ಕೃತಿ, ಇತ್ಯಾದಿ. ಎಂದರೆ,

ಕೆಲವಾದರೂ ಪ್ರಮುಖ ಕನ್ನಡ ಕೃತಿಗಳನ್ನು ಕನ್ನಡೇತರ ಓದುಗರಿಗೆ ತಲುಪಿಸಿದ್ದಾರೆ; ಇದು ಅಭಿನಂದನೀಯ ಕಾರ್ಯ.

ಆ) ಇಂಗ್ಲೀಷ್ ಕವನಗಳು : ಇಂಗ್ಲೀಷ್‌ನಲ್ಲಿ ಕಳೆದ ಶತಮಾನದ ಮೂರು-ನಾಲ್ಕನೆಯ ದಶಕಗಳಲ್ಲಿ ಪ್ರಸಿದ್ಧವಾಗಿದ್ದ ತೋರುದತ್, ಸರೋಜಿನಿ ನಾಯ್ಡು, ಮುಂತಾದವರ 'ರಮ್ಯ' ಸಂಪ್ರದಾಯದ ಕವನಗಳಿಗಿಂತ ಭಿನ್ನವಾಗಿ 'ನವ್ಯ' ಕವನಗಳನ್ನು ಬರೆಯಲು ಪ್ರಾರಂಭಿಸಿದ ಮೊದಲ ಕವಿಗಳಲ್ಲಿ ರಾಘವೇಂದ್ರ ರಾವ್ ಒಬ್ಬರು. ಅವರು ಇದುವರೆಗೆ ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. *Poems* (1968), *The Road Taken* (1991) ಎರಡನೆಯ ಸಂಕಲನದಲ್ಲಿ ಮೊದಲ ಸಂಕಲನದ ಹೆಚ್ಚಿನ ಕವನಗಳೂ ಸೇರಿವೆ. ರಾಘವೇಂದ್ರ ರಾವ್ ಅವರ ಕವನಗಳ ವೈಶಿಷ್ಟ್ಯವೆಂದರೆ ಅವುಗಳಲ್ಲಿರುವ ಪ್ರತಿಮಾಬದ್ಧತೆ, ಚಿಂತನಶೀಲತೆ ಮತ್ತು ವಾಸ್ತವ ಹಾಗೂ ಅನುಭಾವ ಇವುಗಳ ಬೆಸುಗೆ. ಈ ಅಂಶಗಳನ್ನು ನಿದರ್ಶಿಸಲು ಅವರ ಎರಡು ಪ್ರಸಿದ್ಧ ಹಾಗೂ ಪ್ರಾತಿನಿಧಿಕ ಕವನಗಳನ್ನು ನೋಡಬಹುದು.

"The Journey of Golgotha" ('ಗೊಲ್ಗೋಥಾ ಪಯಣ') ಎಂಬ ಕವನ ಏಸುಕ್ರಿಸ್ತನನ್ನು ಶಿಲುಬೆಗೇರಿಸುವ ಸಂಧರ್ಭವನ್ನು ಕುರಿತಾಗಿದೆ. ಇಡೀ ಕವನ ಕ್ರಿಸ್ತನನ್ನು 'ಮುಗ್ಧ ಬಾಲಕ'ನಂತೆ ಕಾಣುತ್ತಾ, ಮುಗ್ಧತೆಯನ್ನೇ ವಿಶ್ಲೇಷಿಸುತ್ತಾ ಹೋಗುತ್ತದೆ. ಆದರೆ, ಈ ಕವನ ಬಾಲ್ಯದ ಮುಗ್ಧತೆಯನ್ನು ಸ್ತುತಿಸುವ ರಮ್ಯ ಕವನವಲ್ಲ. ಪ್ರಾರಂಭದಲ್ಲಿಯೇ ಬರುವ ಸಾಲುಗಳು ಓದುಗರನ್ನು ಚಕಿತಗೊಳಿಸುತ್ತವೆ: "Children are frightening,/complex beyond all adult illusions/paradoxical in their calculated innocence" ('ಮಕ್ಕಳು ಗಾಬರಿಗೊಳಿಸುತ್ತಾರೆ --/ ವಯಸ್ಕರ ಬಗೆಬಗೆಯ ಭ್ರಮೆಗಳಿಗಿಂತಲೂ ಹೆಚ್ಚು ಸಂಕೀರ್ಣವಾಗಿ, / ತಮ್ಮ ಯೋಜಿತ ಮುಗ್ಧತೆಯಲ್ಲಿ ಸ್ವವಿರೋಧಾತ್ಮಕವಾಗಿ'). ಎಂದರೆ ಮಕ್ಕಳ 'ಮುಗ್ಧತೆ'ಯೂ ಒಂದು 'ಲೆಕ್ಕಚಾರದ / ಯೋಜಿತ' ಪರಿಣಾಮ. ಈ ಹೇಳಿಕೆ ಒಂದು ನೆಲೆಯಲ್ಲಿ ಮಕ್ಕಳ ವರ್ತನೆಯನ್ನು ಕುರಿತ ಫ್ರಾಯ್ಡ್‌ನ ಒಳನೋಟಗಳತ್ತ ನಮ್ಮ ಗಮನ ಸೆಳೆದರೆ, ಮತ್ತೊಂದು ನೆಲೆಯಲ್ಲಿ ಕ್ರಿಶ್ಚಿಯನ್ ಧರ್ಮದ ಶ್ರದ್ಧಾಕೇಂದ್ರವಾದ ಏಸುವು ಮಾನವರ 'ಮೂಲ ಪಾಪವನ್ನು' (ಒರಿಜಿನಲ್ ಸಿನ್') ಪರಿಹಾರ ಮಾಡಲು ಉದ್ದೇಶಪೂರ್ವಕವಾಗಿ ತನ್ನನ್ನು ತಾನು ಬಲಿ ಕೊಟ್ಟುಕೊಂಡನು ಎಂಬ ನಂಬಿಕೆಯನ್ನು ನಮ್ಮ ನೆನಪಿಗೆ ತರುತ್ತದೆ. ಹೀಗೆ, ಉದ್ದಕ್ಕೂ ವಾಸ್ತವ-ಧಾರ್ಮಿಕ ನೆಲೆಗಳಲ್ಲಿ ಮುಂದುವರೆಯುತ್ತಾ, ಕವನ ಬೈಬಲ್‌ನಲ್ಲಿ ಬರುವ ಹೆರೋದ್ ರಾಜನು ಮಾಡಿದ 'ಮಕ್ಕಳ ಕಗ್ಗೊಲೆ / ಕಂಸನು ಪೂತನಿಯ ಮೂಲಕ ಮಾಡಿಸಿದ ಮಕ್ಕಳ ಕೊಲೆ', ದೀನ-ದಲಿತರ ನಡುವೆ ಬದುಕುತ್ತಾ ಕ್ರಿಸ್ತನು ಮಾಡಿದ ಪವಾಡಗಳು, 'ಜುದಾಸ-ದ್ರೋಹ'ದ ಭಿನ್ನರೂಪಗಳು (ನ್ಯಾಯಾಧೀಶರು ನ್ಯಾಯಕ್ಕೆ ಮಾಡುವ ದ್ರೋಹ, ತಂದೆ-ತಾಯಂದಿರು ಮಕ್ಕಳಿಗೆ ಮಾಡುವ ದ್ರೋಹ, ರಕ್ತಮಾಂಸಗಳಿಂದ ಕೂಡಿದ ದೇಹವು ಆತ್ಮಕ್ಕೆ ಮಾಡುವ ದ್ರೋಹ,...), ಇತ್ಯಾದಿಗಳನ್ನು ದಾಖಲಿಸುತ್ತಾ, ಕೊನೆಗೆ ಒಂದು ಬಗೆಯ

ಪ್ರಾರ್ಥನೆಯಿಂದ ಮುಗಿಯುತ್ತದೆ: "mercy be for all of us,/ mercy for the body burning in the wind of time!" ('ಕರುಣೆಯಿರಲಿ ನಮ್ಮೆಲ್ಲರ ಮೇಲೆ / ಕಾಲ-ಝುಂಝೂವಾತದಲ್ಲಿ ಧಗಧಗ ಉರಿಯುತ್ತಿರುವ ದೇಹದ ಮೇಲೆ,'). ಅರ್ಥಾತ್, 'ಗೊಲ್ಗೋಥಾ ಪಯಣ' ಕ್ರಿಸ್ತನದು ಮಾತ್ರವಲ್ಲ; ನಮ್ಮೆಲ್ಲರ ಬದುಕೂ ಒಂದು ಗೊಲ್ಗೊಥಾ ಪಯಣವೇ' ಎಂಬ ದಾರ್ಶನಿಕ ಒಳನೋಟವನ್ನು ಧ್ವನಿಸುತ್ತದೆ.

ಎರಡನೆಯ ಕವನಸಂಕಲನಕ್ಕೆ ಶೀರ್ಷಿಕೆಯನ್ನು ಒದಗಿಸಿರುವ "The Road Taken" ('ನಡೆದ ದಾರಿ') ಎಂಬ ಕವನ ರಾವ್ ಅವರ ಎಲ್ಲಾ ಕವನಗಳಿಗಿಂತ ದೀರ್ಘವಾಗಿದೆ. ಸುಮಾರು ೩೦೦ ಸಾಲುಗಳಿರುವ ಈ ಕವನ ಆತ್ಮಕಥನಾತ್ಮಕವಾಗಿದ್ದು, ನಿರೂಪಕ-ಕವಿಯ ಬದುಕಿನ ಪ್ರಮುಖ ಘಟ್ಟಗಳ ಅನುಭವವನ್ನು ದಾಖಲಿಸುತ್ತದೆ. ಮೊದಲಿಗೆ ಗಣೇಶ ಸ್ತುತಿ, ಅನಂತರ ಒಂದೊಂದು ಭಾಗದಲ್ಲಿಯೂ ಕವಿಯ ಹುಟ್ಟು ಹಾಗೂ ಬಾಲ್ಯ, ತಂದೆಯ ಸಾವು, ಪರ ಊರುಗಳಲ್ಲಿ ಶಿಕ್ಷಣ, ಕೆನಡಾ ಪ್ರವಾಸ, ತಾಯಿ-ಅಜ್ಜಿಯವರ ಸಾವು ಮತ್ತು ಕೊನೆಗೆ ತನ್ನ ಸಾವಿನ ಮುನ್ನೋಟ, ಇವುಗಳು ಕವನದ ಒಡಲನ್ನು ಕಟ್ಟಿಕೊಡುತ್ತವೆ. ತುಂಬಾ ದೀರ್ಘವಾದ ಈ ಕವನದ ಸಂಪೂರ್ಣ ವಿಶ್ಲೇಷಣೆ-ವ್ಯಾಖ್ಯಾನಗಳು ಈ ಕಿರು ಲೇಖನದಲ್ಲಿ ಸಾಧ್ಯವಿಲ್ಲದ ಕಾರಣದಿಂದ, ಅಲ್ಲಲ್ಲಿ ಹಠಾತ್ತನೆ ಮೂಡಿ ತಮ್ಮ ನಾವೀನ್ಯತೆ ಹಾಗೂ ಅರ್ಥಶ್ರೀಮಂತಿಕೆಯಿಂದ ಕಣ್ಣುಕೋರೈಸುವ ಕೆಲವು ಸಾಲುಗಳನ್ನು ಮಾತ್ರ ನಾವಿಲ್ಲಿ ನೋಡಬಹುದು.

ಕವನದ ಪ್ರಾರಂಭದಲ್ಲಿ ವಿಘ್ನನಿವಾರಕ ಗಣೇಶನನ್ನು ವರ್ಣಿಸುತ್ತಾ, ಒಂದು ಕಡೆ ಕವನ ಹೀಗೆ ಹೇಳುತ್ತದೆ: "Child of Siva, snowking's grandchild, / born to counterpose your father's harmonies and symmetries,..." ('ಶಿವಪುತ್ರನೇ, ಹಿಮರಾಜನ ಪೌತ್ರನೆ / ನಿನ್ನ ತಂದೆಯ ಸಾಮರಸ್ಯ ಹಾಗೂ ಪ್ರಮಾಣಬದ್ಧತೆಗಳಿಗೆ ಸಂವಾದಿಯಾಗಲೆಂದೇ / ಜನಿಸಿದವನೆ,..'). ಈ ಸಾಲುಗಳು ಭಾರತೀಯ ಸೃಜನಶೀಲತೆಯ ಅದ್ಭುತ ರಹಸ್ಯವನ್ನೇ ಚಿತ್ರಿಸುತ್ತಿರುವಂತೆ ನನಗೆ ತೋರುತ್ತದೆ. ನಟರಾಜ (ಶಿವನ ಮತ್ತೊಂದು ರೂಪ) ಅಂಗಾಂಗ ಸಮತೋಲನ ಹಾಗೂ ಪ್ರಮಾಣಬದ್ಧತೆ ಇವುಗಳ ಅಸಾಧಾರಣ ಮಾದರಿ; ಗಣೇಶನಾದರೋ ನಟರಾಜನಿಗೆ ವಿರುದ್ಧವಾಗಿ ಎಲ್ಲಿಯೂ ಸಮತೋಲನವಿಲ್ಲದ, ಆನೆಯ ಮುಖ-ಮಾನವ ದೇಹವನ್ನು ಹೊಂದಿದ ಡೊಳ್ಳುಹೊಟ್ಟೆಯ ಮೂರ್ತಿ. ಆದರೂ ಇಬ್ಬರೂ ಭಾರತೀಯರಿಗೆ ಪೂಜನೀಯರು; ಅಷ್ಟೇ ಅಲ್ಲದೆ ಅಪ್ಪನನ್ನು ಪೂಜಿಸಬೇಕಾದರೂ ಮೊದಲು ಮಗನನ್ನು ಪೂಜಿಸಿ, ಅನಂತರ ಅಪ್ಪನ ವಿಷಯಕ್ಕೆ ಬರಬೇಕು. ಇಂತಹ ಪರಸ್ಪರ ವಿರುದ್ಧ ಆಶಯ-ಆಕೃತಿಗಳನ್ನು ಭಾರತೀಯ ಸಂಸ್ಕೃತಿ ಮಾತ್ರ ಸಮಾನ ಗೌರವದಿಂದ ಕಾಣುತ್ತದೆ ಎಂದು ನನಗೆ ತೋರುತ್ತದೆ.

ಈ ಗಣೇಶ ನಮಗೆಲ್ಲರಿಗೂ ಅತ್ಯಂತ ಪ್ರಿಯನೇಕೆ ಆಗುತ್ತಾನೆ ಎಂದರೆ,

"(you are) ready to rub shoulders with us once every year
and prepared to face the fate of annual drowning
in our ruined, deep dark wells of transcience."

('ಪ್ರತಿವರ್ಷಕ್ಕೊಮ್ಮೆ ನಮ್ಮೊಡನೆ ಮುಕ್ತವಾಗಿ ಬೆರೆಯಲು / ಮತ್ತು ನಮ್ಮ ಕ್ಷಣಿಕತೆಯ ಕತ್ತಲ ಪಾಳು ಭಾವಿಗಳಲ್ಲಿ / ಮುಳುಗಿ ಸಾಯುವ ದುಃಸ್ಥಿತಿಯನ್ನೆದುರಿಸಲು ಸಿದ್ಧನಿರುವೆ')

ಎರಡನೆಯ ಭಾಗದ ಪ್ರಾರಂಭದಲ್ಲಿ ನಿರೂಪಕನು ತನ್ನ ಹುಟ್ಟನ್ನು ಹೀಗೆ ವ್ಯಾಖ್ಯಾನಿಸುತ್ತಾನೆ:

"There is no puzzling this out, / this eruption into alien flesh,/
the accidental stepping into a mother's street"

('ಇದು ಒಡೆಯಲಾಗದ ಕಗ್ಗಂಟು ಒಗಟು / ಅಪರಿಚಿತ ಮಾಂಸದೊಳಗಾಗುವ ಸ್ಫೋಟ/ ತಾಯಿಯ ದಾರಿಯಲ್ಲಿ ಆಕಸ್ಮಾತ್ತಾಗಿ ಇಡುವ ಹೆಜ್ಜೆ..')

ಮಾನವ ಜನ್ಮದ ನಿಗೂಢತೆಯನ್ನು ಅಪರೂಪದ ಪ್ರತಿಮೆಗಳ ಮೂಲಕ ದಾಖಲಿಸುವ ಈ ಸಾಲುಗಳ ಹಿನ್ನೆಲೆಯಲ್ಲಿ (ಹೈಡೆಗರ್ ಪ್ರತಿಪಾದಿಸುವ) ಅಸ್ತಿತ್ವವಾದಿ ಚಿಂತನೆಯಿದೆ. ಕವನ ಮುಂದುವರೆದಂತೆ, ಮಕ್ಕಳಿಗೆ ಉಸಿರುಕಟ್ಟಿಸುವ ಶಾಲೆಗಳು, ಬಾಲಕನು ಬೆಳೆದಂತೆ ಅವನದೇ ಆದ ಕನಸಿನ ಪ್ರಪಂಚ, ವಾಸ್ತವದಿಂದ ಬಿಡುಗಡೆ ಕೊಟ್ಟು ಮಾಯಾಲೋಕಕ್ಕೆ ಕರೆದೊಯ್ಯುವ ಬೆಳ್ಳಿಯ ತೆರೆ, ಮತ್ತು ಬಾಲ್ಯಕಾಲದಲ್ಲಿ ಅವನು ನೋಡುತ್ತಿದ್ದ ಹಾಗೂ ಭಾಗವಹಿಸುತ್ತಿದ್ದ ಹಬ್ಬ-ಹರಿದಿನಗಳು, ಇತ್ಯಾದಿಗಳ ಸುಂದರ ಚಿತ್ರಗಳು ಬರುತ್ತವೆ. ತಂದೆಯ ಸಾವನ್ನು ಚಿತ್ರಿಸುವ ಮುಂದಿನ ಭಾಗವು ಹೀಗೆ ಪ್ರಾರಂಭವಾಗುತ್ತದೆ:

"Time is what the clock cannot catch,
time is what death seizes from birth,
time is memory slipping through sieves of poison and honey"

(ಕಾಲವೆಂದರೆ - ಯಾವುದು ಗಡಿಯಾರದ ಹಿಡಿತದಿಂದ ದೂರವಿದೆಯೋ ಅದು;
ಕಾಲವೆಂದರೆ - ಯಾವುದನ್ನು ಸಾವು ಹುಟ್ಟಿನಿಂದ ಕಿತ್ತುಕೊಳ್ಳುತ್ತದೆಯೋ ಅದು;
ಕಾಲವೆಂದರೆ - ಜೇನು-ವಿಷಗಳ ರಂಧ್ರಗಳಿಂದ ಸೋರಿಹೋಗುವ ನೆನಪು')

ಇದೇ ರೀತಿಯಲ್ಲಿ, ನಿರೂಪಕನ ಉಚ್ಚ ಶಿಕ್ಷಣ, ಪರದೇಶ ಪ್ರಯಾಣ, ತಾಯಿ-ಅಜ್ಜಿಯರ ಸಾವು, ಇತ್ಯಾದಿಗಳನ್ನು ಅಪ್ರತಿಮ ಪ್ರತಿಮೆಗಳ ಮೂಲಕ ಕಟ್ಟಿಕೊಡುತ್ತಾ, ಕೊನೆಯಲ್ಲಿ ಕವನವು ಹೀಗೆ ಸಾವು-ಬದುಕನ್ನು ಕುರಿತು ಚಿಂತಿಸುತ್ತದೆ.

"but the point is not that we go,/ for go we must,/
but that we are here now, not gone yet,
itching to fight every fall, / and, fighting fall
as men pitched against a finale
roots rooted in sandy soil!

Om! Ashanti! Ashanti

‘ಆದರಿಲ್ಲಿ ಮುಖ್ಯವಾಗುವುದು ನಾವು ಹೋಗುವುದಲ್ಲ/ ಹೋಗಲೇಬೇಕು ನಾವು;/
ಆದರೆ, ಈಗ, ಇಲ್ಲಿ ನಾವಿದ್ದೇವೆ, ಮತ್ತು ಇನ್ನೂ ಹೋಗಿಲ್ಲ ಎನ್ನುವುದು --
ಎಲ್ಲಾ ಸೋಲುಗಳನ್ನೂ ಎದುರಿಸಲು ಸಿದ್ಧರಾಗುತ್ತಾ, ಎದುರಿಸುತ್ತಲೇ ಬೀಳುತ್ತಾ,
ಅದ್ಭುತ ಅಂತ್ಯದೆದುರು ಗಟ್ಟಿಯಾಗಿ ನಿಂತ ಮಾನವರಂತೆ.
ಮರುಳು ಮಣ್ಣಿನಲ್ಲಿ ಧೃಢವಾಗಿ ನಿಂತಿರುವ ಬೇರುಗಳು.

ಓಂ! ಅಶಾಂತಿ! ಅಶಾಂತಿ!

ಈಗ ಈ ದೀರ್ಘ ಕವನದ ಶೀರ್ಷಿಕೆಯ ಧ್ವನಿ ನಮ್ಮ ಅರಿವಿಗೆ ಬರುತ್ತದೆ. ರಾಬರ್ಟ್ ಫ್ರಾಸ್ಟ್‌ನ ಒಂದು ಪ್ರಸಿದ್ಧ ಕವನದ ಶೀರ್ಷಿಕೆ "The Road Not Taken" (‘ನಾನು ತುಳಿಯದ ದಾರಿ’); ಈ ಶೀರ್ಷಿಕೆ ಇರುವ ದಾರಿಗಳಲ್ಲಿ ಒಂದನ್ನು ನಾವು ಆಯ್ಕೆ ಮಾಡಿಕೊಳ್ಳಬಹುದು ಎಂಬ ಆಯ್ಕೆಯ ಸಾಧ್ಯತೆಯನ್ನು ಧ್ವನಿಸುತ್ತದೆ. ಆದರೆ, ರಾವ್ ಅವರ ಕವನ ಯಾವುದೇ ಬಗೆಯ ಆಯ್ಕೆ ಸಾಧ್ಯವಿಲ್ಲದ, ಅಪರಿಚಿತ ಪ್ರದೇಶದಲ್ಲಿ, ನಿಯಂತ್ರಿಸಲಾಗದ ಹಾಗೂ ಅರಿಯಲಾಗದ ಹುಟ್ಟು-ಸಾವುಗಳಿಂದ ಕೂಡಿದ ಮಾನವ ಬದುಕನ್ನು ದಾಖಲಿಸುತ್ತದೆ. ಇಂತಹ ಬದುಕಿನಲ್ಲಿ ನಮಗೆ ಪ್ರಸ್ತುತವಾಗುವ ಸತ್ಯ ಒಂದೆ: ಇಲ್ಲಿ, ಈ ಕ್ಷಣ, ನಾವು ಬದುಕಿದ್ದೇವೆ ಎಂಬುದಷ್ಟೇ. ಪರಿಣಾಮತಃ, ಈ ಬಗೆಯ ಅಸಂಗತ ಬದುಕಿನ ಕೊನೆಯಲ್ಲಿ ‘ಅಶಾಂತಿ ಅಶಾಂತಿ’ ಎಂದು ಹೇಳಬಹುದೆ ಹೊರತು ಎಲಿಯಟ್‌ನ ಕ್ರಿಶ್ಚಿಯನ್ ಧರ್ಮದಲ್ಲಿ / ವೈದಿಕ ಚಿಂತನೆಯ ಉಪನಿಷತ್ತುಗಳಲ್ಲಿ ಸಾಧ್ಯವಾಗುವ ‘ಶಾಂತಿಃ ಶಾಂತಿಃ ಶಾಂತಿಃ’ ಅಲ್ಲ ಎಂದು ಕವನದ ಕೊನೆ ಸೂಚಿಸುತ್ತದೆ. ಎಲಿಯಟ್‌ನ ‘ಫೋರ್ ಕ್ವಾರ್ಟೆಟ್ಸ್’ ಕವನವನ್ನು ನೆನಪಿಸುವ ಚಿಂತನೆ ಮತ್ತು ಎ. ಕೆ. ರಾಮಾನುಜಮ್ ಅವರ ವ್ಯಂಗ್ಯ-ವಿಡಂಬನಾತ್ಮಕ ಶೈಲಿ ಇವೆರಡರ ಅಸಾಧಾರಣ ಬೆಸುಗೆಯನ್ನು ಈ ದೀರ್ಘ ಕವನದಲ್ಲಿ ನಾವು ಕಾಣಬಹುದು. ಮೂಲತಃ, ರಾಘವೇಂದ್ರ ರಾವ್ ಚಿಂತನಶೀಲ ಕವಿ.

೨೦೦೭ರಲ್ಲಿ ಪ್ರಕಟವಾದ *The Cockroach Man* ಕಾದಂಬರಿಯನ್ನು ‘ಭಾರತೀಯ ಟ್ರಿಸ್ಟ್ರಮ್ ಶ್ಯಾಂಡಿ’ ಎಂದು ಕರೆಯಬಹುದು. ೧೮ನೆಯ ಶತಮಾನದ ಇಂಗ್ಲೀಷ್ ಕಾದಂಬರಿಕಾರ ಸ್ಟರ್ನ್ ರಚಿಸಿದ *Tristram Shandy* ಒಂದು ವಿನೂತನ ಕಥನ; ಉತ್ತಮಪುರುಷ ನಿರೂಪಣೆಯಿರುವ ಈ ಕೃತಿಯಲ್ಲಿ ನಿರೂಪಕನು ತನ್ನ ವೈನೋದಿಕ

ಶೈಲಿಯಲ್ಲಿ ತಾನೂ ಸೇರಿದಂತೆ ಎಲ್ಲರನ್ನೂ, ಎಲ್ಲವನ್ನೂ ಗೇಲಿ ಮಾಡುತ್ತಾ, ತನಗೆ ಗೊತ್ತಿರುವವರೆಲ್ಲರ ವ್ಯಂಗ್ಯ ಚಿತ್ರಗಳನ್ನು ನೀಡುತ್ತಾ, ರಾಜಕೀಯ-ಸಾಹಿತ್ಯಕ-ಕೌಟುಂಬಿಕ ಸಂಗತಿಗಳನ್ನು ಒಂದರೊಳಗೊಂದು ಜೆನೆಸುತ್ತಾ, ಓದುಗರೊಡನೆ ಆಟವಾಡುತ್ತಾನೆ. ರಾಘವೇಂದ್ರ ರಾವ್ ಅವರ ಕಾದಂಬರಿಯಲ್ಲಿಯೂ ಇದೇ ಬಗೆಯ ನಿರೂಪಣೆಯಿದೆ.

ಮೊದಲಿಗೆ ಕಾದಂಬರಿಯ ಅಸಂಬದ್ಧವೆಂದು ತೋರುವ ಹೆಸರು. ಇದೊಂದು ರೂಪಕವೆಂದು, ಈ ಮೂಲಕ ಕೃತಿಯ ನಿರೂಪಕನು (ಕೃಷ್ಣ /ಲೇಖಕ?) ಜಿರಲೆಯಂತೆ ಎಂತಹ ಕಠಿಣ-ಅಪಾಯಕಾರಿ ಸಂಧರ್ಭದಲ್ಲಿಯೂ ಬದುಕಿ ಉಳಿಯುವ ;'ಇಚ್ಛಾಶಕ್ತಿ'ಯನ್ನು ಈ ರೂಪಕ ಧ್ವನಿಸುತ್ತದೆ ಎಂದು 'ಪ್ರಸ್ತಾವನೆ'ಯಲ್ಲಿ ಲೇಖಕರು ಹೇಳುತ್ತಾರೆ; ಆದರೆ, ಈ ಶೀರ್ಷಿಕೆಗೆ ಮತ್ತೊಂದು ಆಯಾಮವೂ ಇದೆಯೆಂದು ಕಾಣುತ್ತದೆ. ಕಾದಂಬರಿಯ ಒಂದು ಭಾಗದಲ್ಲಿ ಈ ವಾಕ್ಯಗಳು ಬರುತ್ತವೆ: "ನನಗೆ ತೋರುವಂತೆ, ನಮ್ಮ ರಾಷ್ಟ್ರವು ಸದಾ ವಿನಾಶದ ಅಂಚಿನಲ್ಲಿರುವ ಆದರೆ ಯಾವ ಪರಿಸ್ಥಿತಿಯಲ್ಲಿಯೂ ನಾಶವಾಗದ ಒಂದು ರಾಷ್ಟ್ರ. ಬದುಕಿ ಉಳಿಯುವಂತಹುದು. ಜಿರಲೆಯಂತೆ. ನನ್ನಂತೆ ಹಾಗೂ ನಿಮ್ಮಂತೆ" (ಪು. ೮೮). ಎಂದರೆ, ಈ ಕಾದಂಬರಿ ಒಬ್ಬ ವ್ಯಕ್ತಿಯ (ನಿರೂಪಕ) ಕಥನದಂತೆ ಒಂದು ರಾಷ್ಟ್ರದ (ಭಾರತದ) ಕಥನವೂ ಅಹುದು; ಆ ಕಾರಣದಿಂದಲೇ ಕಾದಂಬರಿಯು ಅಲ್ಲಲ್ಲಿ ಕಳೆದ ಶತಮಾನದ ಮಧ್ಯಭಾಗದಲ್ಲಿ ನಡೆದ ಅನೇಕ ಐತಿಹಾಸಿಕ ಘಟನೆಗಳನ್ನೂ ದಾಖಲಿಸುತ್ತದೆ.

ತಮ್ಮ 'ಪ್ರಸ್ತಾವನೆ'ಯಲ್ಲಿ ರಾವ್ ಈ ಕಾದಂಬರಿಯನ್ನು ಕುರಿತು ಒಂದು ರೋಚಕ ಕಥೆಯನ್ನು ಕಟ್ಟುತ್ತಾರೆ: ಈ ಕೃತಿ ಮೊದಲಿಗೆ ತಮ್ಮ ಗೆಳೆಯನ ಕೋರಿಕೆಯಂತೆ ಬರೆಯಲ್ಪಟ್ಟ ಅವನ (ಗೆಳೆಯನ) 'ಆತ್ಮಕಥೆ'ಯೆಂದು, ಅನಂತರ ಆ ಗೆಳೆಯನ ಕೋರಿಕೆಯಂತೆ ಅದಕ್ಕೆ ಕಾದಂಬರಿಯ ರೂಪವನ್ನು ಕೊಡಲಾಯಿತೆಂದು, ಕೊನೆಗೆ ಆ ಗೆಳೆಯನು ಆ ಕೃತಿಯ ಬಗ್ಗೆ ಸಂಪೂರ್ಣವಾಗಿ ನಿರಾಸಕ್ತನಾದುದರಿಂದ, ಅದರ ಮೇಲೆ ಬೆಳೆಸಿಕೊಂಡ ಪ್ರೀತಿಯಿಂದ ಆ ಗೆಳೆಯ ಸೂಚಿಸಿದಂತೆ ಕಸದ ಬುಟ್ಟಿಗೆ ಎಸೆಯದೆ ಸ್ವತಃ ಅದನ್ನು ಮುಗಿಸಿದೆನೆಂದು ಹೇಳುತ್ತಾರೆ - ಇಲ್ಲಿಂದಲೇ ಓದುಗರೊಡನೆ ಲೇಖಕ / ನಿರೂಪಕನಾಡುವ ಆಟ ಪ್ರಾರಂಭವಾಗುತ್ತದೆ. 'ಇದು ಆತ್ಮಕಥೆಯಲ್ಲ' ಎಂದು ಘೋಷಿಸಿದ ಕೂಡಲೇ ಲೇಖಕನಿಗೆ ಆಯ್ಕೆಯ ಸಮಸ್ಯೆ ಹಾಗೂ ವಿಶ್ವಸನೀಯತೆಯ ಜವಾಬ್ದಾರಿ ಎರಡರಿಂದಲೂ ಬಿಡುಗಡೆ ದೊರಕಿ, ಅವನಿಗೆ ಅಗಾಧ ಕಥನ ಸ್ವಾತಂತ್ರ್ಯ ದೊರಕುತ್ತದೆ: ಲೇಖಕನು ಆತ್ಮಕಥೆಯಿಂದ ತನಗೆ ಬೇಕಾದಷ್ಟನ್ನು ಆಯ್ಕೆ ಮಾಡಿಕೊಂಡು, ತನಗೆ ಅವಶ್ಯಕವೆನಿಸಿದಷ್ಟು ಕಲ್ಪನೆಯನ್ನು ಬೆರೆಸಿ ತನ್ನ ಕಥನವನ್ನು ಕಟ್ಟಬಹುದು. ಎಂದರೆ, ಲೇಖಕ / ನಿರೂಪಕನು ಓದುಗರೊಡನೆ ಆಡುವ ಮತ್ತೊಂದು ಆಟ ಇದು. ಈ ಬಗೆಯ ಆಟಗಳು ಕೃತಿಯುದ್ದಕ್ಕೂ ಮುಂದುವರೆಯುತ್ತವೆ. ಕಥನದ ಕೊನೆಯಲ್ಲಿ, ಮುದ್ರಣಕ್ಕೆ ಕೊಡುವ ಮೊದಲು ಪಡೆದಂತಹ ಎರಡು ಕಾಲ್ಪನಿಕ 'ರಿವ್ಯೂ'ಗಳನ್ನು ನಿರೂಪಕನು ನಮಗೆ ಕೊಟ್ಟು, ಅನಂತರ ಆ ರಿವ್ಯೂಗಳನ್ನು ಕುರಿತ ತನ್ನ 'ಪ್ರತಿಕ್ರಿಯೆ'ಯನ್ನೂ ಕೊಡುತ್ತಾನೆ; ಎಂದರೆ, ನಾವು, ಓದುಗರು, ಈ ಕೃತಿಯನ್ನು ಹೇಗೆ ಓದಬೇಕು ಅಥವಾ ಓದಬಾರದು ಎಂಬುದನ್ನೂ ಪರೋಕ್ಷವಾಗಿ ಸೂಚಿಸುತ್ತಾನೆ:

“ಜೀವನ ಚರಿತ್ರೆ, ಆತ್ಮ ಕಥನ, ಒಂದು ಬಗೆಯ ಕಾದಂಬರಿ, ಸಾಹಿತ್ಯ ವಿಮರ್ಶೆ, ಇತಿಹಾಸ, ಸಮಾಜಶಾಸ್ತ್ರ, ಇನ್ನೂ ಏನೇನೋ - ಇವೆಲ್ಲವುಗಳ ಕಲಸು ಮೇಲೋಗರ ಈ ಕೃತಿ. ಒಂದು ಬಗೆಯ ‘ಪ್ರಭೇದ ಸಂಕರ’ - ವರ್ಣಸಂಕರದಂತೆ” ಎಂದು ಒಂದು ‘ರಿವ್ಯೂ’ ಹೇಳುತ್ತದೆ. ಲೇಖಕನ ಉದ್ದೇಶವೂ ಅದೇ ಎಂದು ನಮಗೆ ಗೊತ್ತಾಗುತ್ತದೆ.

ಉತ್ತಮ ಪುರುಷ ನಿರೂಪಣೆಯಲ್ಲಿರುವ ಈ ಕಾದಂಬರಿಯ ಸ್ಥೂಲ ‘ಕಥೆ’ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಹುಟ್ಟಿದ ಕೃಷ್ಣ ಎಂಬುವವನ ಬಾಲ್ಯ, ಕಿಶೋರಾವಸ್ಥೆಯ ಭ್ರಮೆಗಳು ಹಾಗೂ ಲೈಂಗಿಕ ಅನುಭವಗಳು, ಉಚ್ಚ ಶಿಕ್ಷಣವನ್ನು ಪಡೆಯುವಾಗಿನ ತೊಡಕುಗಳು, ಅಮೆರಿಕಾದ ವಿವಿಯೊಂದರಲ್ಲಿ ಡಾಕ್ಟರಲ್ ಪದವಿ ಗಳಿಸುವಾಗಿನ ಅಹಿತಕರ ಘಟನೆಗಳು, ಮೂರ್ನಾಲ್ಕು ವಿವಿಗಳಲ್ಲಿ ಪ್ರಾಧ್ಯಾಪಕನಾಗಿ ಅವನು ಪಡೆಯುವ ಅನುಭವಗಳು, ಅಮೆರಿಕಾದಲ್ಲಿ ‘ಜಗದ್ಗುರು’ವಾಗಿ ಲಕ್ಷಗಟ್ಟಲೆ ಹಣಮಾಡುವ ಯೋಜನೆಗಳು, ಇತ್ಯಾದಿಗಳನ್ನು ಒಳಗೊಂಡಿದೆ. ಸರಿ ಸುಮಾರು ಕೊನೆಯವರೆಗೆ ವಾಸ್ತವ ನೆಲೆಗಟ್ಟಿನಲ್ಲಿಯೇ ಮುಂದುವರೆಯುವ ಕೃತಿ ಕೊನೆಯಲ್ಲಿ ಒಂದು ವಿಡಂಬನಾತ್ಮಕ ಫ್ಯಾಂಟಸಿಯಿಂದ ಮುಗಿಯುತ್ತದೆ. (ಶಿಮ್ಲಾದಲ್ಲಿರುವ ಸಂಸ್ಥೆಯನ್ನು ವಿಡಂಬಿಸುವ ಈ ಭಾಗವನ್ನು ಬಿಡಬಹುದಿತ್ತು.) ಎಂದರೆ, ಇದೊಂದು ಬಗೆಯ ಹೋಲ್ಡಾಲ್; ಏನನ್ನು ಬೇಕಾದರೂ ಇಲ್ಲಿ ತುಂಬಬಹುದು. ಇಂತಹ ಕಥೆಯ ಒಡಲಿನಲ್ಲಿ, ನಿರೂಪಕನು ತಾನು ಕಂಡ ವಿಚಿತ್ರ ವ್ಯಕ್ತಿಗಳು, ೧೯೩೦-೭೦ ಈ ಅವಧಿಯ ಭಾರತದ ಇತಿಹಾಸ, ತನಗೆ ಅತಿ ಪ್ರಿಯವಾದ ಮಾರ್ಕ್ಸ್‌ವಾದ, ಫ್ರಾಯ್ಡ್ ಸಿದ್ಧಾಂತದ ವಿಮರ್ಶೆ, ಇವೆಲ್ಲವುಗಳನ್ನೂ ತುಂಬಿಸುತ್ತಾನೆ. ಇಂತಹ ‘ಪ್ರಕಾರ-ಸಂಕರ’ ಕಥನವನ್ನು ಓದಿಸಿಕೊಂಡು ಹೋಗುವಂತೆ ಮಾಡುವುದು ನಿರೂಪಕನ ಅದ್ಭುತ ಹಾಸ್ಯಪ್ರಜ್ಞೆ ಮತ್ತು ಅದು ಹುಟ್ಟುಹಾಕುವ ವೈನೋದಿಕ ಶೈಲಿ.

ಈ ಕಥನದ ದಾರಿಯಲ್ಲಿ ನಾವು ಅನೇಕ ವಿಕ್ಷಿಪ್ತ ವ್ಯಕ್ತಿಗಳನ್ನು ಕಾಣುತ್ತೇವೆ: ಕಾಲಿದಾಸ - ವಾಙ್ಮಯ ಪ್ರಿಯನಾದ, ಹಾಗೂ ದರಖಾಸ್ತಿಗೆ ಬಂದ ಕಲೆಕ್ಟರ್ ಸಾಹೇಬನನ್ನೇ ದಂಗುಬಡಿಸಿದ ನಿರೂಪಕನ ಕರ್ಣಂ (ಶಾನುಭೋಗ) ಅಜ್ಜ; ಪ್ರತಿದಿನವೂ ಸೋಮಾರಿ ಗಂಡನಿಂದ ಒದೆ ತಿಂದರೂ ‘ನಾನು ಅವನನ್ನು ಬಿಟ್ಟು ಬಿಟ್ಟರೆ ಅವನು ಹೇಗೆ ಬದುಕುತ್ತಾನೆ’ ಎಂಬ ಅನುಕಂಪನಿಂದ ಆ ಗಂಡನನ್ನು ಸಹಿಸಿಕೊಳ್ಳುವ ಬೀಬಿ; ಇಡೀ ರಾಮಾಯಣವನ್ನು ಇಂಗ್ಲೀಷ್‌ನಲ್ಲಿ, ಪ್ರಾಸಬದ್ಧ ದ್ವಿಪದಿಗಳಲ್ಲಿ ರಚಿಸಿ, ಸದಾ ಓದುಗರ ಶೋಧದಲ್ಲಿರುವ ಬಸ್ ಕಂಡಕ್ಟರ್ ಮುತ್ತು ರಂಗನ್ (ನಿರೂಪಕನು ಉದಹರಿಸುವ ಅವನ ಒಂದು ಇಂಗ್ಲೀಷ್ ದ್ವಿಪದಿ ಹೀಗಿದೆ: "Ravana the demon supreme roared;/ But it was Rama who really scored//); ರಾವ್ ಅವರ ಅಂಗೈಯನ್ನು ಅದರಲ್ಲಿರುವ ವಿವಿಧ ರೇಖೆಗಳನ್ನು ಅಧ್ಯಯನ ಮಾಡಿ, ಕೋಪದಿಂದ “ನಿಮ್ಮ ಹಸ್ತರೇಖೆಗಳ ಪ್ರಕಾರ ನೀವು ಅನಕ್ಷರಸ್ಥರಾಗಿರಬೇಕು, ಬೀದಿಬೀದಿಗಳಲ್ಲಿ ಅಲೆಯಬೇಕು, ಆದರೆ ನೀವು ಅತ್ಯುಚ್ಚ ಶಿಕ್ಷಣವನ್ನು ಪಡೆದಿದ್ದೀರಿ ಹಾಗೂ ವಿವಿಯಲ್ಲಿ ಪ್ರಾಧ್ಯಾಪಕರಾಗಿದ್ದೀರಿ; "You have cheated your palm" ಎಂದು ಕಿರುಚುವ, ಹಸ್ತ ಸಾಮುದ್ರಿಕ ಶಾಸ್ತ್ರದಲ್ಲಿ ಪ್ರವೀಣನಾದ

ಘಟ್; ಪಾಶ್ಚಾತ್ಯ ತರ್ಕಪಾರಮ್ಯ ವಾದವನ್ನು ವಿರೋಧಿಸಲು ವಿಶ್ವಾದ್ಯಂತ ಒಂದು ಮಹಾ ಸಂಘವನ್ನು ಕಟ್ಟುವ ಡಾ. ವೆಬ್‌ಸ್ಟರ್ ಡೆಕ್ಸ್‌ಟರ್ ಅಲಬಾಸ್ಟರ್: ... ಇಡೀ ಕಾದಂಬರಿ ವಿಕ್ಷಿಪ್ತ ವ್ಯಕ್ತಿಗಳ ಚಿತ್ರಶಾಲೆಯೆಂಬಂತಿದೆ. ಆ ಚಿತ್ರಶಾಲೆಯಲ್ಲಿ, ಅತಿ ವಿಕ್ಷಿಪ್ತ ವ್ಯಕ್ತಿಯೆಂದರೆ ನಿರೂಪಕ ಕೃಷ್ಣ.

ಒಟ್ಟಾರೆಯಾಗಿ ಹೇಳಬೇಕಾದರೆ, ಒಂದು ಅಸಂಗತ ಲೋಕವನ್ನು ಅದೇ ವಾಸ್ತವ ಎಂಬಂತೆ ಚಿತ್ರಿಸುವ, ಮಾರ್ಕ್ಸ್‌ವಾದವೊಂದನ್ನು ಹೊರತು ಪಡಿಸಿ ಮತ್ತೆಲ್ಲಾ ವೈಚಾರಿಕ ಸಂಹಿತೆಗಳನ್ನೂ ನಾಸ್ತಿಕ ನೆಲೆಯಿಂದ ಗೇಲಿ ಮಾಡುವ, ಅತ್ಯಂತ ಸ್ವಾಭಿಮುಖಿ ಕಥನ ಈ ಪ್ರಭೇದ ಸಂಕರ ಕಾದಂಬರಿ. ರಾಜ್ಯಶಾಸ್ತ್ರ ಹಾಗೂ ಇಂಗ್ಲೀಷ್ ಸಾಹಿತ್ಯವೆರಡೂ ಕ್ಷೇತ್ರಗಳಲ್ಲಿಯೂ ಸಮಾನ ವಿದ್ವತ್ತನ್ನು ಗಳಿಸಿಕೊಂಡಿರುವ, ಸದಾ ಲೋಕ ಸಂಚಾರಿಯಾಗಿರುವ, ಸ್ನೇಹಿತರ ಅಭಿಮಾನಿಗಳ ಬಳಗದ ನಡುವೆಯೂ ಒಂಟಿಯಾಗಿರಬಲ್ಲ, ಕವಿ-ಪ್ರಾಧ್ಯಾಪಕ-ವಿಮರ್ಶಕ-ಅನುವಾದಕ ಹಾಗೂ ತಮ್ಮನ್ನು 'ಇನ್ಕರಿಜಿಬಲ್ ಮಾರ್ಕ್ಸಿಸ್ಟ್-ಹೂಮನಿಸ್ಟ್' ಎಂದು ಗುರುತಿಸಿಕೊಳ್ಳುವ ಡಾ. ಕೆ. ರಾಘವೇಂದ್ರ ರಾವ್ ಮಾತ್ರ ಈ ಕಾದಂಬರಿಯ ಕೃಷ್ಣನಂತಹ ಪಾತ್ರವನ್ನು ಸೃಜಿಸಬಹುದು.

●

ಪ್ರಿಯ ಗೆಳೆಯರೆ,

➢ ಇದು 'ಸಂಕ್ರಮಣ'ದ ಐವತ್ತನೆಯ ವರ್ಷದ ಮೊದಲ ಸಂಚಿಕೆ. ಅದರ ಆಯುಷ್ಯ ಬೆಳೆಯುತ್ತಿದ್ದಂತೆ, ಉದ್ರಿ ಉಳಿಸಿಕೊಂಡ ಚಂದಾದಾರರ ಪಟ್ಟಿಯೂ ಉದ್ದವಾಗುತ್ತಿದೆ.

➢ ಈ ಸಂಚಿಕೆ ತಲುಪುವ ಹೊತ್ತಿಗೆ ನಿಮಗೆ ಚಂದಾ ಬಾಕಿ ಕುರಿತ ನಮ್ಮ ನೆನಪೋಲೆ ಕಾರ್ಡು ತಲುಪಿರುತ್ತದೆ. ನಾಳೆ-ನಾಡದು ಎನ್ನದೆ ಇವತ್ತೇ ನಿಮ್ಮ ಬಾಕಿ ಕಳಿಸಿಬಿಡಿರಿ. ನೀವು ಮುಗುಮ್ಮಾಗಿ ಕುಂತರೆ ಅದು ಸರಿಯಲ್ಲ. ಪತ್ರಿಕೆ ಇನ್ನು ಮುಂದೆ ಬೇಡ ಅನ್ನಿಸಿದರೆ ನೇರವಾಗಿ ತಿಳಿಸಿಬಿಡಿರಿ. ಭಿಡೆ-ಬಾನ ಯಾವುದೂ ಬೇಡ.

➢ ಎಂ.ಓ./ಚೆಕ್/ಡಿಡಿ - ಯಾವ ರೀತಿಯಲ್ಲಾದರೂ ಹಣ ಕಳಿಸಿರಿ.

ನಿಮ್ಮ
ಚಂಪಾ

ಯಾವ ಕಾಲದ ಹಕ್ಕಿ ಇಕ್ಕಿದ ಹಿಕ್ಕೆಯೊ

● ಅಪ್ಪಗೆರೆ ಸೋಮಶೇಖರ

ತಲೆಮಾರು ತೊಲೆಕಂಬ ದಾರಂದ
ನಿಲ ತೂಗುವಲ್ಲಿ ಮುತ್ತಜ್ಜನ ನೆರಳಾಡಿ
ಮಾಡೆಲ್ಲ ಕಪ್ಪುಕಣ್ಣೀರ ಜಾಡು
ಸೋಬಾನೆ ಮೋಡಗಳು ಗರ್ಭಧರಿಸಿ
ಹಾಡುಗಳ ಹಡೆದವ್ವ ಮುತ್ತಜ್ಜಿಯ ಕೊರಳಾಡಿ
ಕೇರಿಗಳ ಸಂತಸಕೆ ಸಾಕ್ಷಿಯಾದೊ

ಹುರಿಬಿಗಿದ ಬಿದಿರ ಸಾಲುಗಳು
ಕೈಯಂಚಿನ ಸೂರುಗಳು
ತೂಗಾಡುವ ತಮಟೆ, ನಗಾರಿ, ತಾರಸಿಗಳ
ಮಯ್ಯ ಚರ್ಮದಲ್ಲಿ
ಸಾವಿರದ ಸಿಡಿಲ ನರಬಳ್ಳಿಗಳು ಮೌನ

ನೇತಾಡೊ ನೇಕೆಯತುಂಬ ಕಿಕ್ಕಿರಿದ
ಜೀತಗಾರ ಅಜ್ಜ, ಸಾಲಗಾರ ಅಪ್ಪ, ಕೂಲಿಕಂಬಳದ ಅವ್ವ
ಅವಮಾನದ ಅಣ್ಣ-ಅಕ್ಕ; ತಮ್ಮ-ತಂಗಿಯರ
ತೊಗಲುಗೊಂಬೆಗಳು ಬಿಕ್ಕಳಿಸುತ್ತಲೇ
ನಿಟ್ಟುಸಿರ ಕಥೆ ಹೇಳುತ್ತಿವೆ

ಅಲ್ಲಿ ಕೈಯಳತೆಯಲ್ಲಿ
ಮೋಟು ಅಡ್ಡಗೋಡೆಯ ಮೇಲಿಟ್ಟ
ಸೊಡರ ಸೂಲು ಸೊಲ್ಲಾಡುತ್ತಿಲ್ಲ
ಹಸೆಕಲ್ಲಿಗಂಟಿರುವ ವಾಗೊಲೆಯ ಮೇಲಿಟ್ಟ
ಹಿಟ್ಟು ಮಡಕೆಯಲ್ಲಿ ಕೆರಬೊಳಕಿಲ್ಲ

ತನಗಿಕ್ಕಿದ ಹಿಟ್ಟತಣೆಗೆಯನೆತ್ತಿ
ತೊಲೆಕಂಬದ ಮೇಲಿಟ್ಟು
ಕೋಲೂರಿ ಕಾಲುದಾರಿಯಗುಂಟ
ಕೇರಿ ಕೇರಿಯ ಅಲೆದು
ಮೊಮ್ಮಗನ ಕರೆತಂದು
ತುತ್ತನಿಕ್ಕಿದ ಹಿರಿಯಜ್ಜಿ
ಅನ್ನದಾಸೆಗೆ ಬರುವ ಮೊಮ್ಮಗನ
ದಾರಿ ಕಾಯುತ್ತ ಕುಳಿತ ಕಿರಿಯಜ್ಜಿ

ಕಂದ ಉಣ್ಣಲೆಂದು ಕೊನೆವರೆಗೂ
ಒಂದು ತುತ್ತನ್ನ ಮಿದ್ದಿಸುತ್ತ ಕುಳಿತ ಶಬರಿ

ಒಡಹುಟ್ಟುಗಳನ್ನೆಲ್ಲ ಕೇರಿ ಬೀದಿಗಳಿಗಟ್ಟಿ
ಮಣ್ಣಗೋಡೆಯ ಮನೆಗೆ
ಸ್ವಘೋಷಿತ ವಾರಸುದಾರನಾದ ಮನೆಯಜ್ಜ
'ಬೇಲಿಯೆ ಎದ್ದು ಹೊಲ ಮೇಯುವಾಗ'
ಉರಿಮೀಸೆಯಜ್ಜ ಹಾರ್ಮೋನಿಯಂ ನುಡಿಸುತ್ತ
ಕಂದಗಳ ಹಾಡುತ್ತ
ಧೃತರಾಷ್ಟ್ರ, ಭೀಷ್ಮ, ಧರ್ಮರಾಯರಿಗೆ
ಬೈಯುತ್ತ, ನುಡಿ ಕಲಿಸುತ್ತ ಬಿಡುವಿಲ್ಲದಾದ.
ಅವನಿಲ್ಲದೀಹೊತ್ತು ಕುರುಕ್ಷೇತ್ರದ ಪಾತ್ರಗಳೆಲ್ಲ
ನಮ್ಮೂರ ಕೇರಿಯಲ್ಲಿ ಅಲೆದಾಡುತ್ತಿವೆ
ತಾವು ಕಲಿತಿದ್ದ ಕಂದ, ಮಾತು, ಸಂಭಾಷಣೆಗಳ ಮರೆತು.

ಆತ್ಮಗೌರವ, ಸ್ವಾಭಿಮಾನಗಳ ಒಂದಿಸಿತು
ಬಿಟ್ಟಿರದ ಕಾಯಕದಜ್ಜ
ಮಗನ ಕಣ್ಣುಗಳಲ್ಲಿ ಬದುಕ ಕನಸು ಕಂಡ
ಸರೀಕರೆದರು ಸಂಗಾತಿ ನುಡಿದ ನುಡಿಯ ಕಾವಿಗೆ
ರಸಬಾಳೆ ಕಾಯಿ ವಿಷದ ಹಣ್ಣಾಯಿತು.
ರಾಮಮ್ಮನ ಕೆರೆಯಲ್ಲಿ ಹೆಣ ತೇಲಿತು.

ಹಸಿವ ಸಹವಾಸದಿಂದ
ಬಿದಿರ ಮಂಕರಿಗಳ ಹೊತ್ತ ನೆತ್ತಿಗಳು
ಒಕ್ಕಲಿಗರ ಹಬ್ಬ ಮದುವೆ ಅಂಗಳದಲ್ಲಿ ಸಾಲುಗಟ್ಟಿ
ಇಕ್ಕಿದನ್ನವ ಹೊತ್ತು ಕೆರೆ ಏರಿ ಮೇಲೆ
ಮೆರವಣಿಗೆ ಬರುವುದ ಕಂಡ
ಕರುಳ ಕುಡಿಗಳ ಕುಣಿದು
ತಮಟೆ, ನಗಾರಿ, ಡೊಳ್ಳು ವಾದ್ಯಗಳಾದೊ.

'ಆಕಾಶ ನೋಡೋಕೆ ನೂಕಾಟವೇಕಂದ'
ಅಪ್ಪನ ನುಡಿ ಹೊತ್ತು
ನಾ ಹುಟ್ಟಿ ಬೆಳೆದ ಹಳೆಮನೆಯ ಒಳಹೊಕ್ಕು ನಿಂತಾಗ
ನನ್ನಜ್ಜಿಯರು ಕೂರುತ್ತಿದ್ದ ಮಣ್ಣ ಮೂಲೆಯಲ್ಲೀಗ
ಯಾವ ಕಾಲದ ಹಕ್ಕಿ ಇಕ್ಕಿದ ಹಿಕ್ಕೆಯೊ
ದಿನದಿನವು ಅರಳಿಗಿಡ ಚಿಗುರುತ್ತಿದೆ
ಅದ ನೋಡಿದಾಗಲೆಲ್ಲ
ಅರೆಗಣ್ಣ ಸಂತಚಿತ್ತದ ಬುದ್ಧ ನೆನಪಾಗುತ್ತಾನೆ.

ರತ್ನಾಕರವರ್ಣಿಯ ಕಾವ್ಯ ಚಿಂತನೆ

● ವಿಜಯಕುಮಾರಿ ಎಸ್. ಕರಿಕಲ್

ಕನ್ನಡದಲ್ಲಿ ಆರಂಭದಿಂದಲೂ ಕಾವ್ಯಾಂತರ್ಗತ ಸಾಹಿತ್ಯ ಚರ್ಚೆ ಅಥವಾ ಕಾವ್ಯ ಚರ್ಚೆ ನಡೆದುಬಂದಿದೆ. ಇದು ಕನ್ನಡ ಸಾಹಿತ್ಯದ ವೈಶಿಷ್ಟ್ಯವೆಂದು ಜಿ. ಎಸ್. ಎಸ್. ಗುರುತಿಸುತ್ತಾರೆ. ಕಾವ್ಯ ಪರಂಪರೆಯಲ್ಲಿ ಭಿನ್ನ ಮಾರ್ಗವೊಂದನ್ನು ಅರಸುವ ಮೂಲಕವೂ ಕನ್ನಡ ಕವಿಗಳು ಕಾವ್ಯ ಕುರಿತಾದ ಚಿಂತನೆಯನ್ನು ಮೂಡಿಸುತ್ತಾರೆ. ಇದನ್ನು ಸೃಜನಶೀಲ ನೆಲೆಯ ಕಾವ್ಯ ಚಿಂತನೆ ಎಂದು ಅವರು ಗುರುತಿಸುತ್ತಾರೆ. ಅಂತಹ ಹೊಸ ಮಾರ್ಗವೊಂದನ್ನು ಕವಿ ರತ್ನಾಕರ ಅನ್ವೇಷಿಸಿದ್ದಾನೆ. ತನ್ನ ಕಾವ್ಯಕ್ಕೆ ಆದಿತೀರ್ಥಂಕರನ ಮಗ ಭರತನನ್ನು ನಾಯಕನನ್ನಾಗಿ ಮಾಡಿರುವುದು ಹೊಸದು. ಪುರಾಣಗಳಲ್ಲಿ ಭರತನ ವ್ಯಕ್ತಿತ್ವ ಘನತೆಯುಳ್ಳಂತೆ ಚಿತ್ರಿತವಾಗಿಲ್ಲ. ಆತ ಸ್ವಾರ್ಥಿ, ಅಹಂಕಾರಿ, ಮುಂಗೋಪಿ ಎಂಬಂತೆ ಚಿತ್ರಿತವಾಗಿದೆ. ಆದರೆ ರತ್ನಾಕರ ವರ್ಣಿ ಈ ಭರತನನ್ನು ನಾಯಕನ್ನಾಗಿ ಆಯ್ಕೆ ಮಾಡಿಕೊಂಡಿರುವುದೇ ಒಂದು ವಿಧದಲ್ಲಿ ಸವಾಲನ್ನು ಸ್ವೀಕರಿಸಿದಂತಿದೆ. ತನಗಿಂತ ಮೊದಲಿದ್ದ ಸಿದ್ಧ ಮಾದರಿಯನ್ನು ತ್ಯಜಿಸಿ ಹೊಸ ಮಾದರಿಯೊಂದನ್ನು ರೂಪಿಸಿದ್ದಾನೆ ರತ್ನಾಕರ. ಪ್ರಾಚೀನ ಮತ್ತು ಮಧ್ಯಮಕಾಲೀನ ಕನ್ನಡ ಕವಿಗಳು ತಮ್ಮ ಕಾವ್ಯದ ಪೀಠಿಕಾ ಭಾಗಗಳಲ್ಲಿ ದೇವತಾ ಸ್ತುತಿಯಾದ ಮೇಲೆ, ಕಾವ್ಯ ಎಂದರೇನು ಕಾವ್ಯ ಹೇಗಿರಬೇಕು ಕಾವ್ಯದಿಂದ ಕವಿಗೆ ಹಾಗೂ ಕೇಳುಗರು, ಅಥವಾ ಓದುಗರಿಗೆ ಆಗಬಹುದಾದ ಲಾಭಗಳೇನು? : ಒಳ್ಳೆಯ ಕವಿತೆ ಯಾವುದು ಕೆಟ್ಟ ಕವಿತೆ ಎಂತಹುದು ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ. ಕಾವ್ಯದ ಆರಂಭದಲ್ಲಿ ಅಂತ್ಯದಲ್ಲಿ ಹಾಗೂ ಪ್ರಾಸಂಗಿಕವಾಗಿ ಕಾವ್ಯದ ಮಧ್ಯದಲ್ಲಿಯೂ ಈ ವಿಚಾರಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಈ ವಿಚಾರಗಳು ಕವಿಯಿಂದ ಕವಿಗೆ ಭಿನ್ನವೂ ಆಗುತ್ತವೆ. ಕೆಲವು ಸಮಾನವಾಗಿಯೂ ಇರುತ್ತವೆ. ಈ ನಿಯಮಕ್ಕೆ ರತ್ನಾಕರವರ್ಣಿ ಹೊರತೇನೂ ಅಲ್ಲ. 'ಭರತೇಶ ವೈಭವ'ದಲ್ಲಿ ಕಾವ್ಯ ಕುರಿತಾಗಿರುವ ಅವನ ಚಿಂತನೆಗಳು ಅಲ್ಲಲ್ಲಿ ಚದುರಿಕೊಂಡಿವೆ. ಇವುಗಳನ್ನು ಒಟ್ಟುಗೂಡಿಸಿದಾಗ ಕಾವ್ಯದ ಬಗೆಗೆ ಕವಿಯ ಅಭಿಪ್ರಾಯಗಳೇನು ತನ್ನ ಕಾವ್ಯದ ಮೂಲಕ ಕವಿ ಕೊಡುವ ಜೀವನ ದರ್ಶನವೇನು ಎನ್ನುವುದನ್ನು ಕಂಡುಕೊಳ್ಳಬಹುದು. ಈ ಎಲ್ಲ ವಿಷಯಗಳನ್ನು ಆತನ ಕಾಲ ಮತ್ತು ಪರಿಸರ ಹಿನ್ನಲೆಯಲ್ಲಿಯೇ ಗಮನಿಸುವುದು ಅಗತ್ಯವಾಗುತ್ತದೆ. ಪ್ರತಿಯೊಬ್ಬ ಕವಿಯೂ ತನ್ನ ಕಾಲದ ಹಾಗೂ ಪರಿಸರದ ಶಿಶು. ಈ ಕಾಲದ ಮನೋಧರ್ಮ ಹಾಗೂ ಅವನು ಬಾಳಿದ ಪರಿಸರವೆರಡೂ ಅವನ ಕಾವ್ಯವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ ಎಂಬುದನ್ನು ಮರೆಯಲಾಗದು.

ರತ್ನಾಕರವರ್ಣಿಯು ೧೬ನೇ ಶತಮಾನದವನು. ಈ ಶತಮಾನವು ಕರ್ನಾಟಕದ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅನೇಕ ಸ್ಥಿತ್ಯಂತರಗಳನ್ನುಂಟುಮಾಡಿತು. ಆ ಹೊತ್ತಿಗಾಗಲೇ ಮುಸ್ಲಿಂ ಅರಸರ ಆಡಳಿತ ಕರ್ನಾಟಕಕ್ಕೆ ವಿಸ್ತರಿಸಿಕೊಂಡಿತ್ತು. ವಿಜಯನಗರ ಸಾಮ್ರಾಜ್ಯ ತಲೆಯೆತ್ತಿ ಹಿಂದು ಧರ್ಮವನ್ನು ಎತ್ತಿ ಹಿಡಿಯುವ ಪ್ರಯತ್ನದಲ್ಲಿತ್ತು ವೈಷ್ಣವ ಹಾಗೂ ವೀರಶೈವ ಧರ್ಮಗಳು ಪ್ರಬಲವಾಗಿದ್ದವು. ಇವುಗಳ ಮಧ್ಯದಲ್ಲಿ ಜೈನ ಧರ್ಮ ಕಡೆಗಣಿಸಲ್ಪಟ್ಟಿತ್ತು. ಜೈನ ಧರ್ಮ ಕರ್ನಾಟಕದ ಕೊನೆ ಮೂಲೆ ಕರಾವಳಿಯಲ್ಲಿ ಜೀವ ಹಿಡಿದುಕೊಂಡಿತ್ತು. ಕರಾವಳಿಯಲ್ಲಿ ಸಣ್ಣಪುಟ್ಟ ಸಾಮಂತರಾಜರು ಕಾರ್ಕಳ ವೇಣುಪುರ ಮುಂತಾದ ಕಡೆಗಳಲ್ಲಿ ಆಳುತ್ತಿದ್ದರು. ಅವರು ಜೈನಧರ್ಮದ ಅನುಯಾಯಿಗಳಾಗಿದ್ದರು. ಅಲ್ಲದೆ ಜೈನಧರ್ಮಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದರು. ರತ್ನಾಕರವರ್ಣಿಯೂ ಜೈನ ಮತಾನುಯಾಯಿ. ಮೂಡಬಿದಿರೆಯ ಭೈರರಸರ ಆಶ್ರಯದಲ್ಲಿದ್ದ ಆತ ಸ್ವತಃ ಕಾರ್ಕಳ ಅರಸು ಮನೆತನದವನಾಗಿದ್ದನೆಂದು ಚರಿತ್ರೆಯಿಂದ ತಿಳಿದು ಬರುತ್ತದೆ.

ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಂಡುಬರುವ ಪ್ರಮುಖ ಅಂಶಗಳೆಂದರೆ, ಕರ್ನಾಟಕವು ಸಂಪತ್ಸಮೃದ್ಧಿಯಿಂದ ಕೂಡಿತ್ತು. ಶ್ರೀಮಂತರು, ಸಾಮಂತರು, ಸುಖಲೋಲುಪರೂ ಭೋಗಾಸ್ತಕರೂ ಆಗಿದ್ದರು. ಅಂದಿನ ವಿಜಯನಗರದ ವೈಭವವನ್ನು ವಿದೇಶೀ ಪ್ರವಾಸಿಗರು ತಮ್ಮ ಬರಹಗಳಲ್ಲಿ ತುಂಬ ವಿವರವಾಗಿಯೇ ದಾಖಲಿಸಿದ್ದಾರೆ. ಆ ಕಾಲದಲ್ಲಿ ರಚನೆಯಾದ ಮೋಹನ ತರಂಗಿಣಿ, ಭರತೇಶವೈಭವ ಮುಂತಾದ ಕಾವ್ಯಗಳಲ್ಲಿ ಈ ವೈಭವ ಪ್ರತಿಬಿಂಬಿತವಾಗಿದೆ. ಶ್ರೀಮಂತರು ಭೌತಿಕ ಜೀವನದ ಸೆಳವಿನಲ್ಲಿ ಕೊಚ್ಚಿ ಹೋಗುತ್ತಿದ್ದರು. ಇನ್ನು ಧರ್ಮಗಳ ಮೇಲಾಟಗಳು ಇದ್ದುವು. ಅಲ್ಲದೆ, ಧಾರ್ಮಿಕ ಗುರುಗಳು ತಮ್ಮ ಧರ್ಮದ ಉಳಿವು ಮತ್ತು ಬೆಳವಣಿಗೆಗಾಗಿ ಶ್ರಮಿಸುತ್ತಿದ್ದು. ಆ ಕಾರಣವೇ ವ್ಯಾಸಕೂಟ ದಾಸಕೂಟಗಳೂ ತಲೆಯೆತ್ತಿದವು. ವೀರಶೈವರು ಮತ್ತು ವೈಷ್ಣವರು ಸಂಸ್ಕೃತ ಕೃತಿಗಳಿಗೆ ವ್ಯಾಖ್ಯಾನ ಟೀಕೆ ಭಾಷ್ಯಗಳನ್ನು ರಚಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಅದರೊಂದಿಗೆ ಮತಧರ್ಮಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳು ರಚನೆಯಾಗತೊಡಗಿದವು.

ಸಾಹಿತ್ಯದ ದೃಷ್ಟಿಯಿಂದ ಹೇಳುವುದಾದರೆ ಇದು ದೇಸಿ ಛಂದಸ್ಸಿನ ಯುಗ, ಓದುವ ಕಾವ್ಯಗಳಿಗಿಂತ ಹಾಡಲು ಯೋಗ್ಯವಾದ ಮಟ್ಟುಗಳ ಬಳಕೆಯಾಗುತ್ತಿತ್ತು. ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ ಮುಂತಾದ ದೇಸಿ ಮಟ್ಟುಗಳನ್ನು ಕವಿಗಳು ಆಯ್ದುಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ರತ್ನಾಕರವರ್ಣಿಯ ಕಾವ್ಯತಾತ್ವಿಕತೆಯನ್ನು ಅವನ ಮಾತುಗಳ ಮೂಲಕವೇ ಕಟ್ಟಿಕೊಳ್ಳಬಹುದಾಗಿದೆ.

ರತ್ನಾಕರ ಜೈನಧರ್ಮಕ್ಕೆ ಸೇರಿದ ಕವಿ. ಅವನು ಸ್ವಭಾವತಃ ಆಧ್ಯಾತ್ಮದ ಕಡೆಗೆ ಒಲವುಳ್ಳವನು. ಹಾಗೆಂದು ಅರಸಿಕನೇನಲ್ಲ, ಜೀವನ ಪ್ರೀತಿಯುಳ್ಳವನು. ಈ ವಿಷಯಗಳು ಕೂಡ ಅವನ ಕಾವ್ಯ ಚಿಂತನೆಯನ್ನು ರೂಪಿಸುವಲ್ಲಿ ದುಡಿದಿವೆಯೆಂದು ಹೇಳಬಹುದು. ಕವಿಗಿರುವ ಹೆಸರುಗಳು ರತ್ನಾಕರ ಅಣ್ಣ, ರತ್ನಾಕರಾರ್ಯ ರತ್ನಾಕರವರ್ಣಿ ಹಾಗೂ 'ರತ್ನಾಕರ ಸಿದ್ಧ' ಎನ್ನುವವುಗಳಲ್ಲಿ 'ರತ್ನಾಕರಸಿದ್ಧ' ಎಂಬ ಹೆಸರು ತನಗೆ ಅತ್ಯಂತ ಪ್ರಿಯವೆಂದು ಹೇಳಿಕೊಳ್ಳುತ್ತಾನೆ. ಇದು ಆತನ ಆಧ್ಯಾತ್ಮಿಕ ಒಲವಿಗೆ ದ್ಯೋತಕವಾಗಿದೆ.

> "ಬಿನ್ನಹ ಗುರುವೆ ಧ್ಯಾನಕ್ಕೆ ಬೇಸರಾದಾಗ
> ನಿನ್ನನಾದಿಯ ಮಾಡಿಕೊಂಡು
> ಕನ್ನಡದೊಳಗೊಂದು ಕಥೆಯ ಪೇಳುವೆನದು
> ನಿನ್ನಾಜ್ಞೆ ಕಂಡ್ಯ ನನ್ನೊಡೆಯ"

ಈ ಪದ್ಯದಲ್ಲಿ ಬರುವ 'ಧ್ಯಾನಕ್ಕೆ ಬೇಸರಾದಾಗ ತಾನು ಗುರುವನ್ನು ಆದಿಯಾಗಿಟ್ಟುಕೊಂಡು ಕನ್ನಡದಲ್ಲಿ ಕತೆಯೊಂದನ್ನು ಹೇಳುತ್ತೇನೆ ಎನ್ನುವ ಮಾತು ಗಮನಾರ್ಹ. ಧ್ಯಾನದ ಏಕತಾನತೆಯಿಂದ ಬೇಸರವಾದಾಗ ಅದನ್ನು ನೀಗಲು ಕಾವ್ಯರಚನೆಯನ್ನು ಕೈಗೊಂಡಿದ್ದು ಗುರುವಿನ ಆಜ್ಞೆಯನ್ನು ಪಾಲಿಸಲೆಂದು, ಅಂದರೆ ಕಾವ್ಯವನ್ನು ಧ್ಯಾನಕ್ಕೆ ಪರ್ಯಾಯವಾಗಿ ಮಾಡಿಕೊಂಡವನು ರತ್ನಾಕರ. ಕಾವ್ಯ ಬೇರೆಯಲ್ಲ ಧ್ಯಾನ ಬೇರೆಯಲ್ಲ ಎನ್ನುವ ಆತನ ಮಾತು ಮಹತ್ವದ್ದು. ಕಾವ್ಯವು ಧ್ಯಾನಕ್ಕೆ ಸಮಾನವಾದುದು, ಧ್ಯಾನದಿಂದ ಪಡೆಯಬಹುದಾದ ಫಲವನ್ನು ಕಾವ್ಯದಿಂದಲೂ ಪಡೆಯಬಹುದೆನ್ನುವ ಮಾತು ಬಹುದೊಡ್ಡದು. ಬೇರೆ ಯಾವ ಕನ್ನಡ ಕವಿಯೂ ಹೀಗೆ ಹೇಳಿಲ್ಲ. ಇದು ರತ್ನಾಕರನ ವೈಶಿಷ್ಟ್ಯ. ಮುಂದುವರಿದು ಓದುಗಬ್ಬ, ಹಾಡುಗಬ್ಬಗಳೆಂಬ ಎರಡು ಪ್ರಕಾರಗಳನ್ನು ಉಲ್ಲೇಖಿಸುತ್ತ ಕಬ್ಬ ಎನ್ನುವ ಪದದೊಂದಿಗೆ ಆಡುತ್ತ ಕಬ್ಬಿನಂತೆ ರಸ ತುಂಬಿದ ಕಾವ್ಯ ರಚಿಸಬೇಕೇ ಹೊರತು ಬಿದಿರಿನಂತದನ್ನು ಅಲ್ಲ ಎನ್ನುತ್ತಾನೆ. ಎಂದರೆ ಕಾವ್ಯವು ರಸಭರಿತವಾಗಿ ಕಬ್ಬಿನಂತೆ ರುಚಿಸಬೇಕು ಎನ್ನುತ್ತಾನೆ. ಅನಂತರ ಆತ ಕಾವ್ಯದ ಪ್ರಭೇದಗಳನ್ನು ಉಲ್ಲೇಖಿಸುತ್ತಾ ತಾನು ಯಾವುದನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂಬುದನ್ನು ಸೂಚಿಸುತ್ತಾನೆ. ವಸ್ತುಕ ವರ್ಣಕವೆಂಬ ಎರಡು ಕಾವ್ಯ ಮಾದರಿಗಳು ಆಗಲೇ ಕನ್ನಡ ಕಾವ್ಯ ಪ್ರಪಂಚದಲ್ಲಿ ಸ್ಥಾಪಿತವಾಗಿದ್ದವು. ಅವುಗಳಲ್ಲಿ ವಸ್ತುಕಕ್ಕೆ ಹೆಚ್ಚಿನ ಮನ್ನಣೆಯಿತ್ತು. ಯಾಕೆಂದರೆ ವಸ್ತುಕವು ಕಾವ್ಯದ ಸಕಲ ಲಕ್ಷಣಗಳಿಂದ ಕೂಡಿದ್ದು ಅದುವೇ ಶ್ರೇಷ್ಠ ಎಂಬ ಭಾವನೆ ಆ ಹೊತ್ತಿಗಾಗಲೇ ಜನಜನಿತವಾಗಿತ್ತು. ವರ್ಣಕವೆಂದರೆ ಮೂತು ಮುರಿಯುವವರು ಇದ್ದರು. ಹಾಗಿದ್ದಾಗ್ಯೂ ಅಂದಿನ ಕವಿಗಳು ವರ್ಣಕವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಹರಿಹರನಿಂದಲೇ ಈ ಪರಂಪರೆ ಪ್ರಾರಂಭವಾಗುತ್ತದೆ. ರಗಳೆ ಷಟ್ಪದಿ ಮುಂತಾದ ದೇಸೀ ಛಂದೋ ಬಂಧಗಳನ್ನು ಕವಿಗಳು ಬಳಸಿದರು. ರತ್ನಾಕರನು ಸಾಂಗತ್ಯವನ್ನು ಆಯ್ಕೆ ಮಾಡಿಕೊಂಡು ಕಾವ್ಯ ರಚಿಸಿದನು. ಸಾಂಗತ್ಯವು ಅಂಶಗಣಗಳಿಂದ ರೂಪಿತವಾಗಿದ್ದು

ಹಾಡಲು ಅತ್ಯಂತ ಯೋಗ್ಯವಾಗಿದೆ. ಈ ಛಂದಸ್ಸು ರಗಳೆ. ಷಟ್ಪದಿಗಳಿಗೆ ಹೋಲಿಸಿದರೆ ಹೆಚ್ಚು ನಮ್ಯ (Flexible) ಗುಣವುಳ್ಳದ್ದು. ರಗಳೆ ಷಟ್ಪದಿಗಳು ಮಾತ್ರಾಗಣ ಘಟಿತಗಳಾಗಿರುವುದರಿಂದ ತಾಳಪ್ರಧಾನವಾಗಿವೆ. ಆದರೆ ಸಾಂಗತ್ಯವು ಲಯಾನುಸಾರಿಯಾಗಿ ರಾಗಪ್ರಧಾನವಾಗಿದೆ. ಹಾಡುವಾಗ ಗಣಗಳನ್ನು ಹಿಗ್ಗಿಸುವ ಕುಗ್ಗಿಸುವ ಎರಡೂ ಸೌಲಭ್ಯಗಳು ಇದಕ್ಕಿವೆ. ಹಾಡುವಿಕೆಗೆ ಒಗ್ಗುವ ಛಂದೋಬಂಧವಿದು. ಓದುಗಬ್ಬಕ್ಕಿಂತ ಹಾಡುಗಬ್ಬವು ಜನಮಾನಸವನ್ನು ಬೇಗ ತಲುಪುತ್ತದೆ ಎಂಬುದನ್ನು ರತ್ನಾಕರ ಬಲ್ಲವನಾಗಿದ್ದ ಕಾರಣ ಆತ ಸಂವಹನದ ದೃಷ್ಟಿಯಿಂದ ವರ್ಣಕ ಕಾವ್ಯವನ್ನು, ಹಾಡುಗಬ್ಬವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಕಾವ್ಯ ಲಕ್ಷಣದ ವಿಷಯವಾಗಿ ಮಾತನಾಡುವ ರತ್ನಾಕರ ವಸ್ತುಕವು ಸಕಲ ಲಕ್ಷಣಗಳಿಂದ ಕೂಡಿರುತ್ತದೆ. ವರ್ಣಕಕ್ಕೆ ಇಂತಹ ನಿರ್ಬಂಧಗಳಿಲ್ಲ ಅದು ಈ ನಿರ್ಬಂಧಗಳಿಂದ ಮುಕ್ತವಾದುದು. ಎಲ್ಲ ಲಕ್ಷಣಗಳನ್ನು ಅನುಸರಿಸಿಯೇ ರಚನೆ ಮಾಡುತ್ತೇನೆಂದು ಹೊರಟು ಕಾವ್ಯವನ್ನು ಬಿರುಸು ಮಾಡಿದರೆ ಅದು ಪುಸ್ತಕದ ಬದನೆಕಾಯಾಗುತ್ತದೆ ಎನ್ನುತ್ತಾನೆ. ಪುಸ್ತಕದ ಬದನೆಕಾಯಿ ಎಂಬ ರೂಪಕ ವಿಶಿಷ್ಟವಾದುದು. ಪುಸ್ತಕದ ಬದನೆಕಾಯಿ ನೋಡಬಹುದೇ ಹೊರತು ಅದಕ್ಕಿಂತ ಹೆಚ್ಚಿನ ಪ್ರಯೋಜನವಿಲ್ಲ. ಅದು ಆಸ್ವಾದ್ಯವಾಗುವುದಿಲ್ಲ. ರತ್ನಾಕರನಿಗೆ ತನ್ನ ಕಾವ್ಯ ಬಿದಿರಿನಂತೆ ಬಿರುಸಾಗುವುದಾಗಲೀ, ಪುಸ್ತಕದ ಬದನೆಕಾಯಿ ಆಗುವುದಾಗಲೀ ಇಷ್ಟವಿಲ್ಲ. ಆದ್ದರಿಂದಲೇ ಲಕ್ಷಣಗಳಲ್ಲಿ ಕೆಲವನ್ನ ಕೈಬಿಟ್ಟರೂ ಸರಿಯೇ ವರ್ಣಕವೆ ತನ್ನ ಕಾವ್ಯಮಾರ್ಗ, ವರ್ಣಕದಲ್ಲಿಯೇ ತಾನು ರಚಿಸುವುದಾಗಿ ಹೇಳಿಕೊಳ್ಳುತ್ತಾನೆ. ಹಾಡುಗಾರಿಕೆಯು ಏಕಕಾಲದಲ್ಲಿ ಪಂಡಿತರು ಪಾಮರರು ಹೆಂಗಸರು ಎಲ್ಲರನ್ನೂ ತಲುಪುತ್ತದೆ. ಓದುಗಬ್ಬಕ್ಕೆ ವ್ಯಾಖ್ಯಾನ ವಿಶ್ಲೇಷಣೆ ಟೀಕು ಟಿಪ್ಪಣಿಗಳು ಬೇಕು. ಹಾಡುಗಬ್ಬ ಇವ್ಯಾವುದನ್ನೂ ಬಯಸದೆ ಕೇಳುಗರನ್ನು ರಂಜಿಸುವ ಗುಣವುಳ್ಳದು. ಈ ಮಾತಿಗೆ ನಿದರ್ಶನವಾಗಿ ರತ್ನಾಕರನ ಹೇಳಿಕೆಯನ್ನು ನೋಡಬಹುದು. ಕನ್ನಡಿಗರು ತೆಲುಗರು ಹಾಗೂ ತುಳುವರು ಎಲ್ಲರೂ ಕನ್ನಡದ ಈ ಕಾವ್ಯ ಬಹಳ ಸುಂದರವಾಗಿದೆಯೆಂದು ಮೆಯ್ಯುಬ್ಬಿ ಕೇಳಬೇಕು ಎಂದಿರುವುದು, ಕೇವಲ ಕನ್ನಡಿಗರಲ್ಲ ತೆಲುಗರೂ ತುಳುವರೂ ಕೂಡ ಮೆಚ್ಚುವಂತಹ ಕಾವ್ಯ ತನ್ನದಾಗಬೇಕು ಅದಕ್ಕೆ ವರ್ಣಕ ಅಥವಾ ಹಾಡುಗಬ್ಬವೇ ದಾರಿ ಎನ್ನುತ್ತಾನೆ.

ಕನ್ನಡದ ಮಾರ್ಗ ಕೃತಿಗಳಲ್ಲಿ, ಆಶ್ರಯದಾತ ರಾಜರನ್ನು ಪುರಾಣ ನಾಯಕರೊಂದಿಗೆ ಸಮೀಕರಣಗೊಳಿಸಿ ಹೇಳುವ ಪದ್ಧತಿ ಇತ್ತು. ಇದನ್ನು ರತ್ನಾಕರ ಲೇವಡಿ ಮಾಡುತ್ತಾನೆ. 'ಹೊಲ್ಲದ ನೃಪರಿಗೆ ಇಲ್ಲದ ಗುಣಗಳನಿಟ್ಟು ಸೊಲ್ಲಿಪ ಕೃತಿ ಮಾರ್ಗವಲ್ಲ' ವ್ಯಕ್ತಿಯಲ್ಲಿ ಇರುವ ಸದ್ಗುಣಗಳನ್ನು ಚೆನ್ನಾಗಿ ಕಂಡು ಬಣ್ಣಿಸುವುದು ಸುಲಭವೇನಲ್ಲ ಎನ್ನುತ್ತಾನೆ. ತನ್ನ ಕತೆಯ ನಾಯಕ, ಪುರಾಣದ ಪರಿವೇಶ ತೊಟ್ಟ ಆಶ್ರಯದಾತ ರಾಜನಲ್ಲ. ಆತ ನಿಜವಾಗಿಯೂ ಭವ್ಯನು ಎಂದು ಹೇಳಿಕೊಳ್ಳುತ್ತಾನೆ.

ಕತೆಗಳಲ್ಲಿ ಅನೇಕ ಬಗೆಗಳು. ಯುದ್ಧದ ಕತೆ, ಜಾರರ ಚೋರರ ಕತೆ, ಕಾಮನ ಕತೆ, ಗಣಿಕೆಯರ ಕತೆಗಳನ್ನು ಕೇಳಿ ಭವಕ್ಕೆ ಒಳಗಾಗುವವರಿದ್ದಾರೆ. ಆಧ್ಯಾತ್ಮವನ್ನು ಮೆಚ್ಚುವವರಾರು (೨-೫೩) ಎನ್ನುವಲ್ಲಿ ತಾನು ಆಧ್ಯಾತ್ಮ ವಿಷಯವನ್ನಿಟ್ಟುಕೊಂಡು ಕೃತಿ ರಚನೆ ಮಾಡುವುದಾಗಿ ಸೂಚಿಸುತ್ತಾನೆ. ಆಗಮ ಮತ್ತು ಆಧ್ಯಾತ್ಮದ ಜೊತೆಗೆ ಶೃಂಗಾರವನ್ನು ಬೆರಸಿ ಕತೆ ಹೇಳುವೆನೆನ್ನುತ್ತಾನೆ. ರತ್ನಾಕರವರ್ಣಿಯ ಗಮನವು ಆಧ್ಯಾತ್ಮವನ್ನು ಕಾವ್ಯದ ಮೂಲಕ ಉಣಬಡಿಸಬೇಕು ಎಂಬುದರ ಕಡೆಗಿದೆ. ಆದರೆ ಕೇವಲ ಆಧ್ಯಾತ್ಮವೊಂದನ್ನೇ ಹೇಳಿದರೆ ಅದು ಮೆಚ್ಚಾಗುವುದಿಲ್ಲ. ಅದಕ್ಕೆ ಶೃಂಗಾರವನ್ನು ಬೆರೆಸಿ ಹೇಳದರೆ ಸ್ವಲ್ಪಮಟ್ಟಿಗಾದರೂ ಜನ ಮಾನಸಕ್ಕೆ ಆತ್ಮವಿಚಾರ ತಲುಪುತ್ತದೆ ಎಂಬುದು ಕವಿಯ ಆಶಯ. ಕವಿಯ ಮುಖ್ಯ ಉದ್ದೇಶ ಆತ್ಮಜ್ಞಾನವನ್ನು ತುಂಬಾ ಸರಳವಾದ ರೀತಿಯಲ್ಲಿ ತಿಳಿಸಿಕೊಡುವಂತಿರುವ ಭಾಗ ಈ ಮಾತಿಗೆ ನಿದರ್ಶನ. ಆಧ್ಯಾತ್ಮ ಜ್ಞಾನ ಪಡೆಯಲು ಹೆಂಗಸರಿಗೂ ಹಕ್ಕಿದೆಯೆನ್ನುವುದನ್ನು ಸೂಚಿಸುತ್ತದೆ ಈ ಭಾಗ.

ಆಧ್ಯಾತ್ಮದ ಜತೆಗೆ ಬರುವ ಶೃಂಗಾರ ಎಷ್ಟು ಮತ್ತು ಯಾಕೆ ಎನ್ನುವುದನ್ನು ಕೂಡ ಅವನು ಹೇಳುತ್ತಾನೆ. ಶೃಂಗಾರಕ್ಕಾಗಿ ಕಷ್ಟದ ಕತೆ ಕೇಳಿ ಜನರು ಕೆಡದಿರಲಿಯೆಂದು ಅಂಗಸುಖಿ ಮತ್ತು ಮೋಕ್ಷಸುಖಿ ಕಾವ್ಯವನ್ನು ಇಷ್ಟು ಶೃಂಗಾರ ಕಟ್ಟಿ ಹೇಳುತ್ತೇನೆ ಎನ್ನುತ್ತಾನೆ. ತನ್ನ ನಾಯಕ ಅಂಗಸುಖಿಯೂ ಹೌದು. ಆತನಿಗೆ ೯೬,೦೦೦ ಮಡದಿಯರು, ರಾಜವೈಭೋಗ. ಅದರೆ ಆತ ಅದರಲ್ಲೇ ಮೈಮರೆಯಲಿಲ್ಲ. ಆತ ಮೋಕ್ಷ ಸುಖಿಯೂ ಹೌದು. ಆತ್ಮಜ್ಞಾನ ಸುಖದಲ್ಲಿ ಓಲಾಡುವವನು. ಅವನ ಕತೆಗೆ 'ಇಷ್ಟು' ಎನ್ನುವಲ್ಲಿ ಕಡಿಮೆ ಪ್ರಮಾಣದಲ್ಲಿ ಶೃಂಗಾರ ಬೆರೆಸಿರುವುದಾಗಿ ಹೇಳುತ್ತಾನೆ. ಆದರೂ ಕಾವ್ಯದ ಒಳಗೆ ಅದರ ಪ್ರಮಾಣ ರತ್ನಾಕರ ಹೇಳಿರುವಂತೆ ಕಡಿಮೆಯೇನಿಲ್ಲ. ಶೃಂಗಾರಕ್ಕಾಗಿ ದುಷ್ಟರು, ಪಾದರಿಯರು. ನೀಚಸತಿಯರ ಕತೆಯನ್ನು ಹೇಳುತ್ತಿಲ್ಲ. ಭರತಚಕ್ರಿ ಮತ್ತು ಆತನ ಹೆಂಡತಿಯರನ್ನು ಕುರಿತು ಹೇಳುತ್ತೇನೆ ಅವರನ್ನು ನೆನೆದವರಿಗೆ ಪುಣ್ಯ ಲಭಿಸುತ್ತದೆ ಎಂದಿದ್ದಾನೆ. ಪಾದರಿಯರ ದುಷ್ಟರ ನೀಚಸತಿಯರ ಕತೆಗಳನ್ನು ದುಷ್ಕತೆಗಳು ಎಂದಿದ್ದಾನೆ. ತನ್ನದು ಸುಕಥೆ ಜಾರಚೋರರ ವಿಚಾರವಿಲ್ಲ ಏನಿದ್ದರೂ ಭರತ ಮತ್ತು ಆತನ ಹೆಂಡಿತಿಯರ ಕಥೆಯಿದು. ಇದು ಸುಕಥೆ. ಗಂಡಹೆಂಡತಿಯರ ಮಧ್ಯದ ಶೃಂಗಾರ ಬಿತ್ತರಿಸುವುದು ತಪ್ಪೇನೂ ಅಲ್ಲ ಎಂಬ ಅರ್ಥವಿದೆಯಿಲ್ಲಿ. ಹೀಗೆ ತನ್ನ ಕಾವ್ಯವು ಒಳಗೊಂಡ ವಿಚಾರಗಳನ್ನು ತನ್ನ ಕಾವ್ಯ ಸ್ವರೂಪವನ್ನು ಕುರಿತು ರತ್ನಾಕರ ಬಹಳ ಸ್ಪಷ್ಟ ನಿಲುವನ್ನು ಮಂಡಿಸುತ್ತಾನೆ. ತಾನು ಹೇಳುತ್ತಿರುವುದು ಆಧ್ಯಾತ್ಮ ಅದಕ್ಕೆ ಶೃಂಗಾರ ಬೆರೆತಿದೆ. ಕತೆಯ ನಾಯಕ ಆದಿತೀರ್ಥಂಕರನ ಮಗ ಭರತೇಶ ಮತ್ತು ಆತನ ಹೆಂಡತಿಯರು, ತನ್ನ ಆಯ್ಕೆ ವರ್ಣಕವಾದ ಹಾಡುಗಬ್ಬ, ಎಂತೆಂತದೋ ಕೆಟ್ಟಕತೆಗಳನ್ನೆಲ್ಲ ಕೇಳಿ ಜನರು ಕೆಡದಿರಲೆಂದು ಭರತನ ಕತೆ ಹೇಳುತ್ತಿದ್ದೇನೆ. ಹೇಳುವಲ್ಲಿ

ಹದಿನೆಂಟು ವರ್ಣನೆಗಳು ಬರಲಿ ಎಂಬ ನಿಯಮಕ್ಕೆ ನಾನು ಒಳಗಾದವನಲ್ಲ. ರಳಕುಳವೆಂಬ ವ್ಯಾಕರಣ ನಿಯಮಗಳನ್ನು ನಾನು ಕಟ್ಟುನಿಟ್ಟಾಗಿ ಅನುಸರಿಸಿಲ್ಲ. ಸುಗಮವಾಗಿ ಕತೆ ಸಾಗಿ ಸುಲಭವಾಗಿ ಜನರ ಮನವನ್ನು ಮುಟ್ಟಬೇಕೆಂಬ ಉದ್ದೇಶ ಹೀಗೆ ಬಹಳ ಖಚಿತವಾಗಿ ತನ್ನ ನಿಲುವುಗಳನ್ನು ಮಂಡಿಸಿದ ರತ್ನಾಕರವರ್ಣಿ ಸಹೃದಯರು, ಮತ್ತು ಕಾವ್ಯ ಪ್ರಯೋಜನದ ಕುರಿತಾಗಿಯೂ ಹೇಳುತ್ತಾನೆ. ತನ್ನ ಕಾವ್ಯದ ಕೇಳುಗರಾರು ಎಂದರೆ ಇಲ್ಲಿ ಪಂಡಿತ ಪಾಮರ ಎಂದು ಹೇಳದೆ ಭೋಗಿಗಳು ಯೋಗಿಗಳು ಇಬ್ಬರೂ ಎಂದಿರುವುದು ವಿಶೇಷ. ಇದು ಯಾರೋ ಕೆಲವರನ್ನು ಉದ್ದೇಶಿಸಿ ಹೇಳಿದ್ದಲ್ಲ. ಭೋಗದಲ್ಲಿರುವ ಸಂಸಾರಿಗಳು ಹಾಗೂ ಯೋಗ ಸಾಧನೆಯಲ್ಲಿ ತೊಡಗಿರುವ ಬ್ರಹ್ಮಚಾರಿಗಳು ಇಬ್ಬರಿಗೂ ನನ್ನ ಕಾವ್ಯ ಸಮಾನವಾಗಿ ಮೆಚ್ಚಾಗುತ್ತದೆ ಎನ್ನುತ್ತಾನೆ. 'ಭೋಗಿಯೋಗಿಗಳೆದೆ ಜುಮ್ಮು ಜುಮ್ಮೆನೆ ನೇಮವಾಗಿ ಸೊಲ್ಲಿಸುವೆ' ಎಂದಿರುವ ಕವಿಯ ಮಾತು ವಿಶಿಷ್ಟವಾಗಿದೆ. ಭೋಗಿ ಯೋಗಿ ಇವು ಎರಡು ಧ್ರುವಗಳಾಗದೆ ಆ ಎರಡು ತತ್ವಗಳು ಏಕಗೊಳ್ಳಬೇಕು. ಇವೆರಡೂ ಒಂದು ನಾಣ್ಯದ ಎರಡು ಮುಖಗಳಂತೆ, ಪ್ರತಿಯೊಬ್ಬರೂ ಜೀವನದಲ್ಲಿ ಈ ಎರಡನ್ನೂ ಸಾಧಿಸಬೇಕು. ಬರಿಯ ಭೋಗದಲ್ಲಿ ಮುಳುಗಿ ಯೋಗವನ್ನು ಮರೆಯುವುದೂ ಸರಿಯಲ್ಲ. ಕೇವಲ ಯೋಗ ಸಾಧನೆ ಮಾಡುತ್ತ ಅಂಗಸುಖವನ್ನು ತೊರೆಯುವುದೂ ಸಲ್ಲ. ಈ ಬದುಕು ಸಾರ್ಥಕವಾಗಲು ಎರಡೂ ಅಗತ್ಯವೆನ್ನುವುದು ರತ್ನಾಕರನ ಆಶಯ. ಕವಿ ಕೂಡ ಈ ಎರಡನ್ನು ಅನುಭವಿಸಿದವ ನೆಂದು ಅವನ ಸುತ್ತ ಹೆಣೆದಿರುವ ಕತೆಗಳಿಂದ ತಿಳಿಯುತ್ತದೆ.

ಇನ್ನು ಈ ಕತೆಯಿಂದಾಗುವ ಪ್ರಯೋಜನಗಳು ಕೂಡ ವಿಶಿಷ್ಟವೆ. ಕವಿಗಾಗುವ ಪ್ರಯೋಜನವೆಂದರೆ, ಆಧ್ಯಾತ್ಮವೇ ನಿಶ್ಚಿತ ಪ್ರಯೋಜನ ಎಂದು ಹೇಳಿಕೊಳ್ಳುತ್ತಾನೆ. ಧ್ಯಾನಕ್ಕೆ ಬೇಸರಾದಾಗ ಅದರ ಬದಲು ಕಾವ್ಯ ರಚನೆ ಮಾಡುತ್ತಿದ್ದೇನೆ. ತನ್ನ ಆತ್ಮಲೀಲಾನುವೃದ್ಧಿಗಾಗಿ ಕಾವ್ಯ ರಚಿಸುತ್ತೇನೆ ಎನ್ನುತ್ತಾನೆ.

ಇನ್ನು ಕಾವ್ಯ ಕೇಳುವವರಿಗೇನು ಪ್ರಯೋಜನ ಎಂದರೆ ಈ ಕಾವ್ಯ ಭರತೇಶವೈಭವ; ಇದನ್ನು ಕೇಳಿದರೆ ಸೌಭಾಗ್ಯವುಂಟಾಗುತ್ತದೆ ಶೋಭನವಹುದು ಇಂದ್ರಪದವಿಯೂ ದೊರಕುತ್ತದೆ ಕಟ್ಟಕಡೆಗೆ ಮೋಕ್ಷ ಲಾಭವಿದೆ ಎಂದು ಹೇಳುತ್ತಾನೆ.

ಈ ಸಂದರ್ಭದಲ್ಲಿ ಕುಮಾರವ್ಯಾಸನು ಹೇಳುವ ತನ್ನ ಕಾವ್ಯದಿಂದಾಗುವ ಪ್ರಯೋಜನಗಳ ಜೊತೆಗೆ ರತ್ನಾಕರನ ಕಾವ್ಯ ಪ್ರಯೋಜನಗಳನ್ನು ಹೋಲಿಸಿ ನೋಡಬಹುದು. ಕುಮಾರವ್ಯಾಸನು ತನ್ನ ಕಾವ್ಯಗಳಿಂದಾಗುವ ಲಾಭಗಳನ್ನು.

"ಅರಸುಗಳಿಗಿದು ವೀರ ದ್ವಿಜರಿಗೆ ಪರಮವೇದದ ಸಾರ ಮಂತ್ರಿಜನಕೆ ಬುದ್ಧಿಗುಣ ರಸಿಕರಿಗೆ ಶೃಂಗಾರ" ಎನ್ನುವುದರೊಂದಿಗೆ ಗಂಗಾದಿ ತೀರ್ಥಸ್ನಾನ ಫಲ ದೊರೆಯುತ್ತದೆ ಎಂದು

ಪ್ರತಿಯೊಬ್ಬರಿಗೂ ಬೇಕಾದ ಪ್ರಯೋಜನಗಳು ಈ ಕಾವ್ಯದಲ್ಲೂ ಇವೆ. ಇದನ್ನು ಅವರವರು ಪಡೆದುಕೊಳ್ಳಬಹುದು ಎನ್ನುತ್ತಾನೆ. ಆದರೆ ರತ್ನಾಕರವರ್ಣಿ ತನ್ನ ಕಾವ್ಯದ ಕೇಳುಗರನ್ನು ಹೀಗೆ ವಿಭಾಗಿಸದೆ ಭೋಗಿಗಳು ಯೋಗಿಗಳು ಎನ್ನುತ್ತಾನೆ. ಅವರನ್ನು ಭವ್ಯರು ಎಂದು ಕರೆದಿದ್ದಾನೆ. ಅವರಿಗೆ ಸೌಭಾಗ್ಯ ಇಂದ್ರಪದವಿ ಮತ್ತು ಶೋಭನದಂತಹ ಲಾಭಗಳಾಗಿ ಕೊನೆಯಲ್ಲಿ ಮೋಕ್ಷ ಲಾಭವೂ ಆಗುತ್ತದೆ ಎನ್ನುತ್ತಾನೆ.

ರತ್ನಾಕರವರ್ಣಿಯ ಜೀವನ, ದರ್ಶನ ಯಾವುದನ್ನೂ ಇದುವರೆಗಿನ ವಿದ್ವಾಂಸರು ಯೋಗಭೋಗದ ಸಮನ್ವಯ ಎಂದಿದ್ದಾರೋ ಅದುವೇ ಆಗಿದೆ. ಜೀವನದಲ್ಲಿ ಸುಖವನ್ನು ಅನುಭವಿಸುತ್ತ ಅದರಲ್ಲಿಯೇ ಮುಳುಗದೆ ಆತ್ಮಜ್ಞಾನವನ್ನೂ ಪಡೆಯಬೇಕು ಎಂಬುದು ಕವಿಯ ಆಶಯ.

ಲೌಕಿಕ ಆಗಮಿಕವೆಂಬ ಕಾವ್ಯ ಪ್ರಭೇದಗಳನ್ನು ಕುರಿತು ಚರ್ಚಿಸುತ್ತ ಬಿ. ಎ. ವಿವೇಕ ರೈ ಅವರು ಈ ಪ್ರಭೇದಗಳ ಚರಿತ್ರೆಯನ್ನು ಅವಲೋಕಿಸಿರುವ ಕ್ರಮ ಹೀಗಿದೆ. ಪಂಪ ಲೋಕ ಜೀವನವನ್ನು ಧಾರ್ಮಿಕ ಜೀವನದಿಂದ ಬೇರ್ಪಡಿಸಿದ ಕಾರಣ ಲೌಕಿಕ, ಆಗಮಿಕವೆಂಬ ಕಾವ್ಯಗಳೆರಡನ್ನು ಬರೆದ. ಅನಂತರದ ಕವಿಗಳು ಈ ಕ್ರಮವನ್ನು ಅನುಸರಿಸಿದರು. ಆದರೆ ನಾಗಚಂದ್ರ ಈ ಲೌಕಿಕ ಧಾರ್ಮಿಕವೆಂಬ ಸೀಳನ್ನು ಒಪ್ಪದೆ ರಾಮಚಂದ್ರ ಚರಿತ ಪುರಾಣವನ್ನು ಬರೆದ. ಜನ್ನ ಯಶೋಧರ ಚರಿತೆಯಲ್ಲಿ ನಾಗಚಂದ್ರನ ಪರಂಪರೆಯನ್ನು ಮುಂದುವರಿಸಿದ. ಲೌಕಿಕವನ್ನು ಶುದ್ಧ ಲೌಕಿಕವೆಂಬಂತೆ ಉಳಿಸದೆ ಧಾರ್ಮಿಕ ವಿಚಾರಗಳನ್ನು ಬೆರೆಸುವ ಮಾದರಿ ಇವರದು. ಇದು ಲೌಕಿಕ ಆಗಮಿಕವೆಂಬ ಪ್ರಬೇಧದಲ್ಲಾದ ಪರಿವರ್ತನೆ ಎಂದು ರೈ ಸೂಚಿಸುತ್ತಾರೆ. ಇಬ್ಬರೂ ಕವಿಗಳು ಒಂದೊಂದು ಧಾರ್ಮಿಕ ಪುರಾಣ ಕಾವ್ಯವನ್ನೂ ಬರೆದರು. ಲೌಕಿಕವನ್ನು ಧಾರ್ಮಿಕ ಪರಿವೇಶದಲ್ಲಿ ತಂದೂ ಪುರಾಣಕಾವ್ಯವೊಂದನ್ನು ಬರೆದಿದ್ದಾರೆ. ಅಂದರೆ ಆಗಮಿಕ ಕಾವ್ಯವನ್ನು ಶುದ್ಧವಾಗಿ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರು. ಆದರೆ ಆಗಮಿಕ ಲೌಕಿಕವೆಂಬ ಈ ಸೀಳನ್ನು ಸಂಪೂರ್ಣವಾಗಿ ತೊಡೆದು ಅವರೆಡನ್ನೂ ಒಂದುಗೂಡಿಸಿದ ಶ್ರೇಯಸ್ಸು ರತ್ನಾಕರನಿಗೆ ಸಲ್ಲಬೇಕು. ಭರತೇಶ ವೈಭವ ಕಾವ್ಯದಲ್ಲಿ ಲೌಕಿಕ ಜೀವನದ ವಿವರಗಳಾದ ದಿಗ್ವಿಜಯ, ವಿವಾಹ, ಹೆಂಡತಿಯರ ಜೊತೆಗಿನ ಸರಸ ಸಲ್ಲಾಪ ಪುತ್ರೋತ್ಸವಗಳು ಬರುವಂತೆಯೇ, ಆತ್ಮಜ್ಞಾನ ಆಧ್ಯಾತ್ಮ ವಿಚಾರಗಳು ಅಲ್ಲಿ ಹಾಸುಹೊಕ್ಕಾಗಿವೆ.

ರತ್ನಾಕರ ತನ್ನ ಕಾವ್ಯವನ್ನು ಕೇಳಿರೋ ಎಂದು ಪ್ರಾರಂಭಿಸುತ್ತಾನೆ. ತಾನು ಹಾಡುಗಬ್ಬ ಬರೆಯುತ್ತಿರುವುದರಿಂದ ಕೇಳುಗರನ್ನುದ್ದೇಶಿಸಿದ್ದಾನೆ. ಅಲ್ಲದೆ ಈ ಗದ್ದಲದಲ್ಲಿ ತನ್ನ ಮಾತನ್ನು ಯಾರೂ ಕೇಳುತ್ತಿಲ್ಲ. ಒಂದು ಕ್ಷಣ ಈ ನನ್ನ ಮಾತು ಕೇಳಿಸಿಕೊಳ್ಳಿರಿ ಎಂದು ಬಿನ್ನೈಸುವಂತಿದೆ. ರತ್ನಾಕರ ಜೀವಿಸಿದ್ದ ಕಾಲ ತುಂಬ ವೈಭವದ ಕಾಲ. ಸುಖಲೋಲುಪತೆಯಲ್ಲಿ ಮೈಮರೆತ

ಜನರನ್ನು ಎಚ್ಚರಿಸುವಂತೆ, ಬರಿಯ ಭೌತಿಕ ಜೀವನದಲ್ಲಿ ಮುಳುಗಿ ಆತ್ಮಜ್ಞಾನವನ್ನು ಮರೆಯದಿರುವಂತೆ ಕೇಳಿಕೊಳ್ಳುವ ಆರ್ತ ಮೊರೆಯಂತೆ ರತ್ನಾಕರನ ಧ್ವನಿಯಿದೆ. ಕಾವ್ಯದ ಕೊನೆಯಲ್ಲಿ ಬರುವ ಈ ಸಾಲುಗಳು ಅವನ ಹತಾಶ ಭಾವವನ್ನು ವ್ಯಕ್ತಪಡಿಸುತ್ತವೆ.

ಬೇಕಾದರಾಲಿಸುವುದು ಬೇಡವಾಗೆ ಪರಾಕು ಮಾಡುವುದೆನಗಲ್ಲಿ
ವ್ಯಾಕುಲವಿಲ್ಲ ಸಂತಸವಿಲ್ಲ ನಾನು ನಿರಾಕಾಂಕ್ಷಿ ಸಾಕದಂತಿರಲಿ

ಎಂದಿದ್ದಾನೆ. ಇದು ಕವಿಯ ಹತಾಶೆಯ ಸೂಚಕವಾಗಿದೆ. ಮತ್ತೆ ಇನ್ನೊಂದು ಪದ್ಯದಲ್ಲಿ

ಧ್ಯಾನಕ್ಕೆ ಬೇಸರಾದಾಗ ನನ್ನಾತ್ಮಲೀಲಾನುವೃದ್ಧಿಗೆ ಪೇಳ್ದೆನ್ನೆಸೆ
ನಾನೊಬ್ಬರೊಡನೆ ಮತ್ಸರಕ್ಕೆ ಪೇಳ್ವವನಲ್ಲ ಮೌನದೊಳಿಹೆನದು ಸಾಕು

ಎಂದಿದ್ದಾನೆ. ಇದೆಲ್ಲವನ್ನೂ ನೋಡಿದಾಗ ಕವಿಗೆ ಸಹೃದಯರಿಂದ ಬೇಸರವಾಗುವ ಘಟನೆ ನಡೆದಿರಬಹುದೆನ್ನಿಸುತ್ತದೆ. ಆತನಿಗೆ ಬಹಿಷ್ಕಾರ ಹಾಕಿದ್ದು, ಆತ ಮತಾಂತರಗೊಂಡಿದ್ದು ಅನಂತರ ಮತ್ತೆ ಜೈನ ಧರ್ಮಕ್ಕೆ ಮರಳಿದ್ದು, ಆ ಮೇಲೆ ಹಾಡುಗಳನ್ನು ಶತಕಗಳನ್ನು ಬರೆದದ್ದು ಇತ್ಯಾದಿ ದಂತ ಕತೆಗಳಿವೆ. ಭರತೇಶ ವೈಭವವನ್ನು ಬಿಟ್ಟರೆ, ಶತಕಗಳು ಹಾಡುಗಳು ಧಾರ್ಮಿಕ ವಿಷಯಕ್ಕೆಯೇ ಮೀಸಲಾಗಿದ್ದು ಭರತೇಶ ವೈಭವದ ವೈಭವ ಇವುಗಳಲ್ಲಿ ಕಾಣುವುದಿಲ್ಲವೆಂಬ ವಿಷಯವನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ.

ರತ್ನಾಕರನ ಪ್ರತಿಭೆಯ ವೈಭವ ಭರತೇಶ ವೈಭವದಲ್ಲಿಯೇ ಮೆರೆದಿದೆ. ಆತ ತನ್ನ ಕಾಲದ ಜನತೆಯ ಅಭಿರುಚಿಯನ್ನು ಅವರ ಒಲವನ್ನು ಗಮನಿಸಿ ಕಾವ್ಯ ರಚಿಸುತ್ತಾನಾದರೂ ಸೂಕ್ಷ್ಮ ರೀತಿಯಲ್ಲಿ ಅಭಿರುಚಿಯನ್ನು ತಿದ್ದುವ ಕಾರ್ಯವನ್ನು ಮಾಡುತ್ತಾನೆ. ಕೇವಲ ಭೌತಿಕ ಜೀವನದೊಂದೇ ಜೀವನವಲ್ಲ ಅದರೊಳಗೆ ಆಧ್ಯಾತ್ಮ ಬೆರೆಯಬೇಕು. ಹಾಲಿನಲ್ಲಿ ಜೇನು ಬೆರೆತ ಹಾಗೆ ಎನ್ನುವ ಆಶಯ ಕವಿಯದು. ಈ ಸಂದರ್ಭದಲ್ಲಿ ಎಚ್. ಎಸ್. ರಾಘವೇಂದ್ರರಾವ್ ಅವರು ಹೇಳಿದ ವಿಚಾರವನ್ನು ನೆನಪಿಸಿಕೊಳ್ಳಬಹುದು. ಈ ಕಾವ್ಯ ಕುಟುಂಬ ಕೇಂದ್ರಿತವಾದದ್ದು. ಭರತನ ಕುಟುಂಬ ಪ್ರೀತಿ ಇಲ್ಲಿ ಎದ್ದು ಕಾಣುವಂತಿದೆ ಎನ್ನುವ ಅವರ ಮಾತುಗಳನ್ನು ಒಪ್ಪಿಕೊಳ್ಳುತ್ತ ಕಾವ್ಯದ ಹಿನ್ನೆಲೆಯಲ್ಲಿ ಇದನ್ನು ಇನ್ನಷ್ಟು ವಿಸ್ತರಿಸಬಹುದು. ಕುಟುಂಬ ಕೇಂದ್ರಿತವಾದ ಈ ಕಾವ್ಯ ಜೀವಪರವಾದುದೂ, ಹೌದು, ಜೀವನಪರವಾದುದೂ ಹೌದು. ಜೀವನ ಕಲೆಯನ್ನು ಈ ಕಾವ್ಯ ಕಲಿಸಿಕೊಡುತ್ತದೆ. ರತ್ನಾಕರವರ್ಣಿ ಜೀವನ್ಮುಖಿಯಾದ ಕವಿಯಾಗಿದ್ದಾನೆ.

●

ಹತ್ತು ದ್ವಿಪದಿಗಳು

● ಪ್ರಭು ಖಾನಾಪುರೆ

ತುಂಬಿ ತುಳುಕುತ್ತಿವೆ ಧರ್ಮದ ಜೋಳಿಗೆ
ಭ್ರಷ್ಟ ಭಕ್ತರು ಕದ್ದು ಕೊಟ್ಟ ಉದಾರ ದೇಣಿಗೆ

*

ನಾನೆಸೆದ ಕಲ್ಲು ನಿನಗೆ ತಟ್ಟುವುದಿಲ್ಲವೆಂಬುದು ನನಗೆ ಮೊದಲೆ ಗೊತ್ತು
ಸಾವಿರ ಕಲ್ಲುಗಳಲ್ಲಿ ಒಂದಾದರೂ ತಟ್ಟಬಹುದೆಂಬ ಭರವಸೆ ನನ್ನಲ್ಲಿತ್ತು

*

ಹೊಲಿಯುತ್ತಾರೆ ಹರಿದು ಚಿಂದಿಯಾದ ಕನಸುಗಳ ಚೂರ
ಧರ್ಮದ ಸೂಜಿಗೆ ಪೋಣಿಸಿ ಅಂಧ ಶ್ರದ್ಧೆಯ ದಾರ

*

ಹಸಿದ ತಾಯಿಯ ಬತ್ತಿದೆದೆಯನು ಒತ್ತಿ ಹಿಂಡಿದರು
ಬಸಿದ ರಕ್ತದಲಿ ಲೇಖನಿ ಅದ್ದಿ ಅವಳ ತ್ಯಾಗ ಹೊಗಳಿದರು

*

ಹೆಂಗಸರ ಬುದ್ಧಿ ಮೊಳಕಾಲ ಕೆಳಗೆಂದು ಹೇಳಿದರಲ್ಲ
ದುರಂತವೆಂದರೆ ಗಂಡಸರಿಗೆ ಬುದ್ಧಿ ಅಲ್ಲಿಯೂ ಇಲ್ಲವಲ್ಲ

*

ಯಾರು ಸುರುವಿದರು ವಿಷ ಗಿಡ ಮರ ಬಳ್ಳಿಗಳ ಬೇರಿಗೆ
ಅರಳಿ ನಿಂತಿಹ ಹೂಗಳೆಲ್ಲವೂ ಉದುರಿ ಬಿದ್ದಿವೆ ಬಯಲಿಗೆ

*

ದುಃಖ ನುಂಗಿದ ಕಣ್ಣಿನಲ್ಲಿ ಕಂಬನಿ ಬತ್ತಿರುತ್ತದೆ
ಹಸಿವು ತುಂಬಿದ ಮುಖದ ಮೇಲೆ ನಗುವು ಸತ್ತಿರುತ್ತದೆ

*

ಹೋಮ ಹವನದ ಅಗ್ನಿಕುಂಡದಲ್ಲಿ ನಮ್ಮ ಜೀವ ಸುಟ್ಟರು
ರಕ್ತದ ಹೊಳೆಯೊಳಗೆ ಭಕ್ತಿಯಿಂದ ಪೂಜಿಸಿ ಅಸ್ತಿ ಬಿಟ್ಟರು

*

ಕಳ್ಳರಿಗೂ ಸುಳ್ಳರಿಗೂ ಅನ್ಯೋನ್ಯ ನಂಟು
ಕಳ್ಳ ಕದಿಯುತ್ತಾನೆ ಸುಳ್ಳ ಸಾಕ್ಷಿ ನುಡಿಯುತ್ತಾನೆ

*

ಶಾಸಕರು ಸಚಿವರು ಕದ್ದದ್ದು ಮುಚ್ಚಿ ಹಾಕ್ತಾರ
ಹಸಿದವರು ಕದ್ದದ್ದು ಹೊರ್‍ಗ ತರ್‍ತಾರ

●

ಪರಮ ನುಡಿ

● ಉಪ್ಪಂಗಳ ರಾಮಭಟ್ಟ

ಆನು ನೀನವನೆಂಬ ನುಡಿ ಜನರ ಗುರುತಿಸಲು
ತಾನಾರು ಇವರೊಳಗೆ ಒಂದೆ ಉಸಿರು
ತನು ಬೇರೆ ಜನ ಬೇರೆ ಮನ ಬೇರೆ ಬೇರೆಂದು
ತಮ್ಮ ತಾವರಿಯದಲೆ ನುಡಿಯುವರು ಪರಮ ॥ ೧ ॥

ಪರರಿಗುಪಕಾರವನು ಪುಣ್ಯವೆಂಬರು ಬುಧರು
ಉಪಕರಿಸೆ ಅಪಕಾರವೆಸಗಲೇನೆಂಬೆ
ಉಪಕಾರವಪಕಾರವರಿತು ನಡೆದರೆ ಪುಣ್ಯ
ನುಡಿದಂತೆ ನಡೆಯುವುದೆ ಪುಣ್ಯ ಪರಮ ॥ ೨ ॥

ಕೊಟ್ಟಮಾತಿಗೆ ತಪ್ಪಿ ನಡೆಯುವುದು ನುಡಿಯಲ್ಲ
ಶೆಟ್ಟಿ ಕುಂಬಳ ಮೊರಗೆ ಬಂದ ಕಂಡಂತೆ
ಕೊಟ್ಟವನೆ ಕಡುವೈರಿ ಕೊಂಡವನೆ ಕಡು ಜಾಣ
ಕೊಡುಗೆ ಕೊಳುಗೆಯ ಗುಟ್ಟನರಿಯೊ ಪರಮ ॥ ೩ ॥

ಕುಟ್ಟಿ ಮಡಕೆಯೊಳೂದಕ ಮುಟ್ಟಿ ಮೈರೋಗವನು
ಮುಟ್ಟಿ ನಾಲಗೆ ರುಚಿಯ ಎತ್ತಿ ಭಾರವನು
ನುಡಿಯಿಂದ ಮನವನರಿ ನಡೆಯಿಂದ ಗುಣವನರಿ
ನುಡಿಯನಡೆಯೊಳೇಕತೆಯ ಸತ್ಯ ತಿಳಿ ಪರಮ ॥ ೪ ॥

ಮದುವೆಯುತ್ಸವ ಜಾತ್ರೆ ನೇಮ ಹೋಮಗಳೆಲ್ಲ
ಮಧುರ ಭೋಜನ ಮಾತ್ರಕೆಂದರಿಯಬೇಡ
ಜನರು ಕೂಟದಿ ನಕ್ಕು ನುಡಿದು ಗೆಳೆತನ ಬೆಳಸೆ
ಮನ ಬೆರೆಯಲವಕಾಶ ತಿಳಿಯೊ ಪರಮ ॥ ೫ ॥

ಸುಳ್ಳು ಮೋಸಗಳೆಂಬ ಪ್ರಚ್ಛನ್ನ ವೈರಿಗಳು
ಕಳ್ಳರಂತೊಳಗಡಗಿ ಮೆಲ್ಲ ಕೊರೆಯುವುವು
ಉಮಿಯೊಳಡಗಿದ ಕಿಚ್ಚು ಒಳಗೊಳಗೆ ಸುಡುವಂತೆ
ತಮ್ಮನ್ನ ಸುಡುವುದುನ್ನರಿಯ ಪರಮ ॥ ೬ ॥

●

ಕಾರಂತರ ಕಾದಂಬರಿಗಳಲ್ಲಿ ಋಣದ ಕಲ್ಪನೆ

● ರೇಖಾ ವಿ. ಬನ್ನಾಡಿ

ಕಾರಂತರು ಹುಟ್ಟಿ ಬೆಳೆದ ಊರು ಕೋಟ. ಪಶ್ಚಿಮ ಸಮುದ್ರದಿಂದ ನಾಲ್ಕೈದು ಮೈಲಿ ದೂರದಲ್ಲಿರುವ ಕರಾವಳಿ ಪ್ರಾಂತ್ಯ. ಇಲ್ಲಿನ ಬಹು ಸಂಖ್ಯಾತರು ರಟ್ಟೆ ಬಲದಿಂದಲೇ ದುಡಿದುಣ್ಣುವವರು. ಹಾಗೆ ದುಡಿದು ನುಗ್ಗಾಗುತ್ತಿರುವ ವ್ಯಕ್ತಿಗಳಲ್ಲಿ ಕಾರಂತರು ಕಂಡದ್ದು ಪ್ರಾಮಾಣಿಕತೆ ಮತ್ತು ಋಣದ ಕಲ್ಪನೆಗಳನ್ನು. ಎಂತಹ ಬಡತನದಲ್ಲೂ ಮನುಷ್ಯ ಈ ಮೌಲ್ಯಗಳನ್ನು ಉಲ್ಲಂಘಿಸದೆ ಬದುಕು ಸಾಗಿಸುವ ಶ್ರದ್ಧೆ ಕಾರಂತರನ್ನು ಗಾಢವಾಗಿ ಕಲಕಿವೆ. ಜೊತೆಗೆ ಎಳವೆಯಿಂದಲೂ 'ಪರರ ಋಣಕ್ಕೆ ಬೀಳಬಾರದೆಂದು' ಸದಾ ಎಚ್ಚರಿಸುವಂತಿದ್ದ ಅಜ್ಜಿಯ ಮಾತುಗಳು. ಇವು ಸಮಾಜದಿಂದ ಪಡೆದದ್ದಕ್ಕಿಂತ ಹೆಚ್ಚು ಕೊಡಬೇಕೆಂಬ ಒತ್ತಾಸೆ ಅವರಲ್ಲಿ ಬೇರೂರುವಂತೆ ಮಾಡಿದೆ. "ನನ್ನ ಜೀವನದ ಹಿನ್ನೆಲೆಯನ್ನು ತಿಳಿದಾಗಲೆಲ್ಲ ನಾನು ನನ್ನ ಸುತ್ತಣ ಜನರಿಗೆ, ನನ್ನ ಹಿಂದೆ ಸಂದು ಹೋದವರಿಗೆ, ಅವರೆಲ್ಲರನ್ನು ಮತ್ತು ನನ್ನನ್ನು ಹೊತ್ತು ಸಾಗಿಸುವ ಈ ಜನರಿಗೆ ಅಡಿಗಡಿಗೂ ಋಣಿ ಎನಿಸುತ್ತದೆ. ಆ ಪೂರ್ವಿಕರು, ಇಂದಿನ ಸಮಕಾಲೀನರು ತಮ್ಮ ತಮ್ಮ ಅನುಭವ, ತಿಳಿವು, ಚಿಂತನೆಗಳನ್ನು ನಮಗೆ ದೊರಕಿಸದೆ ಹೋಗುತ್ತಿದ್ದರೆ ನಾವು ಇಷ್ಟೆಲ್ಲ ಸುಖ ಸಂತಸಗಳನ್ನು ಪಡೆಯುವುದು ಸಾಧ್ಯವಾಗದು ಎಂದು ಹೆಜ್ಜೆ ಹೆಜ್ಜೆಗೂ ಅನಿಸುತ್ತದೆ. ನನ್ನನ್ನು ಸದಾ ಕಾಡುತ್ತಿರುವ ಯೋಚನೆಗಳಲ್ಲಿ ನಾನು ಎಷ್ಟೆಲ್ಲ ಜನರಿಗೆ ಋಣಿಯಾಗಿದ್ದೇನೆ. ಅದನ್ನು ಒಂದಲ್ಲ ಒಂದು ರೀತಿಯಿಂದ ನಾನು ಸಲ್ಲಿಸದೆ ಹೋದರೆ ನಾನು ಬದುಕಿ ಫಲವೇನು?" (ಸ್ಮೃತಿ ಪಟಲದಿಂದ ಸಂ. ೧ ಮುನ್ನುಡಿಯಿಂದ) ಎನ್ನುತ್ತಾರೆ. ಋಣದ ಕಲ್ಪನೆಯಿಂದ ಪ್ರೇರಿತವಾದ ಈ ಚಿಂತನೆ ಕಾರಂತರ ಬದುಕಿನಲ್ಲಿ ಮಾತ್ರವಲ್ಲ ಬರವಣಿಗೆಯಲ್ಲೂ ಮತ್ತೆ ಮತ್ತೆ ಅನುರಣಗೊಂಡಿದೆ. ಇದು ಅವರ ಕಾದಂಬರಿಗಳಲ್ಲಿ ಮನುಷ್ಯ-ಮನುಷ್ಯನ ನಡುವೆ, ಮನುಷ್ಯ -ನೆಲದ ನಡುವೆ, ಮನುಷ್ಯ-ಸಮಾಜದ ನಡುವೆ - ಹೀಗೆ ವಿಭಿನ್ನ ಆಯಾಮಗಳಲ್ಲಿ ಕ್ರಿಯಾಶೀಲವಾಗಿ ಪ್ರಕಟವಾಗಿರುವುದನ್ನು ಗಮನಿಸಬಹುದು.

೧. ಮನುಷ್ಯ-ಮನುಷ್ಯರ ನಡುವಿನ ಋಣದ ಕಲ್ಪನೆ

ಮನುಷ್ಯ ಸಂಬಂಧದ ಮಧ್ಯೆ ಪರಸ್ಪರ ಆಗುವಿಕೆಯನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ದಾಖಲಿಸುತ್ತಾ ಹೋಗಿದ್ದಾರೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕೋಡಿಗೆ ಬಂದು ಬಿಡಾರ ಹೂಡುವ ಯೋಚನೆಯಲ್ಲಿದ್ದ ನಾಗವೇಣಿ ಬಚ್ಚಿಯಲ್ಲಿ 'ನಾವು ಮರಳಿ ಬಂದರೆ ದನದ ಒಂದು ಕರುವನ್ನು ಕೊಡುವೆಯಾ?' ಎಂದಾಗ ಆಕೆ "ಅಮ್ಮ ನಿಮ್ಮ ದನ್ನು ನಿಮಗೆ ಇಲ್ಲೆಂದರೆ ದೇವರು ಏನು ಮಾಡಿಯಾನು ನನ್ನನ್ನು!" (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ : ೨೦೦೧, ಸಂ. - ೪, ಪು.೩೭೬) ಎನ್ನುತ್ತಾಳೆ. ಹಿಂದೆ ಕೋಡಿ ಊರನ್ನು ಬಿಟ್ಟು ತಂದೆ ಮನೆಗೆ ಹೋಗುವಾಗ ನಾಗವೇಣಿ ದನವೊಂದನ್ನು ತನ್ನ ವಶಕ್ಕೆ ಒಪ್ಪಿಸಿ ಹೋದುದನ್ನು ಬಚ್ಚಿ ಮರೆತಿಲ್ಲ.

ಅವರದ್ದನ್ನು ಅವರಿಗೇ ಮರಳಿಸಬೇಕೆಂಬ ಅಲಿಖಿತ ನೇಮವನ್ನು ನಂಬಿ ನಡೆಯುವವಳು ಆಕೆ.

ನಾಗವೇಣಿ ಹೊಸ ಧನಿಯರಿಂದ ಗೇಣಿಗೆ ಪಡೆದ ಭೂಮಿಯನ್ನು ಹೂಟೆ ಮಾಡಿ ಕೊಡುವಂತೆ ಮುದಿ ಸೂರನಲ್ಲಿ ಕೇಳಿದಾಗ ತನ್ನ ಒಡತಿಗೆ ಬಂದ ದುರ್ಗತಿ ನೆನೆದ ಸೂರ ತಾನೂ ಕಣ್ಣೀರು ಹಾಕಿ ಅಮ್ಮಾ, "ನನ್ನ ಮಕ್ಕಳು ಅಂತಹ ಪಡಪೋಶಿಗಳಲ್ಲ. ಒಂದಷ್ಟು ನಿಮ್ಮ ಗದ್ದೆಯನ್ನು ಹೂಡಿ ಬನ್ನಿ ಅಂದರೆ ಇಲ್ಲ ಅನ್ನಲಾರ"ರೆಂದು ವಿಶ್ವಾಸದಿಂದ ನುಡಿಯುತ್ತಾನೆ. ದುಡಿಯುವ ವರ್ಗದಲ್ಲಿದ್ದ ಪ್ರಾಮಾಣಿಕ ಮತ್ತು ಋಣದ ಕಲ್ಪನೆಯನ್ನು ಕಾರಂತರು ಶೋಧಿಸುವ ಪರಿ ಇದು. ಹೂಟೆ ನಟ್ಟಿ ಮುಗಿಸಿ ಕಳೆ ಕಿತ್ತು ಹೋದ ಮೇಲೂ ಸೂರನ ಮಕ್ಕಳು ಕೊಚ್ಚಿಗೆ ಬಾರದೆ ಹೋದಾಗ ಅವರ ಋಣಕ್ಕೆ ಬೀಳ ಬಯಸದ ನಾಗವೇಣಿ ಪೈರು ಮನೆಗೆ ಬರುತ್ತಲೆ ಅವರ ಕೂಲಿಯ ಸಂದಾಯ ಮಾಡುತ್ತಾಳೆ.

'ಗೆದ್ದ ದೊಡ್ಡಸ್ತಿಕೆ'ಯಲ್ಲಿ ನಾಗೇಂದ್ರ ಬಿ.ಎ. ಓದುತ್ತಿರುವಾಗಲೆ ಬೇರೂರು ಮನೆತನದವರ ವ್ಯಾಪಾರ ವಹಿವಾಟುಗಳ ಹಿಂದಿರುವ ವಂಚನೆಗಳನ್ನು ಕೇಳಿಸಿಕೊಂಡಿದ್ದ. ಓದು ಮುಗಿದ ಮೇಲೆ ಪದ್ಮನಾಭಯ್ಯ ನೀಡಿದ ಆಹ್ವಾನವನ್ನು ತಿರಸ್ಕರಿಸಲಾಗದೆ ನಾಗಾನಂದನ ಕಾರ್ಯದರ್ಶಿಯಾಗಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ದಿನ ಕಳೆದಂತೆ ಬೇರೂರು ಸಂಸ್ಥೆಗಳ ವಂಚನೆಗಳು ಸ್ಪಷ್ಟವಾದಂತೆಲ್ಲ ಪಾಪಪ್ರಜ್ಞೆಯ ನಡುವೆಯೂ ಋಣ ಮುಕ್ತನಾಗಿ ಹೊರಬರ ಬೇಕೆಂಬ ಅವನ ಇಚ್ಛಾಶಕ್ತಿಯೇ ಅವನನ್ನು ಐದು ವರ್ಷಗಳ ಕಾಲ ಅಲ್ಲಿ ಉಳಿಸುತ್ತದೆ.

'ಇನ್ನೊಂದೇ ದಾರಿ' ಕಾದಂಬರಿಯಲ್ಲಿ ನರಸಿಂಹಯ್ಯನಿಗೆ ಹೆಸರುಗದ್ದೆಯ ನಾರ್ಣಪ್ಪನ ಮನೆಗೆ ದತ್ತಕ್ಕೆ ಹೋದರೂ ಹೆತ್ತವರನ್ನು ಮರೆಯಲಾಗದ ಸಂಕಟ. ಆದರೆ ದತ್ತಕ್ಕೆ ಕೊಂಡವರಿಗೆ ಆತ ಕರುಳ ಸಂಬಂಧವನ್ನು ಮರಳಿ ಜ್ಞಾಪಿಸುವುದು ಸಹ್ಯವಾಗದ ಸಂಗತಿ. ಅತ್ತ ಹೆತ್ತವರನ್ನೂ ಮರೆಯಲಾಗದ ಇತ್ತ ದತ್ತಕ ತಾಯ್ತಂದೆಯರನ್ನೂ ನೋಯಿಸಲಾಗದ ಇಬ್ಬಗೆಯ ಸಂಕಟದಲ್ಲಿ ಒಳಗೊಳಗೇ ಒದ್ದಾಟ ಪಟ್ಟವ ನರಸಿಂಹಯ್ಯ. "ನಾನು ಇಷ್ಟು ವರ್ಷ ಯಾವ ನರಕ ಅನುಭವಿಸಿದ್ದೇನೆಂಬುದು ನಿಮಗೆ ತಿಳಿಯದು. ಅಪ್ಪ ತೀರಿಕೊಂಡರಲ್ಲ, ನಾಲ್ಕು ವರ್ಷಗಳ ಹಿಂದೆ. ಅಮ್ಮ ಮೊನ್ನೆ ಹೋದರಷ್ಟೆ. ಇನ್ನು ಅದನ್ನೆಲ್ಲ ಹೇಳಬಹುದು ನಾನು. ಈ ಸೂರ ನನ್ನ ಒಡಹುಟ್ಟಿದವನು. ಅವರ ಪಾಲಿಗೆ ನಾನು ಕುಂತಿಯ ಮಗ ಕರ್ಣನಾದೆ. ನಮ್ಮ ಅಪ್ಪ ನನ್ನನ್ನು ಹೆಸರುಗದ್ದೆಗೆ ದತ್ತಕ್ಕೆ ಕೊಟ್ಟದ್ದನ್ನು ಬಲ್ಲಿರಿ. ಅವರು ದತ್ತಕ್ಕೆ ತಂದರು. ಬಹಳ ಚೆನ್ನಾಗಿಯೆ ನೋಡಿಕೊಂಡರು. ಯಾವ ತಂದೆ ತಾಯಿಗಳೂ ತೋರಿಸದ ಪ್ರೀತಿಯನ್ನು ತೋರಿಸಿದರು. ಆದರೆ ನಮ್ಮ ಅಮ್ಮನಿಗೆ, ನಾನು ನನ್ನ ಹೆತ್ತ ಅಪ್ಪ, ಅಮ್ಮಂದಿರ ಅಪೇಕ್ಷೆಯನ್ನು ಮರೆಯ ಬೇಕೆಂಬ ಅಪೇಕ್ಷೆ. ಆದರೆ ನನ್ನಲ್ಲಿ ಆ ನೆನಪು ಸಾಯುತ್ತದೆಯೇ? ನಾಲ್ಕು ಹರದಾರಿ ದೂರದಲ್ಲಿ, ಅದೂ ನಮ್ಮದೇ ಜಾಗದಲ್ಲಿ, ಅವರು ಬಾಳಿ ಬದುಕಿದ್ದರಾದರೂ, ನಾನು ಅವರನ್ನು ಹೋಗಿ ನೋಡುವುದು ನಮ್ಮಮ್ಮನ ಮನಸ್ಸಿಗೆ ಬರಲಿಲ್ಲ. ಹೊಟ್ಟೆಕಿಚ್ಚಲ್ಲ, ಮೋಹ, ನನ್ನ ಮೇಲಣ ವ್ಯಾಮೋಹ. ನನ್ನ ಪಾಲಿಗೆ

ತಾನೊಬ್ಬಳೇ ತಾಯಿಯಾಗಿ ಉಳಿಯಬೇಕೆಂಬ ಆಸೆ. ಈಗ ಅವಳ ಬಯಕೆ ಸಂದಿತು. ನಾನಂತು ಋಣ ಮುಕ್ತನಾದೆ". (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ೨೦೦೩, ಸಂ ೧೩, ಪು ೨೭೭) ಎನ್ನುವಲ್ಲಿ ದತ್ತಕ ತಾಯ್ತಂದೆಯರ ಋಣಕ್ಕೆ ಬಿದ್ದ ತಾನು ಅವರು ಬದುಕಿರುವವರೆಗೂ ಅವರ ಇಚ್ಛೆಗೆ ವಿರುದ್ಧವಾಗಿ ವರ್ತಿಸಬಾರದೆಂಬ ಸಂಕಲ್ಪವೇ ಅವನನ್ನು ತೊಟ್ಟಿಲು ಬಯಲಿಗೆ ಹೋಗದಂತೆ ತಡೆದಿರುವುದು ವೇದ್ಯವಾಗುತ್ತದೆ. ದತ್ತಕ ತಾಯ್ತಂದೆಯರು ಗತಿಸಿದ ಮೇಲೆಯೇ ಋಣಮುಕ್ತನಾದ ನರಸಿಂಹಯ್ಯ ತೊಟ್ಟಿಲು ಬಯಲಿಗೆ ಹೋಗುವುದನ್ನು ಕಾದಂಬರಿ ತಿಳಿಸುತ್ತದೆ.

'ಸಮೀಕ್ಷೆ'ಯ ಗಂಗಮ್ಮ ಸಂಪ್ರದಾಯದಲ್ಲಿ ಗಾಢ ನಂಬಿಕೆ ಇದ್ದವಳು. ಬದುಕಿನಲ್ಲಿ ಸಾಕಷ್ಟು ನೋವುಂಡ ಆಕೆ ಪರರ ಮನಸ್ಸನ್ನು ಬಹು ಬೇಗ ಅರ್ಥಮಾಡಿಕೊಳ್ಳುತ್ತಿದ್ದಳು. ತನಗೆ ಒಗ್ಗುವುದಿಲ್ಲವೆಂಬ ಕಾರಣಕ್ಕೆ ಶ್ರೀನಿವಾಸ ತನ್ನ ಸಾಕುಮಗಳನ್ನು ಬಾಣಂತನಕ್ಕೆ ಕರೆತರಲು ಅಳುಕುತ್ತಿದ್ದಾನೆಂಬುದನ್ನು ಅರಿತುಕೊಂಡು 'ನಿಮ್ಮ ಸಂತೋಷ ಬಿಟ್ಟು ಬೇರುಂಟೆ ನನಗೆ?" ಎನ್ನುತ್ತಾಳೆ. ತನ್ನ ತಮ್ಮ ಕಾಯಿಲೆ ಬಿದ್ದಾಗ ಶ್ರೀನಿವಾಸ ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳುವ ಗಂಗಮ್ಮನಿಗೆ ಋಣ ಸಂದಾಯವೇ ಪ್ರಧಾನವೆನಿಸಿ ಜಾತಿ ಕಟ್ಟುಕಟ್ಟಳೆಗಳು ಮರೆಗೆ ಸರಿಯುತ್ತವೆ.

'ಔದಾರ್ಯದ ಉರುಳಲ್ಲಿ' ಕಾದಂಬರಿಯ ಶ್ಯಾಮ ಆಶ್ರಮದ ಮಕ್ಕಳ ಊಟದ ಖರ್ಚಿಗಾಗಿ ಅಕ್ಕಿ ಖರೀದಿಸಲು ಹೋದಾಗ ರಾಮಣ್ಣನಿಗೆ ನೆರೆ ಪ್ರವಾಹದ ಒಂದೊಂದು ದೃಶ್ಯಗಳೂ ಕಣ್ಣೆದುರು ದುತ್ತೆಂದು ಸುಳಿಯುತ್ತವೆ. ಅಂದು ನೆರೆಗೆ ಸಿಕ್ಕು ತತ್ತರಿಸುತ್ತಿದ್ದ ಊರ ಜನರಿಗೆ, ತನಗೆ, ಅನಾಥವಾದ ಹೊಲೆಯರ ಕೂಸಿಗೆ ರಾಧಾಕೃಷ್ಣ ಪಟ್ಟ ಭಂಗ ಅಷ್ಟಿಷ್ಟಲ್ಲ. ಅವನ್ನೆಲ್ಲ ನೆನೆಸಿಕೊಂಡ ರಾಮಣ್ಣ ಹಣದ ಬಗ್ಗೆ ಯೋಚಿಸದೆ ತಕ್ಷಣ ತಾನೇ ಹೋಗಿ ಆಶ್ರಮಕ್ಕೆ ಅಕ್ಕಿ ಮುಡಿ ಹಾಕಿ ಬರುತ್ತಾನೆ. ಆಶ್ರಮದ ದುಸ್ಥಿತಿಯನ್ನು ನೋಡಿ ಸತ್ಯಮ್ಮನಿಗೆ ಆಧಾರವಾಗಲಿ ಎಂದು ನಾಲ್ಕು ಎಮ್ಮೆಗಳನ್ನು ಸಾಕುವುದಕ್ಕೆ ವ್ಯವಸ್ಥೆ ಮಾಡಿ ಬರುತ್ತಾನೆ. ಇದೇ ಕಾದಂಬರಿಯ ಇನ್ನೊಂದು ಪಾತ್ರ ಈಚಣ್ಣ ಮರಣಶಯ್ಯೆಯಲ್ಲಿದ್ದ ತನ್ನ ಮಡದಿಗೆ ಚಿಕಿತ್ಸೆ ನೀಡಿ ಗುಣಮುಖಳನ್ನಾಗಿಸಿದ ಡಾ। ನಾಡಕರ್ಣಿಯವರ ಸೇವೆಗೆ ಪ್ರತಿಯಾಗಿ ಕೊಡಲು ಹಣವಿಲ್ಲದೆ ಮನೆಯಲ್ಲಿರುವ ಚಿನ್ನದ ಸರವನ್ನೇ ನೀಡುತ್ತಾನೆ. ಹಣದ ಆಸೆಗಾಗಿ ನಾನು ಚಿಕಿತ್ಸೆ ನೀಡಿಲ್ಲವೆಂದು ಡಾ। ಕುಲಕರ್ಣಿಯವರು ಖಡಾಖಂಡಿತವಾಗ ನುಡಿದಾಗ "ಅದು ಗೊತ್ತಿದ್ದರೂ ಶಕ್ತಿಯಿರುವಷ್ಟ ದಿನ ತಮ್ಮ ಋಣ ನಾವು ತೀರಿಸುವುದು ಕರ್ತವ್ಯ"(ಶಿವರಾಮ ಕಾರಂತರ, ಸಾಹಿತ್ಯ ಶ್ರೇಣಿ : ೨೦೦೧, ಸಂ-೫, ಪು: ೨೬೯) ಎನ್ನುತ್ತಾನೆ.

'ಜಾರುವ ದಾರಿಯಲ್ಲಿ' ಕಾದಂಬರಿಯ ಡಾ। ಶಿವಪ್ಪನದು ಸರಳ ಸಜ್ಜನಿಕೆಯ ವ್ಯಕ್ತಿತ್ವ, ಪರರ ಕಷ್ಟಕ್ಕೆ ನೆರವಾಗುವಂತೆ ತನ್ನ ಕಷ್ಟಕ್ಕೆ ನೆರವಾದವರ ಸ್ಮರಣೆವುಳ್ಳಾತ. ತನ್ನ ಓದಿಗೆ ನೆರವಾದ ಧಾರವಾಡದ ರಂಗರಾಯರ ಋಣದ ಸಲ್ಲಿಕೆಗಾಗಿ ಅವರ ಮಗಳಾದ ಇಂದುಮತಿಯನ್ನು ತಂದೆಗೆ ಮನಸ್ಸಿಲ್ಲದಿದ್ದರೂ ಮದುವೆ ಮಾಡಿಕೊಳ್ಳುತ್ತಾನೆ. ರೋಗಿಗಳ ಕಷ್ಟಕ್ಕೆ ತತ್‌ಕ್ಷಣ

ಸ್ಪಂದಿಸುವ ಶಿವಪ್ಪನದ್ದು ಸೇವಾ ನಿಷ್ಠ ಮನಸ್ಸು, ಜೀವನ್ಮರಣ ಸ್ಥಿತಿಯಲ್ಲಿದ್ದ ಗುಪುವಿನ ಮಡದಿಯನ್ನು ಉಳಿಸುವಲ್ಲಿ ಅವನು ಪಟ್ಟ ಶ್ರಮ ಅಪಾರವಾದುದು. ಆತನ ಉಪಕಾರಕ್ಕೆ ಪ್ರತಿಯಾಗಿ ಗಂಪು ಮನೆಯೊಂದನ್ನು ಕಟ್ಟಿಸಿಕೊಡುವಲ್ಲಿ ಋಣ ಮುಕ್ತನಾಗುವ ಅಪೇಕ್ಷೆ ಹಿರಿದಾದುದು.

'ಶನೀಶ್ವರನ ನೆರಳಿನಲ್ಲಿ' ಪಾಟಾಳಿ ಶಿವಣ್ಣ ತನ್ನನ್ನು ಸಾಕಿ ದೊಡ್ಡವನನ್ನಾಗಿ ಮಾಡಿದ ಕಾವೇರಮ್ಮ ವಾತದಿಂದ ಹಾಸಿಗೆ ಹಿಡಿದಾಗ ಸರದಿಯಂತೆ ಗಂಡ ಹೆಂಡತಿ ಹೋಗಿ ತೈಲ ಹಾಕಿ ತಿಕ್ಕಿ ಬರುತ್ತಿದ್ದರು. ಬೇಸಾಯಕ್ಕೆ ಭೂಮಿ ನೀಡಿ ಗೇಣಿ ಸ್ವೀಕರಿಸದಿರುವ ಅವರ ಋಣಕ್ಕೆ ಪ್ರತಿಯಾಗಿ ಅವರ ಹೆಸರಿನಲ್ಲಿ ಪ್ರತಿವರ್ಷ ಕಾರ್ತಿಕಮಾಸದಲ್ಲಿ ಶನೀಶ್ವರನಿಗೆ ಪೂಜೆ ಸಲ್ಲಿಸಿ ಋಣ ಮುಕ್ತನಾಗ ಬಯಸುತ್ತಾನೆ.

ಮಡದಿ ಮಕ್ಕಳೆಲ್ಲರೂ ತನ್ನ ಋಣದಲ್ಲಿ ಬಿದ್ದವರೆಂಬ ಭ್ರಮೆಯಲ್ಲಿ ಬದುಕಿನ ಅರ್ಧಾಯುಷ್ಯ ಕಳೆದ 'ಕನ್ನಡಿಯಲ್ಲಿ ಕಂಡಾತ'ದ ಪರಮೇಶ್ವರ ಅನಾಥನಾಗಿ ಮಲೆಮನೆಯನ್ನು ಸೇರಿ ಅವರ ಋಣಕ್ಕೆ ಬಿದ್ದಾಗ ಬದುಕಿನ ಮಹತ್ವವನ್ನು ಅರಿಯುತ್ತಾನೆ. ಯಾವತ್ತೂ ಕಚ್ಚಾಡದೆ ಪರಸ್ಪರ ಕಲೆತು ಬದುಕುತ್ತಿರುವ ಮಂಜಯ್ಯನವರ ಕುಟುಂಬದ ಸದಸ್ಯರನ್ನು ಕಂಡು ಆತ್ಮಾವಲೋಕನಕ್ಕೆ ಮುಂದಾಗುತ್ತಾನೆ. ಮಲೆಮನೆಯವರ ಪ್ರೀತಿ ಕಾರುಣ್ಯ ತುಂಬಿದ ನಡವಳಿಕೆಯ ಮುಂದೆ ರಕ್ತ ಸಂಬಂಧವನ್ನೇ ಕಡಿದು ಬಂದ ತನ್ನ ಪೈಶಾಚಿಕ ವರ್ತನೆಯನ್ನು ತುಲನೆ ಮಾಡಿ ನೋಡುತ್ತಾನೆ. ಜಗತ್ತೆ ತನ್ನ ಸಲುವಾಗಿದೆ ಎಂಬ 'ಅಹಂ'ನಿಂದ ವರ್ತಿಸುತ್ತಿದ್ದ ಪರಮೇಶ್ವರ ಜಗತ್ತಿಗೆ ತಾನು ಬೇಕು ಎನಿಸುವ ರೀತಿಯಲ್ಲಿ ಬದುಕುವ ಪ್ರಯತ್ನಕ್ಕೆ ಅಣಿಯಾಗುತ್ತಾನೆ. ಕಾರಂತರು ಮುನ್ನುಡಿಯಲ್ಲಿ ಹೇಳಿರುವಂತೆ, ತನ್ನ ಪೂರ್ವ ಜೀವನವನ್ನು ಅನ್ಯರ ನಡವಳಿಕೆಯ ಕನ್ನಡಿಯಲ್ಲಿ ನೋಡಿ ಚಿಂತಿಸುವ ಅವಕಾಶ ಪರಮೇಶ್ವರನಿಗೆ ದೊರೆಯಿತು. ಹೀಗೆ ಅಮಾನವೀಯವಾದ ಮನುಷ್ಯ ಪ್ರಜ್ಞೆಯೊಂದು ಋಣದ ಪರಿಕಲ್ಪನೆಯಿಂದಾಗಿ ಮನುಷ್ಯನಾಗಿ ಪರಿವರ್ತಿತನಾಗುವ ಅಪೂರ್ವ ಚಿತ್ರಣ ಕಾದಂಬರಿಯಲ್ಲಿದೆ.

೨. ಮನುಷ್ಯ-ನೆಲದ ನಾಡುವಿನ ಋಣದ ಕಲ್ಪನೆ

ನಗರ ಸಂಸ್ಕೃತಿಯ ಮಿತಿಮೀರಿದ ಆಸೆ ಮೋಹಗಳ ಲೋಕದಲ್ಲಿ ವಿಹರಿಸುವ ತಾಯ್ತಂದೆಯವರ ಜಗತ್ತಿಗೆ ಪರ್ಯಾಯವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ತಹತಹ 'ಚಿಗುರಿದ ಕನಸು' ವಿನ ಶಂಕರನದ್ದು. ಸರಕಾರಿ ನೌಕರಿಯಲ್ಲಿದ್ದು ಊರಿಂದ ಊರಿಗೆ ಅಲೆಯುವ ಸ್ವತಂತ್ರವಲ್ಲದ ತಂದೆಯ ಬದುಕಿನ ಬಗ್ಗೆ ಆತನಿಗೆ ಮೊದಲಿನಿಂದಲೂ ಸಮಾಧಾನವಿರಲಿಲ್ಲ. ಇಂಜಿನಿಯರಿಂಗ್ ಪದವೀಧರನಾಗಿಯೂ ಉದ್ಯೋಗವನ್ನು ಸೇರಬಯಸದೆ ತನ್ನದಾದ ಊರಿನ ನೆಲವೊಂದರ ಮಗುವಾಗಿ ಬಾಳಬೇಕೆಂಬ ಸಂಕಲ್ಪದಿಂದ ನೆಲಮೂಲವನ್ನು ಹುಡುಕಿ ಹೊರಡುತ್ತಾನೆ. ತನ್ನ ಪೂರ್ವಿಜರ ಊರಾದ ಮುಡೋಡಿಯ

ನಿಸರ್ಗ ವೈಭವವನ್ನು ಕಂಡು 'ದೇಶಪ್ರೇಮ ಅನ್ನುತ್ತೇವೆ. ದೇಶಕ್ಕಾಗಿ ದುಡಿಯುವುದು ಅನ್ನುತ್ತೇವೆ. 'ಹೆಚ್ಚು ಬೆಳೆಯಿರಿ' ಅನ್ನುತ್ತೇವೆ. ಇಂಥ ನೆಲದ ತುಣುಕುಗಳನ್ನು ಬಿಟ್ಟು ಉಳಿಯುವ ದೇಶ ಯಾವುದೋ? ನಕ್ಷೆಗಳಲ್ಲಿ ಕಾಣುವ ಭರತ ಖಂಡ ಆ ದೇಶವೇ?" (ಪುಟ ೯೩) ಎನ್ನುವಲ್ಲಿ ದುಡಿಮೆಯ ಮೂಲಕ ನೆಲದ ಋಣವನ್ನು ಸಲ್ಲಿಸುವುದೇ ದೇಶಪ್ರೇಮ ಎಂಬ ದೃಷ್ಟಿಕೋನ ಪ್ರಖರವಾಗಿ ಕಾಣುತ್ತದೆ. ಇದೇ ಕಾದಂಬರಿಯಲ್ಲಿ ಬರುವ ಮುದಿ ಜೀವ ಶಂಕರನ ಅಜ್ಜಿಯಲ್ಲಿ ನೆಲದ ಋಣದ ಛಾಯೆ ದಟ್ಟವಾಗಿದೆ. ಆಕೆ ತನ್ನ ಹಿರಿಯರಿಂದ ಕೈ ತಪ್ಪಿ ಹೋದ ಭೂಮಿ ಮರಳಿ ಕೈಸೇರುವುದನ್ನು ನೋಡುವುದಕ್ಕಾಗಿಯೇ ಜೀವ ಹಿಡಿದು ಕೂತಂತಿದೆ. ಅದೇ ರೀತಿ ಇನ್ನೊರ್ವ ಹಿರಿಯ ವ್ಯಕ್ತಿ ಮುತ್ತಯ್ಯ ಗೌಡನಿಗೆ ತನ್ನ ಧನಿಯ ಮೊಮ್ಮಗನ ಆಗಮನ, ನೆಲದ ಬಗೆಗೆ ಆತ ತೋರುವ ಆದರ, ಅವನ ಕನಸುಗಾರಿಕೆ ಇವೆಲ್ಲವೂ ಮತ್ತೆ ಹತ್ತು ವರ್ಷ ಬದುಕುಳಿಯ ಬೇಕೆಂಬ ಹಂಬಲವನ್ನು ಉಂಟು ಮಾಡುತ್ತದೆ. ಆ ಭೂಮಿಯ ಪೂರ್ವದ ವೈಭವ ಮರಳಿ ಬರುವುದಾದಲ್ಲಿ ಬದುಕಿರುವಷ್ಟು ದಿನ, ತನ್ನ ಮೈಯಲ್ಲಿ ಕಸುವಿದ್ದಷ್ಟು ಕಾಲ ದುಡಿದು ಉಪ್ಪನ್ನ ಉಂಡ ಧನಿಯ ಋಣವನ್ನು ತೀರಿಸುವೆನೆಂಬ ವಿಶ್ವಾಸ. ಭೂಮಿ ಮತ್ತು ಬದುಕು ಇವರೆಡನ್ನೂ ಅಭೇದ್ಯವಾಗಿ ಕಾಣುವ ಇಂತಹ ಮನಸ್ಸುಗಳ ಋಣದ ಕಲ್ಪನೆಯೇ ನೆಲದ ಸಂರಕ್ಷಣೆಗೆ ಕಾರಣವಾದಂತಿದೆ.

೩. ಮನುಷ್ಯ-ಸಮಾಜದ ನಡುವಿನ ಋಣದ ಕಲ್ಪನೆ

ಮನುಷ್ಯ ಜೀವನದ ಕುರಿತಾದ ಕಾರಂತರ ಚಿಂತನೆಯಲ್ಲಿ ಒಂದು ಮಹತ್ವಾಕಾಂಕ್ಷೆಯ ನೋಟವಿದೆ. ಅದು ನಾಳಿನ ಸಮಾಜ ಅರ್ಥಪೂರ್ಣವಾಗಿರಬೇಕೆಂಬ ಕಾಳಜಿಯಿಂದ ಕೂಡಿದ್ದು. ನಾಳಿನ ಸಮಾಜದ ಬದಲಾವಣೆ ಇವತ್ತಿನ ವ್ಯಕ್ತಿ ಬದುಕಿನಲ್ಲಾಗುವ ಸಾರ್ಥಕ್ಯದಿಂದ ಎನ್ನುವುದನ್ನು ಕಾರಂತರು ಬಲವಾಗಿ ನಂಬುತ್ತಾರೆ. ಅಂತಹ ಸಮಾಜಮುಖಿ ಕಾಳಜಿಯನ್ನು ಅವರ 'ಬೆಟ್ಟದ ಜೀವ'ದ ಗೋಪಾಲಯ್ಯ, 'ಇದ್ದರೂ ಚಿಂತೆ'ಯ ಗಣಪತಿ ಹೆಗಡೆ, 'ಅದೇ ಊರು, ಅದೇ ಮರ'ದ ಲಕ್ಷ್ಮಣ, 'ಸಮೀಕ್ಷೆ'ಯ ಶ್ರೀನಿವಾಸ, 'ಔದಾರ್ಯದ ಉರುಳಲ್ಲಿ'ನ ರಾಧಾಕೃಷ್ಣ, 'ಜಾರುವ ದಾರಿಯಲ್ಲಿ'ನ ಶಿವಪ್ಪ ಮುಂತಾದ ಪಾತ್ರಗಳಲ್ಲಿ ಕಾಣಬಹುದು.

ಹೊಸ ಸಾಧ್ಯತೆಯ ಬಗ್ಗೆ ಕನಸು ಕಾಣುವಲ್ಲಿ 'ಬೆಟ್ಟದ ಜೀವ'ದ ಗೋಪಾಲಯ್ಯನಿಗೆ ಅದಮ್ಯ ಉತ್ಸಾಹ. ಕಾಯಕದಲ್ಲೇ ಸಂತೃಪ್ತಿಯನ್ನು ಕಾಣುವ ಪ್ರವೃತ್ತಿಯುಳ್ಳ ಇವರದು ಪ್ರಯೋಗಶೀಲ ಮನಸ್ಸು. ತಾವು ಮಾಡುವ ಕೆಲಸಗಳಿಂದ ತಮಗೆಷ್ಟು ಲಾಭ ಬಂದೀತೆಂದು ಯೋಚಿಸದೆ ಸಮಾಜಕ್ಕೆ ಆಗುವ ಹಿತದ ಕುರಿತು ಧೇನಿಸುತ್ತಾರೆ. "ದುಡ್ಡನ್ನು ಯಾವ ಮನುಷ್ಯನೂ ಕಟ್ಟಿಕೊಂಡು ಹೋಗುವುದಿಲ್ಲ. ದುಡ್ಡು ಕಳೆದರೇನಾಯಿತಂತೆ? ಈ ತೋಟಕ್ಕಾಗಿ ದುಡಿದವರಿಗೆ ಪ್ರಯೋಜನವಾಗಲಿಲ್ಲವೇ? ನಾನು ಹೋದ ಮೇಲೆಯೂ ಉಳಿಯುವ, ಈ ತೋಟ, ಯಾರಿಗೂ ಎಂದಿಗೂ ಕೆಲಸಕ್ಕೆ ಬಾರದೇ ಹೋದಿತೆ? ಅದು ಬರಲಿಲ್ಲವೆಂದೇ ತಿಳಿಯುವ. ಇಲ್ಲಿರುವಷ್ಟು ದಿವಸ ಈ ಸೊಂಪಾದ ಸಸಿಗಳನ್ನು ಕಂಡು ನಾವು

ಸಂತೋಷಪಟ್ಟದ್ದು ಸುಳ್ಳಾಯಿತೆ? ಹಣ ಹೋಯಿತೆಲ್ಲಿಗೆ? ಅದು ಹಾಳಾಗುವುದು ಹೇಗೆ? ಅದರಿಂದ ನೂರು ಬಾಯಿಗಳು ನಾಲ್ಕೈದು ವರ್ಷ ಅನ್ನ ಉಂಡದ್ದು ಸುಳ್ಳೇ?" (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ.೩, ೨೦೦೧. ಪುಟ ೨೫೪) ಎನ್ನುವಲ್ಲಿ ಸಮಾಜ ಮುಖಿಯಾದ ಚಿಂತನೆಯುಳ್ಳ ಗೋಪಾಲಯ್ಯನವರ ಮನಸ್ಸು ಶ್ರಮದ ಅರ್ಥಪೂರ್ಣ ಅಭಿವ್ಯಕ್ತಿಯೆಡೆಗೆ ಹರಿಯುತ್ತಿರುವುದು ಸ್ಪಷ್ಟವಾಗುತ್ತದೆ.

ವಿದ್ಯಾಭ್ಯಾಸವನ್ನು ಅರ್ಧಕ್ಕೆ ಕೈಬಿಟ್ಟು ಸಮಾಜ ಸೇವೆಯಲ್ಲಿ ತೊಡಗಿಕೊಂಡವ 'ಔದಾರ್ಯದ ಉರುಳಲ್ಲಿ' ಕಾದಂಬರಿಯ ರಾಧಾಕೃಷ್ಣ. ಕಿರಿಪದವಿನ ಆತನ ಮಹತ್ವಾಕಾಂಕ್ಷೆಯ ಆಶ್ರಮ ಶಾಲೆಗೆ ಸಹಾಯಧನವನ್ನು ನೀಡುವಾಗ ಸಂಸ್ಥೆಗೆ 'ಧರ್ಮಸಿಂಗ್ ಪ್ರಭುದೇವ ಔದ್ಯೋಗಿಕ ಶಾಲಾ' ಎಂದು ನಾಮಕರಣ ಮಾಡುವ ಕರಾರನ್ನು ಒಡ್ಡಿದ ಪ್ರಭುದೇವ ಇದಕ್ಕೆ ತಮ್ಮ ಸಮ್ಮತಿ ಇದೆಯೆ? ಎಂದು ಪ್ರಶ್ನಿಸುತ್ತಾನೆ. ಸೇವಾಸಿಷ್ಠ ಮನೋಭಾವದ ರಾಧಾಕೃಷ್ಣನಿಗೆ ಸಮಾಜದ ಹಿತವೇ ಮುಖ್ಯ ಹೊರತು ಕೀರ್ತಿ ಲಾಲಸೆಗಳಲ್ಲ. ಹಾಗಾಗಿ ಯಾವ ಹೆಸರಿಗೂ ನನ್ನ ಸಮ್ಮತವೇ. ನನಗೆ ಹೆಸರು ಮುಖ್ಯವಲ್ಲ; ಕೆಲಸ ಮುಖ್ಯ (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ : ೨೦೦೧, ಸಂ-೪, ಪುಟ ೩೩೬) ಎನ್ನುತ್ತಾನೆ. 'ಸಮೀಕ್ಷೆ'ಯ ಶ್ರೀನಿವಾಸ ಕಾಲೇಜು ದಿನಗಳಿಂದಲೇ ಗಾಂಧಿವಾದದಿಂದ ಪ್ರೇರಿತನಾದವ. ಬದುಕಿದ್ದಷ್ಟು ದಿನ ಸಮಾಜಕ್ಕೆ ಏನಾದರೂ ನೀಡಬೇಕೆಂಬ ಹಂಬಲವುಳ್ಳವ. ಅಂತಹ ಸಮಾಜಮುಖಿ ನಿಲುವು ಗಟ್ಟಿಯಾಗಿರುವುದರಿಂದಲೇ ಸಂಪ್ರದಾಯದಬದ್ಧ ವಾತಾವರಣದ ನಡುವೆಯೂ ವೇಶ್ಯಾಕುಲದಲ್ಲಿ ಜನಿಸಿದ ಗೆಳೆಯನ ಮಗಳನ್ನು ಸಾಕಲು ಸಾಧ್ಯವಾಗುತ್ತದೆ. ಆಕೆಯ ಎಲ್ಲ ಹೊಣೆಯನ್ನು ನಿರ್ವಹಿಸುವ ಮೂಲಕ ತಾರುಣ್ಯದಲ್ಲಿ ತಾನು ಕಂಡ ಕನಸುಗಳನ್ನು ಕಾರ್ಯರೂಪಕ್ಕಿಳಿಸುತ್ತಾನೆ.

'ಜಾರುವ ದಾರಿಯಲ್ಲಿ' ಕಾದಂಬರಿಯ ಡಾ. ಶಿವಪ್ಪನದು ಋಣದ ಕಲ್ಪನೆಯಿಂದ ಪ್ರೇರಿತವಾದ ಮನಸ್ಸು. "ಒಂದು ಊರಿನಲ್ಲಿ ಹುಟ್ಟಿದ ಒಬ್ಬ, ತನ್ನ ಊರಿಗೆ ಏನಾದರೂ ಋಣ ಸಲ್ಲಿಸಬೇಕು" (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ೨೦೦೨, ಸಂ-೯, ಪುಟ -೨೪೦) ಎಂಬ ನಿಷ್ಠೆಯಿಂದ ದುಡಿಯುತ್ತಾ ಅನ್ಯರನ್ನು ಆ ಪ್ರಕ್ರಿಯೆಯಲ್ಲಿ ಒಳಗುಗೊಳ್ಳುವಾತ. ಖಾರ್ವಿ ಗುಂಪುವಿನೊಂದಿಗೆ "ಈ ಊರಿನ ಒಂದು ನೂರು ಜನಗಳಿಗೆ ನೀನು ಒಂದು ಶಾಶ್ವತ ಜೀವನ ಕಲ್ಪಿಸಿಕೊಟ್ಟಿದ್ದಾದರೆ, ಅದಕ್ಕಿಂತ ದೊಡ್ಡ ಕೆಲಸವಿದೆಯೆ? ಇದೇನು ದಾನವಲ್ಲ. ಅದರೂ ಹತ್ತು ಜನಗಳಿಗೆ ಪ್ರಯೋಜನವಾಗುವ ಕೆಲಸ" (ಅದೇ ಪುಟ) ಎನ್ನುತ್ತಾ ಸಮಾಜ ಸೇವೆಗೆ ಭೂಮಿಕೆಯನ್ನು ಸಿದ್ಧಪಡಿಸುತ್ತಾನೆ. ತಮ್ಮ ಅನನ್ಯತೆಯನ್ನು ಕಂಡುಕೊಳ್ಳುತ್ತಲೇ ಸಮಾಜದ ಋಣ ತೀರಿಸುವಲ್ಲಿ 'ಇದ್ದರೂ ಚಿಂತೆ'ಯ ಗಣಪತಿ ಹೆಗಡೆ, 'ಅದೇ ಊರು, ಅದೇ ಮರ' ಕಾದಂಬರಿಯ ಲಕ್ಷ್ಮಣರ ಕಾಳಜಿಯೂ ವಿಶಿಷ್ಟವಾದುದು. ಸಮಾಜದಿಂದ ಪಡೆದುದಕ್ಕಿಂತ ಹೆಚ್ಚಿನದನ್ನು ಕೊಡಬೇಕೆಂಬ ಕಾರಂತರ ಚಿಂತನೆಗಳು ಈ ಎಲ್ಲ ಪಾತ್ರಗಳಲ್ಲೂ ಪ್ರಕಟಗೊಂಡಿರುವುದನ್ನು ನೋಡಬಹುದು.

ಅಧ್ಯಯನದ ಅನುಕೂಲತೆಗಾಗಿ ಕಾರಂತರ ಕಾದಂಬರಿಗಳಲ್ಲಿ ಕಾಣುವ ಋಣದ ಪರಿಕಲ್ಪನೆಗಳನ್ನು ಮೂರು ತೆರನಾಗಿ ವರ್ಗೀಕರಿಸಿಕೊಂಡರೂ ಈ ಮೂರು ಅಂಶಗಳು ನಿರ್ಣಾಯಕವಾಗಿ ಒಂದು ಇನ್ನೊಂದರೊಂದಿಗೆ ಮಿಳಿತವಾಗಿರುವುದನ್ನು ನಿರ್ಲಕ್ಷಿಸಲಾಗದು. ಮನುಷ್ಯ-ನೆಲದೊಳಗೆ ಹೊಂದಿರುವ ಋಣದ ಕಲ್ಪನೆ, ಮನುಷ್ಯ ಸಮಾಜದೊಂದಿಗೆ ಹೊಂದಿರುವ ಋಣದ ಕಲ್ಪನೆಯಲ್ಲಿ ಮನುಷ್ಯ ಪ್ರೀತಿ ಅಡಕಗೊಂಡಿರುತ್ತದೆ. ಹೀಗೆ ಈ ಮೂರು ಅಂಶಗಳು ಮನುಷ್ಯ ಪ್ರಜ್ಞೆಯೊಳಗೆ ಅಂತರ್ ಗಂಗೆಯಂತೆ ಪ್ರವಹಿಸುವುದನ್ನು ಕಾರಂತರು ಶೋಧಿಸಿ ತೋರಿಸಿದ್ದಾರೆ.

ಋಣದ ಕಲ್ಪನೆಯೊಂದಿಗೆ ಮೈದಾಳಿರುವ ಇಂತಹ ಪಾತ್ರಗಳ ಮುಖೇನ ಕಾರಂತರು ತಾವು ಬದುಕಿನುದ್ದಕ್ಕೂ ಪ್ರತಿನಿಧಿಸುತ್ತಿದ್ದ ಮೌಲ್ಯವನ್ನು ಮನದಟ್ಟಾಗಿಸುವ ಪ್ರಯತ್ನವನ್ನು ಮಾಡಿದ್ದಾರೆ. ತನ್ನ ಕಣ್ಣೆದುರೇ ಗುಣಾತ್ಮಕವಾದ ಈ ಪರಿಕಲ್ಪನೆ ಶಿಥಿಲಗೊಳ್ಳುತ್ತಿರುವ ಬಗ್ಗೆ ಕಾರಂತರಿಗೆ ತೀವ್ರ ವಿಷಾದವಿದೆ. "ಆಧುನಿಕತೆಯ ಬೆಳವಣಿಗೆಯ ಒಂದು ಹಂತದಲ್ಲಿ ಶಕ್ತಿಶಾಲಿಯಾಗಿ ಮೇಲೆದ್ದು ಬರುವ ಸಾಧನಾತ್ಮಕ ವೈಚಾರಿಕತೆ (Instrumental Rationality) ಸ್ವದ ಅನ್ವೇಷಣೆಯ ಕಾರಂತರ ಕಥನಗಳಲ್ಲಿ ತೀಕ್ಷ್ಣವಾದ ವಿಮರ್ಶೆಗೆ ಒಳಗಾಗುತ್ತದೆ. ಉಪಯುಕ್ತ ಅಲ್ಲ ಅಂತ ಅನಿಸಿದಾಗ ಮಾನವ ಸಂಬಂಧ ನಂಟನ್ನು ಕಡಿದುಕೊಳ್ಳುವ ಆಧುನಿಕತೆಯ ಸಾಧನಾತ್ಮಕ ವೈಚಾರಿಕತೆಯನ್ನು ಕಾರಂತರು ಕಟುವಾಗಿ ವಿರೋಧಿಸುತ್ತಾರೆ. ವ್ಯಕ್ತಿ ಸಮಾಜದ ಋಣವನ್ನು ತೀರಿಸದೆ ಸ್ವಾರ್ಥಿಯಾಗುವ ಮಾನವ ಸ್ವಭಾವದ ಕುರಿತು ಅವರು ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಅವರ ಕಾದಂಬರಿಗಳಲ್ಲಿ ಅನ್ಯದ ನಿರಾಕರಣೆಯ ಆಧಾರದಲ್ಲಿ ರೂಪುಗೊಂಡ ಸ್ವದ ಸುಖಗಳೇ ಮುಖ್ಯ ಅಂತ ಅನಿಸಿದಾಗ ಸ್ವೇಚ್ಛೆಯಾಗುವ ಸ್ವಾರ್ಥಿಯಾಗುವ ಹೊಸ ತಲೆಮಾರನ್ನು ಕಾಣಬಹುದು. ತಲೆಮಾರುಗಳ ವಿಘಟನೆಗೆ ವ್ಯಕ್ತಿ ತನ್ನ ಸಾಂಸ್ಕೃತಿಕ ಪರಿಧಿಯಿಂದ ಪರಕೀಯನಾಗುವುದೇ ಕಾರಣ. ಸ್ವಸಂಸ್ಕೃತಿಯಿಂದ ದೂರವಾಗುವ ಸಾಂಸ್ಕೃತಿಕ ವಿಘಟನೆಗೆ ಕಾರಂತರ ಪ್ರಕಾರ ಆಧುನಿಕ ಶಿಕ್ಷಣ ಅಥವಾ ಹಣ ಒಂದೇ ಮುಖ್ಯ ಕಾರಣ ಅಲ್ಲ. ಅದರ ಜೊತೆಗೆ ವ್ಯಕ್ತಿಯ ವ್ಯಕ್ತಿತ್ವವೂ ಕಾರಣವಾಗುತ್ತದೆ." (ಶಿವರಾಮ ಶೆಟ್ಟಿ, ಬಿ. ಗುರುಲಿಂಗ ಕಾಪಸೆ (ಸಂ) ೨೦೦೩, ಪು : ೩೮)

ಇಂದು ನಗರ ಪ್ರದೇಶದಲ್ಲಿ ವಿದ್ಯಾವಂತರಲ್ಲಿ ಮಾತ್ರ ಅಲ್ಲ, ಶ್ರೀಸಾಮಾನ್ಯರಲ್ಲೂ ಋಣದ ಕಲ್ಪನೆ ಕ್ಷೀಣಿಸುತ್ತಲೇ ಇದೆಯೆನ್ನುವುದನ್ನು ಕಾರಂತರ ಕಾದಂಬರಿಗಳು ಕಾಣಿಸುತ್ತವೆ. ತೀವ್ರ ಬಡತನದಲ್ಲೂ ಇನ್ನೊಬ್ಬರದಕ್ಕೆ ಆಸೆ ಪಡದೆ, ಋಣಕ್ಕೆ ಬೀಳದೆ ಶುಚಿ ಬದುಕನ್ನು ಬದುಕಲೆಳೆಸುತ್ತಿದ್ದ ಹಳೆಯ ತಲೆಮಾರಿನ ಚಿತ್ರಣವನ್ನು 'ಅದೇ ಊರು, ಅದೇ ಮರ' ಕಾದಂಬರಿಯಲ್ಲಿ ಗಮನಿಸಬಹುದು. "ಬೇಸಾಯ ಮಾಡಿಕೊಂಡು ತಮಗೆ ಬೇಕಾದದ್ದನ್ನೆಲ್ಲ ತಾವೇ ಬೆಳೆದು ಹೊಟ್ಟೆ ಚಿಂತೆ ಇಲ್ಲವೇ ಇಲ್ಲ ಎಂಬವರ ಸಂಖ್ಯೆ ಕಡಿಮೆ. ಬೇಸಾಯ ಗಾರರಲ್ಲೂ ಅರ್ಧಕ್ಕಿಂತ ಹೆಚ್ಚು ಮಂದಿ ಬೆಳೆದದ್ದರಲ್ಲಿ ಅರ್ಧದಷ್ಟನ್ನಾದರೂ ಹೊಲವನ್ನು ಕೊಟ್ಟ ಧನಿಗೆ ಮುಟ್ಟಿಸಬೇಕು. ಮೊದಲನೆಯ ಬೆಳೆಯಲ್ಲಿ ಅದನ್ನು ಮುಟ್ಟಿಸಲಾರದೆ

ಹೋದರೆ, ಎರಡನೆಯ ಬೆಳೆಯಲ್ಲಾದರೂ ಅದನ್ನು ತೆರಬೇಕು. ತೆರಲಾರದವರು ತಮ್ಮ ಧನಿಯ ಮುಂದೆ ಹೋಗಿ ನಿಂತು ಜೋಲು ಮೋರೆ ಹಾಕಿ : ಒಡೆಯ ಮೊದಲನೆಯ ಬೆಳೆಯಲ್ಲಿ ಕಣೆ ಬಂದು ಅರ್ಧಕ್ಕರ್ಧ ಫಸಲು ಬರಲಿಲ್ಲ. ಗೇಣಿಯನ್ನು ಹೇಗೆ ನಾನು ಕೊಡಲಿ ಮಂದಿನ ಬೆಳೆಗೆ ಎಂದು ರಾಗ ಮಾಡುತ್ತಾರೆ. ಅದೂ ಸಾಧ್ಯವಾಗದಾಗ 'ಅಯ್ಯೋ, ಇವರ ಋಣಕ್ಕೆ ಬಿದ್ದೆವೇ?' ಎಂದು ನೊಂದುಕೊಳ್ಳುತ್ತಾರೆ. ಋಣ ಭಾರ ಎಂಬುದು ಆ ಊರವರಿಗೆ ಹೊರಲಾರದ ಹೊರೆ. ಅವರು ಶಕ್ತಿ ಮೀರಿ ಅದನ್ನು ಸಲ್ಲಿಸಲು ಒದ್ದಾಡುತ್ತಾರೆ. ಅದೂ ಸಾಧ್ಯವಾಗದಾಗ ಧನಿಯಲ್ಲಿ ಮಾಫಿ ಕೇಳುತ್ತಾರೆ. ಅಂತೂ ಆಗಲಿಲ್ಲ, ಕೊಡುವುದಿಲ್ಲ ಎಂಬ ದುಡುಕಿನ ಮಾತು ಎಂದೂ ಆಡುವವರಲ್ಲ." (ಶಿವರಾಮ ಕಾರಂತ : ೨೦೦೧, ಪುಟ - ೮೯)

ಹೀಗೆ ಸಾಲ ತೀರಿಸಲೇ ಬೇಕು, ಋಣದಲ್ಲಿ ಬೀಳಲೇಬಾರದೆಂಬ ಈ ಮನಸ್ಥಿತಿ ಯೊಳಗಿರುವುದು ವ್ಯಕ್ತಿ ಪ್ರಾಮಾಣಿಕತೆ ಮತ್ತು ನಿಷ್ಠುರವಾದ ದುಡಿಮೆಯ ಮನಸ್ಸು. ಆದರೆ ಇವತ್ತು ಆ ಗುಣಗಳೇ ಮಾಯವಾಗಿ 'ಕೊಟ್ಟವ ಕೋಡಂಗಿ, ತಗೊಂಡವ ಈರಭದ್ರ' ಎಂಬಂತಾಗಿರುವುದು ವಿಪರ್ಯಾಸವೇ ಸರಿ.

ಪರಾಮರ್ಶನ ಗ್ರಂಥಗಳು :

೧. ಗುರುಲಿಂಗ ಕಾಪಸೆ : (ಸಂ) ಶಿವರಾಮ ಕಾರಂತ ಸಾಂಸ್ಕೃತಿಕ ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩

೨. ಜಯಪ್ರಕಾಶ ಮಾವಿನಕುಳಿ (ಸಂ) ಕಾರಂತ ಯುಗಾಂತ, ಶಿವರಾಮ ಕಾರಂತ, ಅಧ್ಯಯನ ಕೇಂದ್ರ ಪುತ್ತೂರು, ೧೯೯೯.

೩. ವಿವೇಕ ರೈ ಬಿ.ಎ. (ಸಂ) ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ, ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ೨೦೦೨.

೪. ವಿವಿಧ ಲೇಖಕರು : ಕಾದಂಬರಿ ಕಣ್ಣಲ್ಲಿ ಕಾರಂತರು, ಪ್ರತಿಭಾ ಯುವ ವೇದಿಕೆ, ಬೆಂಗಳೂರು, ೧೯೯೨.

೫. ಶಿವರುದ್ರಪ್ಪ ಜಿ. ಎಸ್. (ಸಂ) ಕಾದಂಬರಿಕಾರರಾಗಿ ಕಾರಂತ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ೧೯೮೩

೬. ಹರಿದಾಸ ಭಟ್ಟ ಕು. ಶಿ. (ಸಂ) ಕಾರಂತ ಪ್ರಪಂಚ, ಗೀತಾ ಬುಕ್ ಹೌಸ್, ಮೈಸೂರು, ೧೯೬೯

●

ಸಮೀಕ್ಷೆ

ಜಿನದತ್ತ ದೇಸಾಯಿ ಅವರ ಕಾವ್ಯ

● ಎ. ಎಸ್. ಮಾಳಿ

ಕನ್ನಡದ ಆದಿ ಕವಿ ಪಂಪ 'ಕವಿತಾ ಗುಣಾರ್ಣವ'; ಬೆಳಗಾವಿಯ ಕವಿ ಜಿನದತ್ತ ದೇಸಾಯಿ 'ಕವಿತಾ ಸುಧಾರ್ಣವ'. ದೇಸಾಯಿಯವರಿಗೆ ಪ್ರೇರಣೆಯ ಮೂಲ ಸೆಲೆ ನಾಡೋಜ ಪಂಪ. 'ಕ್ಷಮಿಸಿ, ನಾನೊಬ್ಬ! ಪಂಪನ ಮತ್ತು ತಲೆಗೇರಿದ ಹುಚ್ಚ' ಎಂದು ಹೆಮ್ಮೆ ಪಡುವ ಅವರು ನಾಡೋಜನ ಸಮೃದ್ಧ ಪರಂಪರೆಯೊಂದಿಗೆ ಸಂವಾದದ ಸೇತು ಕಟ್ಟುತ್ತಾರೆ. ಪಂಪನಿಗೆ ಪ್ರಾಣ ಬನವಾಸಿ; ಜಿನದತ್ತರಿಗೆ ಜೀವ ಬೆಳಗಾವಿ.

ಬಳೆ ಸದ್ದಾಲಿಸಿದೊಡಂ
ಪೆಣ್ದನಿ ಕೇಳ್ದೊಡಂ
ಸೆರಗಿನ ಗಾಳಿ ತಾಗಿದೊಡಂ
ನೆನೆವುದೆನ್ನಮನಂ
ಬೆಳಗಾವಿ ದೇಶಮಂ

ಎಂದು ಹೇಳುವುದು ಕೇವಲ ಅಭಿಮಾನದ ಅನುಕರಣೆಯಲ್ಲ; ಅದು 'ವೇಣು'ನಾದದ ಜೀವಧ್ವನಿ.

ಕನ್ನಡ ನುಡಿಗೆ 'ನೀಲಾಂಜನ'ವ ಮುಡಿಸಿ, 'ಬೊಗಸೆಯಲ್ಲಿ ಬೆಳಕು' ಮೊಗೆದ, 'ಮಾಗಿ'ದ ಈ ಕವಿ- ನ್ಯಾಯಾಧೀಶ ಇದೀಗ ಎಂಬತ್ತೆರಡನೇ ವರ್ಷಾಯೋಗದ 'ಒಳಗಿನ ಮಳೆ'ಗೆ ನೆನೆಯುತ್ತಿರುವುದು ನಮಗೆಲ್ಲ ಸಂಭ್ರಮ. ವ್ಯಕ್ತಿಯಾಗಿ ಪ್ರಾಮಾಣಿಕತೆ ಮೆರೆದ, ನ್ಯಾಯಾಧೀಶರಾಗಿ ನಿಷ್ಠುರತೆ ತೂಗಿದ, ಚಿಂತಕರಾಗಿ ವೈಚಾರಿಕತೆ ಬೆಳಗಿದ, ಕವಿಯಾಗಿ ಜೀವಕೋಟಿಗೆ ಪ್ರೀತಿಯ ಮಳೆಗರೆದ ಜಿನದತ್ತರ ಬದುಕು ಕನಸುಗಳ ಕಣಜ. ಕನಸುಗಳೇ ಸೃಜನಶಕ್ತಿಯ ಬಿತ್ತುಗಳು.

ಕನಸುಗಳ ಕೊಂದರೆ ಉಳಿಯುವೆನೆ ನಾನು?
ನಾನುಳಿಯಲೆಂದೇ ಉಳಿದಿಹವು ಈ ಕನಸು
ನಾ ಬದುಕಲೆಂದೇ ಬದುಕಿಹವು ಕನಸು
ಇವು ನನ್ನ ಕನಸು.

ಜಿನದತ್ತರು ಸೂಕ್ಷ್ಮ ಸಂವೇದನೆಯ, ಸುಸಂಸ್ಕೃತ ಮನಸ್ಸಿನ, ಸಮಾಜಮುಖಿ ಚಿಂತನೆಯ ಸ್ವಪ್ನಶೀಲ ಕವಿ. ಅವರದು ಮೂಲತಃ ಧಾರವಾಡ ಜಿಲ್ಲೆಯ ಅಮ್ಮಿನಬಾವಿ. ನೇಮಿಚಂದ್ರ ದೇಸಾಯಿ ಜನ್ಮದಾತರು. ಗುಂಡಪ್ಪ ದೇಸಾಯಿ ಜಿನದತ್ತರನ್ನು ದತ್ತು ಪಡೆದರು. ಅಮ್ಮಿನಬಾವಿಯಲ್ಲಿ ಪ್ರಾಥಮಿಕ, ನವಲಗುಂದದಲ್ಲಿ ಪ್ರೌಢ ಶಿಕ್ಷಣ ಪಡೆದು, ಪದವಿ

ಶಿಕ್ಷಣಕ್ಕಾಗಿ ಧಾರವಾಡಕ್ಕೆ ಸೇರಿದರು. ಕನ್ನಡದಲ್ಲಿ ಸ್ನಾತಕ ಪದವಿ ಗಳಿಸಿ, ಕಾನೂನು ಅಧ್ಯಯನ ಮಾಡಿ ನ್ಯಾಯವಾದಿಗಳಾದರು. ನಾಲ್ಕು ವರ್ಷ ವಕೀಲಿ ವೃತ್ತಿ ಮಾಡಿ, ಸರಕಾರಿ ಅಭಿಯೋಜಕರಾಗಿ, ಅನಂತರ ೧೯೬೬ರಲ್ಲಿ ನ್ಯಾಯಾಧೀಶರಾದರು. ೨೫ ವರ್ಷ ತೀರ್ಪು ಬರೆದು ೧೯೯೧ರಲ್ಲಿ ನಿವೃತ್ತರಾದರು. ನ್ಯಾಯಾಲಯದೊಳಗೆ ಕಾಣದಂತೆ ಜಿನದತ್ತರ ಎದೆಯೊಳಗೆ ಅಡಗಿದ್ದ ಕವಿ ನಮ್ಮೆದುರು ಗೊಮ್ಮಟನಂತೆ ಬೆಳೆದು ನಿಂತಿದ್ದು ತೀರ ಇತ್ತೀಚಿಗೆ. 'ನ್ಯಾಯಾಂಗ ಸೇವೆಯಲ್ಲಿದ್ದ ಕೆಲವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಆದರೆ ಜಿನದತ್ತರಷ್ಟು ಕಾವ್ಯ ಕೃತಿಗಳನ್ನು ರಚಿಸಿದ ನ್ಯಾಯಾಧೀಶರು ಬೇರೊಬ್ಬರಿಲ್ಲ.' ಕಣವಿ, ಶಿವರುದ್ರಪ್ಪನವರ ಸಾಲಿಗೆ ಸೇರುವ ಕವಿ ಜಿನದತ್ತರದು ಗುರು 'ದತ್ತ' ಪ್ರತಿಭೆ. ಗೋಕಾಕರು ಅವರ ಗುರುಗಳು. "ನುಡಿದರೆ । ಗುಡುಗಿದಂತೆ । ನಡೆದರೆ ಅಡ್ಡ ಮಲಗಿದ್ದ ಹುಲಿಯೆದ್ದು ದಾರಿ ಬಿಡುವಂತೆ". ಗೋಕಾಕರ 'ಕಮಲ ಮಂಡಲ'ದಲ್ಲಿ ಅರಳಿದ ಜಿನದತ್ತ ದೇಸಾಯಿಯವರು 'ಕಣವಿಯವರಷ್ಟೇ ಸಮರ್ಥ ಕವಿ' ಎನ್ನುತ್ತಾರೆ ಚಂದ್ರಶೇಖರ ಪಾಟೀಲ.

'ನೀಲಾಂಜನ' ಜಿನದತ್ತರ ಮೊದಲ ಕವನ ಸಂಕಲನ. ಅದು ಪ್ರಕಟಗೊಂಡಿದ್ದು ೧೯೫೪ರಲ್ಲಿ. ಆಗ ಅವರು ಬಿ.ಎ. ಅಂತಿಮ ವರ್ಷದಲ್ಲಿ ಓದುತ್ತಿದ್ದ ಇಪ್ಪತ್ತು ವರ್ಷದ ವಿದ್ಯಾರ್ಥಿ. ಗೋಕಾಕರ ಮುನ್ನುಡಿಯು ಜಿನದತ್ತರ ರಸಯಾತ್ರೆಗೆ ಹಸಿರು ಬಾವುಟ ಬೀಸಿತ್ತು. ಅವರ ದ್ವಿತೀಯ ಕವನ ಸಂಕಲನ 'ಮಧುಶಾಲಿನಿ' (೧೯೬೦) ಪ್ರಕಟಗೊಂಡಾಗ ಅವರು ನ್ಯಾಯವಾದಿಗಳಾಗಿದ್ದರು. ಅನಂತರ ಮೂವತ್ನಾಲ್ಕು ವರ್ಷ ಕಾವ್ಯವಾಹಿನಿ ಗುಪ್ತಗಾಮಿನಿಯಾಯಿತು. ನ್ಯಾಯಾಧೀಶ ಹುದ್ದೆಯಿಂದ ನಿವೃತ್ತಗೊಂಡ ಮೇಲೆ (೧೯೯೪) 'ಮತ್ತೆ ಬಂದಿದ್ದೇನೆ' ಎಂದು ಪ್ರತ್ಯಕ್ಷಗೊಂಡಿತು. ಅಲ್ಲಿಂದ ಮಾಗಿ (೨೦೦೪), ಒಳಗಿನ ಮಳೆ (೨೦೦೬), ಅಮೋಘ (೨೦೧೩) ಹೀಗೆ ಮೂರು ಕವನ ಸಂಕಲನಗಳು ಹಾಗೂ ಬೊಗಸೆಯಲ್ಲಿ ಬೆಳಕು (೨೦೦೬), ಹೆಜ್ಜೆ ಸಾಲು (೨೦೦೬) ಜಗದಗಲ ಮುಗಿಲಗಲ (೨೦೧೦), ಗರುಡನ ರೆಕ್ಕೆಯ ಚುಟುಕು ಹಕ್ಕಿ (೨೦೧೧) ಮುಂತಾದ ನಾಲ್ಕು ಹನಿಗವನ ಸಂಕಲನಗಳು ಹೊರಬಂದವು. ೨೦೦೮ರಲ್ಲಿ ಸಮಗ್ರ ಕಾವ್ಯ ಪ್ರಕಟಗೊಂಡರೆ ೨೦೧೩ರಲ್ಲಿ ಸಮಗ್ರ ಹನಿಗಳ 'ಸಹಸ್ರ ಚಂದ್ರ' ತುಂಬಿತು. ಇವಲ್ಲದೆ ಹನ್ನೊಂದಕ್ಕೂ ಹೆಚ್ಚು ಕೃತಿಗಳನ್ನು ಜಿನದತ್ತರು ಸಂಪಾದಿಸಿದ್ದಾರೆ. ಜಿನದತ್ತರ ಸಾಹಿತ್ಯದ ವಿಸ್ತಾರ ಮತ್ತು ವೈವಿಧ್ಯತೆ ನಮ್ಮನ್ನು ಬೆರಗುಗೊಳಿಸುತ್ತದೆ.

ಜಿನದತ್ತರು ಸೈದ್ಧಾಂತಿಕ ಹಣೆಪಟ್ಟಿಗೆ ಜೋತು ಬಿದ್ದವರಲ್ಲ. ಸಾಮಾಜಿಕ ಬದ್ಧತೆಗೆ, ಬದುಕಿನ ಶುದ್ಧತೆಗೆ ಒತ್ತುಕೊಟ್ಟವರು. ಬದುಕು-ಬರಹದ ಸಮನ್ವಯ ಸಾಧಿಸಿದವರು. 'ಹಳೆಯ ಹೆಂಡವನು । ಹೊಸ ಬಾಟಲಿಗೆ ಹಾಕಿ' ಮೋಸಗೊಳಿಸಿ ಮಾರುವ ಜಾಯಮಾನ ಅವರದಲ್ಲ. ಶುದ್ಧ ನ್ಯಾಯದ ಬುದ್ಧಿ.

ಕೊಡುವುದಾದರೆ । ಹೊಸತನ್ನು ಕೊಡು
ಮೋಡಕಾ ಬಜಾರಿನ । ಗಿರಾಕಿಯಲ್ಲ
ನಮ್ಮ ಓದುಗ

- ಎಂದು ಸಮಕಾಲೀನ ಕವಿಗಳನ್ನು ಎಚ್ಚರಿಸಿ ತಮ್ಮ ದಾರಿಯನ್ನು ತಾವೇ ರೂಪಿಸಿಕೊಂಡವರು. 'ಡಾಂಬರಿನ ಆಡಂಬರ । ಇಲ್ಲದಿರಬಹುದು । ಆದರೂ । ನನಗೆ । ನನ್ನ ದಾರಿಯೇ ಚೆಂದ' ಎಂದು ಸ್ವಂತಿಕೆ ಮೆರೆದವರು. ಛಲ ಮತ್ತು ಆತ್ಮಬಲದ ವಿಶ್ವಾಸದಿಂದ ತಮ್ಮ ದಾರಿಯ ಮೇಲೆ ಏಕಾಂಗಿಯಾಗಿ ಜಂಗಮಿಸಿದರು. ಅಂತರಂಗದ ಒಲುಮೆಯಲ್ಲಿ ನವೋದಯ ರಮ್ಯತೆಯಿದೆ, ಮನುಷ್ಯನ ಹುಡುಕಾಟದಲ್ಲಿ ನವ್ಯತೆಯಿದೆ, ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ಪ್ರತಿಭಟನೆಯ ಕಾವು ಕಾಣುತ್ತದೆ. **ಪರಂಪರೆಯನ್ನು ಪ್ರೀತಿಸುತ್ತಲೇ ಹೊಸತನಕ್ಕೆ ತೆರೆದುಕೊಳ್ಳುವ ವೈಚಾರಿಕ ಜಿಜ್ಞಾಸೆಯೇ ಅವರ ಕಾವ್ಯದ ಕೇಂದ್ರ ಪ್ರಜ್ಞೆ.** ತನ್ನೊಳಗೆ ತನ್ನತನವನ್ನು ಶೋಧಿಸುವುದು ಕಾವ್ಯದ ಮೂಲ ಆಶಯ.

ತಿಳಿದವರು ಹೇಳಿದರು –
'ಹುಡುಕು ಆಳಕ್ಕಿಳಿದು ಹುಡುಕು'
ಹುಡುಕಿದೆ,
ಅಲ್ಲಿ ನಾನಲ್ಲದಿನ್ನೇನೂ ಸಿಕ್ಕಲಿಲ್ಲ
ಇನ್ನೇನಾದರೂ ಇತ್ತೆ?
ನನಗೆ ಕಾಣಲಿಲ್ಲ.

ಜಿನದತ್ತರ ಕಾವ್ಯದ ಪ್ರಮುಖ ನೆಲೆಗಳು ಐದು. ೧. ಪರಂಪರೆಯ ಒಲವು. ೨. ಜೀವಪರ ನಿಲುವು. ೩. ಪರಿಸರ ಪರಮಾರ್ಜನೆ. ೪. ಸಾಮಾಜಿಕ ಬದ್ಧತೆ. ೫. ವೈಚಾರಿಕ ಪ್ರಬುದ್ಧತೆ.

ಪರಂಪರೆಯ ಒಲವು : ಸಾಂಸ್ಕೃತಿಕ ಸಂವಾದ ನವೋದಯದ ಧೋರಣೆಗಳಲ್ಲೊಂದು. ನವೋದಯ ಕವಿಗಳು ವಸಹಾತುಶಾಹಿ ಹೇರಬಯಸುವ ಏಕಾಕೃತಿಯ ಅಮೂರ್ತಗಳ ವಿರುದ್ಧ ಪ್ರಾದೇಶಿಕ ಸಂಸ್ಕೃತಿಯ ವಾಸ್ತವಗಳನ್ನು ಬಳಸಿದರು. ಭಾರತೀಯ ಪರಂಪರೆಯ ಸಂವಾದ ಜಿನದತ್ತರ ಮೊದಲ ಆಸಕ್ತಿ. ಬಾಹುಬಲಿ, ಬುದ್ಧ, ಬಸವ, ಗಾಂಧಿ ಮೊದಲಾದ ದಾರ್ಶನಿಕರೊಂದಿಗೆ ಮುಖಾಮುಖಿಗೊಳ್ಳುತ್ತಲೇ ಅನುಭಾವಿಕ ನೆಲೆಗಳನ್ನು ಎತ್ತಿಹಿಡಿಯುತ್ತದೆ. ಜಿನದತ್ತರ ದೇವರು ಕಲ್ಪನೆಯ ವಿಗ್ರಹವಲ್ಲ; ತನ್ನೊಳಗಿನ ಬೆಳಕು. ಮೋಕ್ಷ ನೀಡುವ ದೇವರ ಅಪೇಕ್ಷೆ ಅವರದಲ್ಲ. ದಿನನಿತ್ಯದ ಬದುಕಿನಲ್ಲಿ ಬೆಳಕು ತೋರುವ 'ಸಣ್ಣ ದೇವರು' ಬೇಕೆನ್ನುತ್ತಾರೆ. ಅವರಿಗೆ ಮಾನವೀಯತೆ ಮತ್ತು ದೈವತ್ವ ಭಿನ್ನವಾಗಿ ಕಾಣುವುದಿಲ್ಲ. ಆದ್ದರಿಂದಲೇ 'ಬೆಳಕು' ಅವರ ಕಾವ್ಯದ ಸಾರ್ಥಕ ರೂಪವಾಗಿ ಬೆಳಗುತ್ತದೆ.

ಸುಖ ಹೆಚ್ಚಾದರೆ ನನಗೆ ಕೊಡಿ
ದುಪ್ಪಟ್ಟು ಮಾಡಿಕೊಡುತ್ತೇನೆ;
ದುಃಖ ಹೆಚ್ಚಾದರೆ ನನಗೂ ಹಂಚಿಕೊಡಿ
ಅದನ್ನು ಕರಗಿಸಿಬಿಡುತ್ತೇನೆ.

ಜನರ ಸುಖ ಹೆಚ್ಚಿಸುವ, ದುಃಖ ಕರಗಿಸುವ ಈ ಉದಾತ್ತ ಮಾನವೀಯತೆ ಜಿನದತ್ತರ ಅಂತಃಕರಣದ ಅನನ್ಯತೆ. 'ಹಚ್ಚೂದ ಆದ್ರ ದೀಪ ಹಚ್ಚು, ಬೆಂಕಿ ಹಚ್ಚಬ್ಯಾಡ; ಆರ್‍ಸೂದ

ಆದ್ರ ನೋವು ಆರ್ಸು, ನಗೀ ಆರಸಬ್ಯಾಡ'- ಇದು ಇವರ ಕಾವ್ಯದ ಸಂದೇಶ. ಜಿನದತ್ತರ ಕಾವ್ಯದ ಮೂಲ ಸೆಲೆ ತ್ಯಾಗ-ಹಿಂಸೆ-ಅಪರಿಗ್ರಹದ ಧರ್ಮಾಂಬುಧಿ.

ಪರಿಸರ ಪರಮಾರ್ಚನೆ : ನಿಸರ್ಗ ವಿಸ್ಮಯದ ಸಂಚಯ. ಅದಮ್ಯ ಸಮ್ಮೋಹನ ಶಕ್ತಿಯ ನಿಸರ್ಗ ಕವಿಗಳನ್ನು ಚುಂಬಕದಂತೆ ಸೆಳೆಯುತ್ತದೆ. ಮಾಗಿ, ಮಳೆ, ವಸಂತ, ಬಾನು-ಬುವಿ, ಬೆಳಕು-ಬೆಳದಿಂಗಳು, ನಕ್ಷತ್ರ - ಹೂವು, ಜಿನದತ್ತರ ಕವಿತೆಗಳನ್ನು ಅರಳಿಸಿವೆ. ಕವಿ ಹಲವು ರೂಪಗಳಲ್ಲಿ ರವಿಯನ್ನು ಕಾಣುವುದು ಅದ್ಭುತ. ಜಗದ ಚಿತ್ರಗಳಿಗೆ ಬಣ್ಣ ಉಂಬುವ ಚಿತ್ರಗಾರ 'ರವಿ' ದೇವದತ್ತ; ಆ ರವಿಯನ್ನೇ ತನ್ನ ಶಬ್ದಗಳಲ್ಲಿ ಬಂಧಿಸಿದ 'ಕವಿ'- ಜಿನದತ್ತ. ಇವರಿಗೆ ಹೂವು ಹೂವುಗಳಲ್ಲಿ ಭಗವಂತನ ಹಲವು ಮುಖಗಳನ್ನು ದರ್ಶಿಸುವ ನಿಸರ್ಗೋಪಾಸನೆ ಅಪೂರ್ವವೆನಿಸುತ್ತದೆ.

ಜಗದ ಕಣಕಣಗಳಲ್ಲಿದ್ದಾನಂತೆ ದೇವರು
ನಾ ಕಾಣೆ,
ಆದರೀ ಹೂವುಗಳಲ್ಲಿರುವುದು ನಿಜ,
ದೇವರಾಣೆ.

ಭಾವೋತ್ಕಟತೆಯ ಉತ್ತುಂಗ ಸ್ಥಿತಿಯಲ್ಲಿ ಮೂಡುವ ಇಂಥ ಚುಟುಕಗಳಲ್ಲಿಯೇ ವಾಸ್ತವದ ಪ್ರಜ್ಞೆಯಿರುವುದು ಇನ್ನೂ ಸೋಜಿಗ. ವಾಸ್ತವದ ನೆಲೆಯಲ್ಲಿ ನಿಸರ್ಗವನ್ನು ಪರಿಭಾವಿಸುವ ದೇಸಿತನದಿಂದಲೇ ಇವರ ಪ್ರಕೃತಿ ಗೀತೆಗಳು ಓದುಗರ ಚಿಂತನೆಗೆ ಎಡೆಮಾಡಿಕೊಡುತ್ತದೆ.

ಸಾಮಾಜಿಕ ಬದ್ಧತೆ : ಕವಿತೆಯ ಆಳದಲ್ಲಿ ಅಂತಃಕರಣವಿದ್ದರೆ ಅದು ಸಮಾಜಮುಖಿಯಾಗಿ ಸ್ಪಂದಿಸುತ್ತದೆ. ಜಿನದತ್ತರ ಕಾವ್ಯ ಸಮಾಜದೊಂದಿಗೆ ವಿವೇಕಪೂರ್ಣ ಸಂಘರ್ಷ ಕ್ಕಿಳಿಯುತ್ತದೆ. ಕಾವ್ಯದ ಧ್ಯಾನದಲ್ಲಿ ಸಮಾಜದೊಳಗಿನ ಧ್ವನಿಗಳನ್ನು ಕೇಳುತ್ತದೆ. ಹಟ್ಟಿಯಲಿ ಹಸು ಕರು ಹಾಕಿದಾಗ ಮುದುಕಿಯ ದೀಪ ನಗುತ್ತದೆ. ಭಿಕ್ಷುಕನಿಗೆ ರೊಟ್ಟಿ ನೀಡಲು ಎತ್ತಿದ ಕೈ ಸುಖದ ದಾರಿಯ ಕೈಮರವಾಗುತ್ತದೆ.

ಸಮಕಾಲೀನ ಹಲವು ಸಮಸ್ಯೆಗಳು ಜಿನದತ್ತರನ್ನು ಕಾಡಿವೆ. ಹದಗೆಟ್ಟ ರಸ್ತೆಗಳು, ಕಾಣೆಯಾದ ಫೈಲುಗಳು, ರಾಜಕಾರಣಗಳ ಮೋಜುಗಳು, ಜಾತೀಯತೆಯ ಪೆಡಂಭೂತಗಳು, ಭಯೋತ್ಪಾದನೆಯ ಕೊಳ್ಳಿದೆವ್ವಗಳು ಹೀಗೆ ನೂರಾರು ಸಮಸ್ಯೆಗಳು ಅವರನ್ನು ಕಂಗೆಡಿಸಿವೆ. ನವಿರು ಹಾಸ್ಯದ ಮೂಲಕ ಇಂಥ ಸವಾಲುಗಳನ್ನು ವಿಡಂಬಿಸುವ ಹೊಸತನ ಜಿನದತ್ತರ ಚುಟುಕಗಳಲ್ಲಿದೆ.

ಕೆರೆಯ ನೀರನು ಕೆರೆಗೆ ಹಾಕಿ
ಉಪಕಾರ ಮಾಡುವವರಿದ್ದಾರೆ;
ಕೆರೆಯ ನೀರನು ಹಾಲಿಗೆ ಹಾಕಿ
ಹಣ ಮಾಡುವವರೂ ಇದ್ದಾರೆ.

ದೇಶಿ ಸಂಸ್ಕೃತಿಯಲ್ಲಿ ಬೆಳೆದುಬಂದ ದೇಸಾಯಿ ನಗರೀಕರಣದ ಭರಾಟೆಯಲ್ಲಿ ಕಳೆದುಕೊಳ್ಳುತ್ತಿರುವ ಮಾನವೀಯತೆ ಹಾಗೂ ತೀವ್ರಗೊಳ್ಳುತ್ತಿರುವ ಯಾಂತ್ರಿಕತೆಯನ್ನು ತಮ್ಮ ಕವಿತೆಗಳಲ್ಲಿ ಆಕೃತಿಗೊಳಿಸಿದ್ದಾರೆ.

ವೈಚಾರಿಕ ಪ್ರಬುದ್ಧತೆ : ಜಿನದತ್ತರು ಪರಂಪರಾಪ್ರಿಯರಾಗಿದ್ದರೂ ಸಂಪ್ರದಾಯವಾದಿಯಲ್ಲ. ನಮ್ಮ ಸಂಸ್ಕೃತಿಯೊಳಗಿನ ಒಳಿತು-ಕೆಡಕು ವಿಮರ್ಶಿಸುವ ಶಕ್ತಿ ಅವರಲ್ಲಿದೆ. ಬುದ್ಧನ ಬಗ್ಗೆ ಅವರಲ್ಲಿ ಶ್ರದ್ಧೆಯಿದ್ದರೂ 'ಬುದ್ಧ ಹೇಳಿದ್ದೆಲ್ಲ ಶುದ್ಧ'ವೆಂಬ ಮೌಢ್ಯವಿಲ್ಲ. 'ಆಶೆಯೇ ದುಃಖಕ್ಕೆ ಮೂಲ' ಎಂಬ ಬುದ್ಧನ ಉಪದೇಶವನ್ನು ತುಂಬ ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ-

ಜಗವೆಲ್ಲ ದುಃಖಮಯ
ಎಂದ ಬುದ್ಧ
ರಾಹುಲನ ನಗೆಯ
ನೋಡಿದ್ದನೆ?

ಎಂಥ ಅರ್ಥಪೂರ್ಣ ಜೀವನ ಮೀಮಾಂಸೆಯಿದು!

ಜಗತ್ತು ಮಿಥ್ಯ, ಸಂಸಾರ ಮಾಯೆ ಎಂದು ಹೇಳುವ ವೇದಾಂತಕ್ಕೂ ಕವಿ ವಿನೂತನ 'ಆಹ್ವಾನ' ನೀಡುವವರು. 'ಜಗವು ಸೊನ್ನೆಯೆಂದು ಹೇಳುವ ನೀವು ಸ್ನೇಹವನ್ನೆ ಕಂಡಿಲ್ಲ. ಸ್ನೇಹ ವಸುಧೆಯೊಳಗಿನ ಸುಧೆ'. ಒಡೆದ ಕೋಳಿ ಮೊಟ್ಟೆಯ ಹಳದಿ ದ್ರವದಲ್ಲಿ ಜೀವವೊಂದರ ಮಿಡಿತ ಜಿನದತ್ತರಿಗೆ ಕಾಣುವುದು ಅದರ ಜಿನದರ್ಶನ. ಅದಕ್ಕೆ ಅವರು ವಾಸ್ತವವಾದಿಯಾಗಿ ಮಾತನಾಡುತ್ತಾರೆ. ಬುದ್ಧನಿಗೆ ಶರಣು ಎನ್ನಬೇಕಾದ ನಾವು ಯುದ್ಧಕ್ಕೆ ಶರಣು ಹೇಳುತ್ತಿರುವುದು ಭೋಗದ ಬದುಕಿನ ಅತಿರೇಕ. ಜಿನದತ್ತರು 'ನನ್ನ ಗುರು ಬಸವಣ್ಣ । ನನ್ನ ದೇವರು ಸೂರ್ಯ' ಎಂದು ಸಾರುವುದು ಅವರ ವೈಚಾರಿಕತೆಯ ಪರಾಕಾಷ್ಠೆ. ಎಲ್ಲ ತಾರತಮ್ಯಗಳನ್ನು ಮೀರಿ ಬೆಳೆದ ಎಂಬತ್ತರ ದೇಸಾಯಿ ತುಂಬ ಸಂಯಮದಿಂದ ಕವಿತೆ ಕಟ್ಟುತ್ತಾರೆ. ಮೃದು ಮಾತುಗಳಿಂದಲೇ ಓದುಗರೆದೆಗೆ ಬೆಳಕು ತುಂಬುತ್ತಾರೆ.

ಬೆಳಕಿನ ಕಣ್ಣು ತೆರೆದಿಟ್ಟು ನಡೆಯೋಣ
ಕರುಳಿನ ಮಾತೆಲ್ಲ ಕಿವಿಗೊಟ್ಟು ಕೇಳೋಣ

ಜಿನದತ್ತರಿಗೆ ಜನರ ತೃಷೆಯರಿಯದ ದೇವರೂ ಬೇಡ; ಜನರ ಬದುಕು ನುಂಗುವ ಧರ್ಮವೂ ಬೇಡ. ಸೋರಿ ಹೋಗುವ ಬದುಕನ್ನು ಬಸಿಯದಂತೆ ಜನರ ಬೊಗಸೆಗೆ ತುಂಬುವ ಜನಪರ ಕಾವ್ಯ ಅವರದು. ಒಮ್ಮೊಮ್ಮೆ ಈ ದೇಶವನ್ನು ಕೆಡವಿ ಕಟ್ಟುವ ಆಲೋಚನೆ.

ಜಿನದತ್ತರಿಗೆ ಚುಟುಕು ಬಲುಪ್ರಿಯವಾದ ಕಾವ್ಯ ಮಾಧ್ಯಮ. ಅವರ ದೃಷ್ಟಿಯಲ್ಲಿ ಅದು ಚಂದ್ರಬಿಂಬ. 'ಸಹಸ್ರ ಚಂದ್ರ' ಜಿನದತ್ತರ ಚುಟುಕಗಳ ಸಮಗ್ರ ದರ್ಶನ.

ಈ ಚುಟುಕುಗಳೇ ಹೀಗೆ
ಕಣ್ಣು ಮಿಟುಕಿಸಿ ಕರೆಯುತ್ತಿವೆ.
ಹತ್ತಿರ ಹೋದರೆ ಕುಟುಕುತ್ತಿವೆ
ಕುಟುಕಿದರೇನು? ನೋವಿಲ್ಲ
ನಗೆ
ಅದೇ ಚುಟುಕಿನ ಬಗೆ.

ಚುಟುಕ ಬ್ರಹ್ಮ ದಿನಕರ ದೇಸಾಯಿಯವರ ನಂತರ ಚುಟುಕಗಳೊಂದಿಗೆ ಇಷ್ಟು ಚಿಟಿಕೆ ಹಾಕಿದ ಏಕೈಕ ಕವಿ ಜಿನದತ್ತ ದೇಸಾಯಿ. 'ನೀವು ದಿನಕರ ದೇಸಾಯಿಯವರಿಗೆ ಏನಾಗಬೇಕೆಂದು' ಜನ ಕೇಳುವಷ್ಟರ ಮಟ್ಟಿಗೆ ಈ ದೇಸಾಯಿಯವರಿಬ್ಬರು ಚುಟುಕು ಒಕ್ಕಿದ್ದಾರೆ. ಆದರೆ ಜಿನದತ್ತರ ಕಾವ್ಯ ವಿಮರ್ಶೆಯ ಅವಜ್ಞೆಗೊಳಗಾಯಿತು. ಆ ಕೊರಗು ಕವಿಯನ್ನು ಕಾಡದೇ ಬಿಟ್ಟಿಲ್ಲ.

ಕವಿಗಳೇ ಕದಿಯುವುದಾದರೆ
ನನ್ನ ಚುಟುಕಗಳನ್ನು ಆಯ್ದುಕೊಳ್ಳಿ
ಅವು ಪ್ರಚಾರದಲ್ಲಿಲ್ಲ
ಸಿಕ್ಕಿ ಬೀಳುವ ಭಯವಿಲ್ಲ

ಸಹಜ ಮಾತನ್ನು ಕಾವ್ಯವಾಗಿಸುವ ಕೌಶಲ ದೇಸಾಯಿಯವರದು. ಮಾತು ಮೃದುವಾಗಿದ್ದರೂ ಬಾಣದಂತೆ ನೇರವಾಗಿ ಎದೆಯಲ್ಲಿ ನಡುತ್ತವೆ. ಶಬ್ದಗಳ ಸರ್ಕಸ್ ಇಲ್ಲ, ಭಾವದಲ್ಲಿ ದ್ವಂದ್ವವಿಲ್ಲ, ಶೈಲಿಯಲ್ಲಿ ಯಾಂತ್ರಿಕ ಕಸರತ್ತಿಲ್ಲ. ಸಾಮಾನ್ಯ ಓದುಗರ ಮನ ಗೆಲ್ಲಬಲ್ಲ ತಾಕತ್ತು ದೇಸಾಯಿಯವರ ಕಾವ್ಯದಲ್ಲಿದೆ. ಕೆಲವೆಡೆ ಲಯವಿಲ್ಲದಿರಬಹುದು. ಆದರೆ 'ದಯೆ'ಯಿಲ್ಲದಿಲ್ಲ. ವಿಶೇಷವಾಗಿ ಅವರ ಚುಟುಕಗಳು ಮರು ವಿಮರ್ಶೆಗೆ ಒಳಪಡಬೇಕು. ದೇಸಾಯಿಯವರ ಕಾವ್ಯ ಕನ್ನಡದ ಗರಿಮೆ; ದೇಸಾಯಿಯವರು ಕನ್ನಡದ ಹಿರಿಮೆ. ಹಿರಿಯ ಕವಿ ಕಣವಿಯವರು ಹೇಳುವಂತೆ ಜಿನದತ್ತರಿಗೆ 'ಬೊಗಸೆಯಲ್ಲಿ ಬೆಳಕು ಹಿಡಿಯುವ ತನಕ; ಹೆಜ್ಜೆ ಸಾಲಿನಲಿ ಗೆಜ್ಜೆ ಕಟ್ಟುವ ಗಮಕ'. 'ಕವಿತಾ ಗುಣಾರ್ಣವ'ನ ಸಂತತಿಗೆ ಸೇರಿದ 'ಕವಿತಾ ಸುಧಾರ್ಣವರು' ಜಿನದತ್ತ ದೇಸಾಯಿಯವರು.

●

ಮೂರು ಕವನಗಳು*

● ಕೆ. ಬಿ. ಪವಾರ

ಎರಡೂ ಕಡೆಯುವರು

ಅವನು ಅಪರಿಚಿತನಂತಿದ್ದ
ಮೊನ್ನೆ ಮೊನ್ನೆ ನನ್ನ ಹತ್ತಿರ ಬಂದಿದ್ದ
ನೆತ್ತಿ ಕತ್ತು ನೇವರಿಸಿ
ಪ್ರೀತಿಯಿಂದ ಕೇಳಿದ್ದ
'ಹೇಗಿದ್ದೀಯಾ? ಜೊತೆಯಾಗಿರೋಣವೇ'

ಗುರುತು ಕಳೆದೇ ಹೋಗಿತ್ತು
ಕೇಳಿದೆ, 'ನೀನು ಯಾರಾಗಿತ್ತು?'
ಹೇಳಿದ, 'ನಾನೂ ನೀನೂ
ಒಟ್ಟಿಗೇ ಹುಟ್ಟಿದವರು
ನೀನು ಆ ಕಡೆಯವನು,
ನಾನು ಈ ಕಡೆಯವನು'

ಏನೋ ನೆನಪಾಗಿ ಎದ್ದವನೆ ಹೇಳಿದ :
ತಪ್ಪು ದಾರಿಯಲಿ ಬಂದೆ
ನೀನಿದ್ದಲ್ಲಿ ನಾನಿರಬಾರದು
ನಾನಿದ್ದಲ್ಲಿಯೂ ನೀನಿರಬಾರದು
'ಸರಿ, ಮತ್ತೆ ಸಿಗತೇನೆ' ಹೋಗಿದ್ದ
ಸದ್ಯ, ನಾಪತ್ತೆ!

ನಿದ್ದೆ ನಡೆ

ನಿದ್ದೆಯಲಿ
ಅರ್ಧ ಎಚ್ಚರವಾಗಿ
ಬಚ್ಚಲ ಕಡೆ ಹೋಗಿ
ಉಚ್ಚೆ ಮಾಡಿದ್ದಷ್ಟೇ
ನೆನಪು; ಅದೂ ಎಷ್ಟು?

ಎಚ್ಚರವಿರುವ ಜನ
ಮಚ್ಚು ಹಿಡಿದು
ಓಡಾಡಿದರಂತೆ

---

* ಹುಡುಕಾಟ (೨೦೧೩) ಸಂಕಲನದಿಂದ

ಕೊಚ್ಚಿ ಬಿಡಲು

ನ್ಯಾಯಾಲಯದಲ್ಲಿ
ನ್ಯಾಯವಾದಿಯ ವಾದ :
'ಸ್ವಾಮೀ ಅವನು
ಎಚ್ಚರದಲ್ಲೇ ಎಸಗಿಲ್ಲ
ನಿದ್ದೆಯಲಿ ನಡೆಯುವ ರೋಗದವ
ಕ್ಷಮಿಸಿ ಬಿಡಿ'

ಇದು ತಂತಾನೇ ರೋಗವೋ ?
ತಂದುಕೊಂಡ ರೋಗವೋ
ಇನ್ನೂ ಇತ್ಯರ್ಥವಾಗಿಲ್ಲ!

ಬಂಗಾರದ ಸೂಜಿ

ಸುಳಿವೇ ಸಿಗಲಿಲ್ಲ
ಅದು ಹೇಗೋ ಒಳಗೊಳಗೆ ಚುಚ್ಚಿತು
ನಯ ನಾಜೂಕಿನ ಬಂಗಾರದ ಸೂಜಿ
ಕನಸಿನಲೂ ಎಣಿಸಿರಲಿಲ್ಲ
ಇಂಥ ಸೂಚಿಗಳಿರುತ್ತವೆಯೆಂದು
ಮೆಲ್ಲಗೆ ಗೊತ್ತಾಗುತ್ತದೆ
ನವೆ ನೋವು ಬಂದಂತೆ
ವಿಷವೇರುತ ಹೋದಂತೆ!

ಚುಚ್ಚಿದವರೀಗ ಮುಲಾಮು ಹಚ್ಚುತ್ತಾರೆ
ಅಮಾಯಕರಂತೆ; ಅಂತೆಯೇ
ತಾವು ನಿಜ ಚಿಂತಕರಂತೆ
ಅವರಿಗೆ ಕಣ್ಣೀರು ಕೂಡ ಬರುತ್ತೆ
ಕೃತಕ ಧಬೆ ಧಬೆ ಯಂತೆ
ನಸುನಗುವಿರುತ್ತದೆ ಒಳಗೊಳಗೆ
ವಿಕೃತ ಮನಸ್ಸಿನ ನೆರಳೊಳಗೆ

ಆದರೆ ಚುಚ್ಚಿದ ಸೂಜಿ
ಚುಚ್ಚಿ ಚುಚ್ಚಿ ಕಿವಿ ಮಾತು ಹೇಳುತ್ತದೆ :
ಎಚ್ಚರವಾಗಿರು
ಜಗತ್ತು ಹೀಗೂ ಇರುತ್ತದೆ.

●

ಮರೆಯಾದ ಕವಿ ಜಗದೀಶ ಮಂಗಳೂರಮಠ

● ಸತೀಶ ಕುಲಕರ್ಣಿ

ಉತ್ತರ ಕರ್ನಾಟಕದಿಂದ ಬಂಡಾಯ ಗಟ್ಟಿ ದನಿಯಾಗಿದ್ದ ಜಗದೀಶ ಮಂಗಳೂರಮಠ ಎಂಬ ಸೂಕ್ಷ್ಮ ಮನಸ್ಸಿನ ಕವಿ, ೨೧-೧೨-೨೦೧೮ರಂದು ನಮ್ಮನ್ನು ಅಗಲಿದ್ದಾರೆ. ಜಗದೀಶ ಬರೆದದ್ದು ಸಂಖ್ಯಾ ದೃಷ್ಟಿಯಿಂದ ಬಹಳ ಕಡಿಮೆ. ಆದರೆ ಬರೆದ ಪ್ರತಿಯೊಂದು ಬರವಣಿಗೆಯ ಹಿಂದೆ ಒಂದು ತಾತ್ವಿಕ ಬದ್ಧತೆ ಮತ್ತು ಕಲಾತ್ಮಕ ಸಿದ್ಧಿ ಇತ್ತು. ಎಂದೂ ಕಾವ್ಯದಲ್ಲಾಗಲಿ, ನಿಜ ಜೀವನದಲ್ಲಾಗಲಿ ಎತ್ತರದ ದನಿಯಲ್ಲಿ ಮಾತನಾಡದವರು. ಸದಾ ಒಳ್ಳೆಯದರ ಸಂಗಡ ಇದ್ದ ವ್ಯಕ್ತಿ.

ಹುಬ್ಬಳ್ಳಿ-ಧಾರವಾಡ ಮತ್ತು ಬೆಂಗಳೂರು-ಮೈಸೂರು ಕರ್ನಾಟಕದ ಪ್ರಸಿದ್ಧ ಜೋಡಿ ನಗರಗಳು. ಜೋಡಿಯಾಗಿ ಇವನ್ನು ಹೇಳುವಾಗ ಹೊರಡುವ ಅರ್ಥ ಬಿಡಿಬಿಡಿಯಾಗಿ ಹೇಳುವಾಗ ಇರುವುದಿಲ್ಲ. ಹುಬ್ಬಳ್ಳಿ-ಧಾರವಾಡ ತೆಗೆದುಕೊಂಡಾಗ ಹುಬ್ಬಳ್ಳಿ ಉದ್ಯಮ ನಗರಿ, ಸದಾ ಹೋರಾಟ, ವ್ಯಾಪಾರ ಯಂತ್ರಗಳಲ್ಲಿ ಗೀಚಿಕೊಂಡರೆ, ಮಗ್ಗುಲಲ್ಲಿ ಮಲಗಿದ ಧಾರವಾಡ ಶಾಂತ - ಪ್ರಶಾಂತ. ಕರ್ನಾಟಕ ವಿಶ್ವವಿದ್ಯಾನಿಲಯ, ಆಕಾಶವಾಣಿ, ವಿದ್ಯಾವರ್ಧಕ ಸಂಘ, ಕರ್ನಾಟಕ ಕಾಲೇಜು ಹೀಗೆಲ್ಲ ಪ್ರಸಾರ ಕೇಂದ್ರಗಳ ನಗರ. ಬೇಂದ್ರೆ ಅವರಿಂದ ಹಿಡಿದು ಗಿರಡ್ಡಿ, ಚಂಪಾ, ಕಲಬುರ್ಗಿ, ಪಟ್ಟಣಶೆಟ್ಟಿ ಮುಂತಾದವರಿಂದ ಪ್ರಸಿದ್ಧ ಕೂಡ. ಹುಬ್ಬಳ್ಳಿಯಲ್ಲಿ ಕೆಲವೇ ಕೆಲವು ಸಾಹಿತಿಗಳ ಪುಟ್ಟ ಗುಂಪು, ಪ್ರಹ್ಲಾದ ಅಗಸನಕಟ್ಟೆ, ಜಗದೀಶ ಮಂಗಳೂರಮಠ, ಎಂ.ಡಿ. ಗೋಗೇರಿ, ಸಿ. ಎಂ. ಚನಬಸಪ್ಪ, ಇತ್ತೀಚಿನ ಮಹಾಂತಪ್ಪ ನಂದೂರ, ರಾಮಸ್ವಾಮಿ ಮುಂತಾದವರು. ಹುಬ್ಬಳ್ಳಿಯ ವಾಸಿಯಾದರೂ ಧಾರವಾಡದ ದನಿಯಾಗಿರುವ ಪಾಪು ಕೂಡ ಹುಬ್ಬಳ್ಳಿಯವರೇ.

ಜಗದೀಶ ಮಂಗಳೂರಮಠರ ಹೆಸರು ಈಗ ಹುಬ್ಬಳ್ಳಿಯ ಇತಿಹಾಸಕ್ಕೆ ಸೇರಿದೆ. ಸಾರಿಗೆ ಇಲಾಖೆಯಲ್ಲಿ ಸಣ್ಣ ನೌಕರರಾಗಿದ್ದ ಮಂಗಳೂರಮಠ ಈ ಭಾಗದಲ್ಲಿ ಎಲ್ಲರಿಗೂ ಪ್ರಿಯರಾದವರು. ಎಲ್ಲ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದವರು. 'ಕಲ್ಲರಳಿ ಹೂವಾಗಿ' 'ಉರಿಯ ಚಪ್ಪರದೊಳಗೆ' ಹಾಗೂ 'ಬರುವೆನೆಂದವನು' ಎಂಬ ಮೂರೇ ಮೂರು ಸಂಕಲನಗಳನ್ನು ಪ್ರಕಟಿಸಿದ್ದರು. ಮೂಲತಃ ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ಜಗದೀಶ ಮಂಗಳೂರಮಠ ಒಂದು ರೀತಿಯಲ್ಲಿ ಬಡತನ, ದುರಂತ, ನೋವು ಸಂಕಟದಲ್ಲಿ ನೊಂದಜೀವ.

ಮನೆಯ ಮುಂದಿನ ಬಾವಿಕಟ್ಟೆಯ ಮೇಲೆ ಕುಳಿತುಕೊಳ್ಳುವ ಹವ್ಯಾಸದ ಅವರ ತಾಯಿ ಒಂದು ದಿನ ಬಾವಿಯಲ್ಲಿ ಬಿದ್ದದ್ದು, ಕಣ್ಣಿನ ದೃಷ್ಟಿ ಕಳೆದುಕೊಂಡು ಇನ್ನೇನು (ಕಣ್ಣಿನ ನೋವಂತು ಕೊನೆಯ ತನಕ ಕಾಡಿತು) ಸರಿ ಆಯಿತು ಅನ್ನುವಷ್ಟರಲ್ಲಿ, ಪತ್ನಿ ಶಾರದಾರ ಕಣ್ಣಿಗೆ

ಬಿಲ್ಲು-ಬಾಣಾಟ ಆಡುವ ಮಕ್ಕಳಿಂದ ಬಾಣ ತಾಗಿ ಘಾಸಿಯಾಗಿದ್ದು ಮುಂತಾದ ತಾಪತ್ರಯಗಳನ್ನು ಅನುಭವಿಸಿದ್ದರು. ಇವು ಕೆಲವು ಉದಾಹರಣೆಗಳು ಮಾತ್ರ. ಉಂಡ ಬಡತನ, ಕಂಡ ಅನ್ಯಾಯಗಳನ್ನು ಅವರನ್ನು ಕೆಂಪು ಧ್ವಜದ ಕೆಳಗೆ ತಂದು ನಿಲ್ಲಿಸಿದ್ದವು. ತಮ್ಮ ನೋವನ್ನು ಸೇರಿಸಿ, ಸಮುದಾಯದ ಕಾವ್ಯವಾಗಿಸಿದ್ದರು. ಇದಕ್ಕೆ 'ಉರಿಯ ಚಪ್ಪರದೊಳಗೆ' ಸಂಕಲನದ 'ಬಂಗಾರ ಬೇಡಲಿಲ್ಲ ಅವರು' ಕವಿತೆಯ ಸಾಲುಗಳನ್ನು ನೋಡಬಹುದು.

> ಬಂಗಾರ ಬೇಡಲಿಲ್ಲ ಅವರು, ಭವ್ಯ ಭವನಗಳ ಕೇಳಲಿಲ್ಲ
> ಕದಿಯಲಿಲ್ಲ, ಕಿತ್ತು ತಿನ್ನಲಿಲ್ಲ, ಕತ್ತು ಮುರಿಯಲಿಲ್ಲ
> ಬೆನ್ನು ಬಾಗಿಸಿ ರಟ್ಟೆ ನೋಯುವಂತೆ ಮೈಮುರಿದು ದುಡಿದು
> ನೆಲವೆಡೆಗೆ ಬೆವರು ಹನಿಸಿದರು ಉತ್ತಿ ಬಿತ್ತಿ ಹರಿಸಿ ನುಡಿಸಿದರು.

ಮಾರ್ಕ್ಸ್ ಸಿದ್ಧಾಂತದಲ್ಲಿ ನಂಬುಗೆ ಇಟ್ಟು, ಸದಾ ಕಾರ್ಮಿಕ ಚಳುವಳಿಯಲ್ಲಿದ್ದ ಮಂಗಳೂರಮಠ ಈ ಕವಿತೆ ದುಡಿಯುವವರ ದನಿಯಾಗಿ ಕೊನೆಗೆ

> ಕೊಂದು ಸಂಪನ್ನರಾದವರೇ, ಸದ್ದನಡಗಿಸಿದವರೇ ಹುಗಿಯಲಾರಿರಿ
> ಸತ್ಯವನ್ನು ಸದಾಕಾಲ ಕಾಲ ಚಲಿಸುವಾಗ ಚಲಿಸುತ್ತಲೇ ಸತ್ತ
> ಜೀವಿಗಳಿಗೆ ಕಬ್ಬಿನ ಬೆಳೆಗೆ ರಕ್ತಕ್ಕೆ ಘೋಷಣೆಗೆ, ಮಾತಿಗೆ
> ಬೆವರಿನ ಅರ್ಥ ತರುತ್ತದೆ ಕೊನೆಗೊಂದು ಕೆಂಪು ಸೂರ್ಯೋದಯ.

ಮಂಗಳೂರಮಠ ನಾಲ್ಕು ದಶಕಗಳ ಕಾಲ ಕಾರ್ಮಿಕ ಚಳುವಳಿಯಲ್ಲಿ ಭಾಗಿಯಾಗಿದ್ದರು. ಸಾರಿಗೆ ಇಲಾಖೆಯ ನೌಕರರ ಸಂಘದಲ್ಲಿ ಹೋರಾಟದಲ್ಲಿ ಕೂಡ ಇದ್ದವರು. ಕಾಮ್ರೆಡುಗಳಾದ ಅನಂತಸುಬ್ಬರಾವ್, ಕೆ. ಎಸ್. ಶರ್ಮ, ಸಿ. ಆರ್. ಭಟ್ಟರ ಒಡನಾಟ ಇಟ್ಟುಕೊಂಡಿದ್ದರು. ನಿವೃತ್ತಿಯ ನಂತರ ಕೆ. ಎಸ್. ಶರ್ಮಾ ಅವರ ಅನೇಕ ಇಂಗ್ಲೀಷ್ ಬರಹವನ್ನು ಕನ್ನಡಕ್ಕೆ ಅನುವಾದಿಸಿದವರು. ಲೂಶನ್ ಕಾದಂಬರಿಗಳನ್ನು ಕೂಡ ಕನ್ನಡಿಸಿದ್ದರು.

'ಕಾಮ್ರೆಡ್ ದಿರಸಿನಲ್ಲಿಯೂ ಕಾವ್ಯದ ಪಿಸುಗಟ್ಟುವಿಕೆಯನ್ನು ಕಳೆದುಕೊಳ್ಳದೆ, ಗಾಢಾಂಧಕಾರದ ಮಧ್ಯೆ ತಣ್ಣಗೆ ಉರಿದ ದೀಪದಂತೆ, ಜಗದೀಶ ಮಂಗಳೂರಮಠ ಎಲ್ಲರ ನೋವನ್ನು, ಎಲ್ಲ ಯಾತನೆಗಳನ್ನು ತನ್ನದೆಂದೂ ಉರಿಸಿಕೊಂಡ ಕವಿ' ಎಂದು ಪ್ರಹ್ಲಾದ ಅಗಸನಕಟ್ಟೆ ಉರಿಯ ಚಪ್ಪರದೊಳಗೆ ಸಂಕಲನದ ಬೆನ್ನುಡಿಯಲ್ಲಿ ಹೇಳುತ್ತಾರೆ.

ದಲಿತ-ಬಂಡಾಯ ಸಾಹಿತ್ಯ ಚಳುವಳಿಗಳ ಹಿನ್ನೆಲೆಯಿಂದ ಬಂದ ಜಗದೀಶ, ಸಮುದಾಯದೊಂದಿಗೆ ಮಾತನಾಡುತ್ತ, ಸಮುದಾಯದ ಒಳದನಿಯೂ ಆಗಿದ್ದರು. ತನ್ನೊಳಗೆ ತಾನು ಮಾತಾಡಿಕೊಂಡು, ನಿರ್ಮಲ ಮನಸ್ಸಿನ ಸ್ವಗತಗಳ ಬರೆದವರು. ತನ್ನ ನಂಬುಗೆಗಳಿಗೆ ಕೊನೆಯ ತನಕ ಬದ್ಧರಾಗಿ ಅನಾಮಿಕರಾಗಿಯೇ ಬದುಕಿಹೋದ ಜಗದೀಶ ಮಂಗಳೂರಮಠ

ಹಠಾತ್ ನಿರ್ಗಮನ ದೊಡ್ಡ ನೋವಿನ ಸಂಗತಿ. ಅವರ ಪ್ರತಿಭೆಗೆ ಸೂಕ್ತ ಪ್ರಾಶಸ್ತ್ಯ ಸಿಗಲಿಲ್ಲವೇನೊ ಎಂಬ ವಿಷಾದ ಕೂಡ.

ಜಗದೀಶರ ಕಾವ್ಯದಲ್ಲಿಯ ಝಳಪು, ಒಟ್ಟು ನಂಬುಗೆಗಳನ್ನು ಛಿದ್ರಗೊಳಿಸುವ ಶಕ್ತಿ, ಪೂರ್ಣ ಅಂತರಂಗಕ್ಕಿಳಿದು ಬರೆಯುವ ಲಯಬದ್ಧ ಶೈಲಿ ತೀರ ಅಪರೂಪದ್ದು. ಅವರ ಕವಿತೆಯ ಕೆಲವು ಸಾಲುಗಳು :

ಕೋಟಿ ಕೋಟಿ ಜನರ ನಿಟ್ಟುಸಿರ ತಿದಿಯೂದಿ ಉರಿದ
ಕತ್ತಲಿದ್ದಲು ಹೊತ್ತಿ ಮೂಡಲದ ಬಾನಲ್ಲಿ ಕೆಂಪಡರಿತು
(ಬೆಳಗಾಯಿತು)

ಮೌಢ್ಯದ ಬಾಟಲಿ ತುಂಬ ಧರ್ಮದ ಸೆರೆ ಕುಡಿದ
ಬತ್ತಿ ಹೋಯಿತು ಕಕ್ಕುಲಾತಿ ಕುರುಡಾಗಿ ಕಣ್ಣು.....
ಆತ್ಮಗಳು ಹೆಪ್ಪುಗಟ್ಟಿವೆ ಕಪ್ಪು ಕತ್ತಲೆ ಕವಿದು
(ನರಬಲಿ)

ಭ್ರಮೆಯ ಬೀಜಗಳ ಬಿತ್ತಿ ವಾಸ್ತವದ
ಬೆಳೆ ಬೆಳೆದಿಲ್ಲ ಯಾರೂ
ಆದರೂ ಭ್ರಮೆಯ ಬೀಜಗಳ ಬಿತ್ತುವ ತುರುಸು
ಈಗ ಎಲ್ಲೆಲ್ಲೂ
(ಭ್ರಮೆಯ ತೇರಿನ ಹಿಂದೆ)

ನೆಲವನೊದೆಯದೆ ಆಕಾಶವನ್ನರಸುವ ಹಾಡು
ಅವನೆದೆಯಿಂದ ಹಬ್ಬ ಹರಡಿತು ನಾಡಿನೆಲ್ಲೆಡೆಗೆ
ದಿಕ್ಕುಗಳು ಕರಗಿದವು ಕರುಣೆರಾಗದ ಆರ್ತತೆಗೆ
(ನಕ್ಷತ್ರ ಕಲ್ಯಾಣ)

ಓಡಬೇಕು ಬೆಳಗೆದ್ದರೆ ಜಿಂಕೆ, ಸಿಂಹಕ್ಕೂ ವೇಗವಾಗಿ
ಕ್ರೂರ ದವಡೆಗೆ ಸಿಕ್ಕು, ಮರಣಕ್ಕೆ ಶರಣೆನ್ನದಿರಲು
ಓಡಬೇಕು ಬೆಳಗೆದ್ದರೆ ಸಿಂಹ ಜಿಂಕೆಗೂ ವೇಗವಾಗಿ
ಹಸಿವೆ ದವಡೆಯಲಿ ಸಿಕ್ಕು ಸಾವಿಗೆ ಶರಣೆನ್ನದಿರಲು
(ಓಡಬೇಕು)

ಸಹಜ ಸಾಲುಗಳು, ಅಪರೂಪದ ಪ್ರತಿಮೆಗಳಲ್ಲಿ ರೂಪಕಗಳಲ್ಲಿ ಕವಿತೆ ಕಟ್ಟುವ ಕಲೆ ಬಲ್ಲವರಾಗಿದ್ದ ಮಂಗಳೂರಮಠ ಮರ್ಮ ಮುಟ್ಟುವಂತೆ ಬರೆದರು. ತಮ್ಮ ನೋವು ಸಂಕಟಗಳಿಗೆ ಮುಳ್ಳುಗಳ ನಡುವೆ ಅರಳಿದ ಹೂವಿನಂಥ ಕಾವ್ಯ ಬರೆದು ಮರೆಯಾದರು.

●

ಜಗದೀಶ ಮಂಗಳೂರಮಠರ ಕವಿತೆ :

ನೆಲದ ಸಿರಿ

ಕವಿತೆಗೆ ಜೀವ ತುಂಬುವುದು ಪ್ರತಿ ನಿರ್ಮಿತಿ ಕೆಲಸ
ಬರೆದ ಕವಿತೆಯಂತೆ ಬದುಕುವುದೂ ವ್ರತಸಾಹಸ
ಎರಡು ಕರ್ಮಗಳೂ ಹೂವರಳಿದಷ್ಟು ಸಹಜ ಬಂಧುರ
ಕಲ್ಯಾಣನಗರದ ತಪ ನಿರತ ಚೆಂಬೆಳಕ ಕಾವ್ಯಯೋಗಿಗೆ.

ಹೊಂಬಳದ ನಾಡಿಂದ ಹೊಂಬೆಳಕನರಸಿ ನಡೆದದ್ದೊಂದೇ ದಾರಿ
ನವೋದಯದ ಗುಡ್ಡ ಗಿಡಬಳ್ಳಿ ಹೂದೋಟ ನದಿ ಝರಿ
ತಾರೆ ಚಂದ್ರಮರ ದಾಟಿ ನವ್ಯದ ಸಂಕೀರ್ಣ ಬೀದಿಯಲ್ಲೂ
ಬಂಡಾಯದ ಬೆಂಕಿ ಹಾದಿಯಲ್ಲೂ ಪ್ರೀತಿ ಬಿಡದ ಧಾಟಿ.

ಶ್ರಾವಣದ ಮುಗಿಲ ಸೆಳಕುಗಳುದುರಿದರೆ ಭೂಮಿ ನವಿರು
ಎದೆಯ ಮಲೆಯಲ್ಲಿ ಗರಿಬಿಚ್ಚಿ ನರ್ತಿಸುವ ನವಿಲು
ಮಳೆಯ ನೂರು ಲೀಲೆಗಳೆಲ್ಲ ಹಾಡಾಗಿ ಹರಿದ ಪರಿ
ನುಡಿತುಂಬಿ ಅರಳುವ ಧನ್ಯತೆ ಹಸಿರಾದ ಪ್ರಕೃತಿ ನಾರಿ.

ಕೈಗೆ ಸಿಕ್ಕರೆ ಕಾಲನ ಚಚ್ಚುವ ಸಲಿಗೆ ಬೆರಗಿನೊಡನೆ
ಕೊನೆ ನಿಲ್ದಾಣದೆಡೆ ಇಡದೆ ಓಡುವ ರೈಲಿನ ಸೂಚನೆ
ವಿಶಾಲ ಆಕಾಶದ ನಂಬಿಕೆಯಡಿ ಅರಳಿ ಕಂಪಿಸುವ
ಸುನೀತ ಶಿಲ್ಪ ಸಾರ್ಥಕ ಜೀವಗಳ ಸುಂದರ ಕೆತ್ತನೆಗಳು.

ಮಾಯೆಗೆ ಮುನಿಸದ ಅಮಿತ ಪ್ರೇಮ ಬದುಕಿನ ಪಾಡು
ನೊಂದ ಎದೆಗಳೊಡನೆ ಸದಾ ಬೆರೆವ ಅನುಕಂಪ ಝರಿ
ಒಳಿತಿನಿಂದ ಛಂದದಿ ಬರೆದ ಜೀವ ಮೂಲದ ದಿವ್ಯ ಹಾಡು
ಸುವಿಶಾಲ ಬೆಳೆದ ಜೀವವೃಕ್ಷ ಜೀವ ಧ್ವನಿ ನೆಲದ ಸಿರಿ.

ಮಾತು ಬೆಳ್ಳಿ; ತೂಕ ಮಾಡಿಟ್ಟ ಹಾಗೆ ಬಿಟ್ಟ ಬಾಣದ ಬಗೆ
ಮರುಕ್ಷಣ ಮೌನ : ಬಂಗಾರದುಸಿರು, ಸೂಸುವ ನಸುನಗೆ
ವಿಷಾದದ ಬೂದಿಯೊಳು ಬೆಚ್ಚಗೆ ಜಾಗೃತಿ ಕೆಂಡದ ಕಾವು
ಚುಚ್ಚಿ ವಿಡಂಬನೆ ಚಾಟಿ ಏಟು ಸಮಾಜ ಭೈರವನಿಗೆ.

ವಿಶ್ವಭಾರತಿಗೆ ಎತ್ತಿ ಕನ್ನಡದಾರತಿ ಮನೆ ಬೆಳಗುವ
ನಂದಾದೀಪಕ್ಕೆ ಕುಂದೊದಗಿದರೆ ಕನಲಿ ನಿಲ್ಲುವ ಕಲಿ
ಮಣ್ಣಿನ ಮೆರವಣಿಗೆಯ ನಡುವೆಯೂ ಹಿಂಗದ ಅನುಭಾವ
'ಬದಲಾವಣೆ ಬಾಳಿನೊಗ್ಗರಣೆ' ಚಲಿಸುವ ಸ್ನೇಹದ ಗಾಳಿ.

ಉತ್ತರಾರ್ಧ : ಜಿ. ಎಚ್. ನಾಯಕ

(ಸಿರಿವರ ಪ್ರಕಾಶನ, ಬೆಂಗಳೂರು : ೨೦೧೧)

ಜಿ. ಎಚ್. ನಾಯಕರ ಪ್ರಸಿದ್ಧ ಕೃತಿಯೊಂದರ ಹೆಸರು ನಿಜದನಿ. ಅದು ಸಾಹಿತ್ಯಕೃತಿಯ ನಿಜದನಿಯನ್ನು ಸೂಚಿಸುವಂತೆ ನಾಯಕರ ದನಿಯನ್ನೂ ಅದು ಹುಸಿದನಿಯಲ್ಲ ಎಂಬುದನ್ನು ಸೂಚಿಸುತ್ತದೆ. ನಿಜವನ್ನು ಅರಸುವುದು, ಅದನ್ನು ಗಟ್ಟಿಯಾಗಿ ಸಮರ್ಥಿಸುವುದು ಅವರ ವಿಮರ್ಶೆಯ ಪ್ರಧಾನ ನೆಲೆ. ನಿಜಕ್ಕೆ ನಿಷ್ಠವಾದ ಅವರ ಬದುಕೆ ಅದಕ್ಕೆ ಬಹುದೊಡ್ಡ ಆಸರೆ.

ನಾಯಕರ ಇತ್ತೀಚಿನ ಕೃತಿ ಉತ್ತರಾರ್ಧ. ಅದರಲ್ಲಿ ಅವರು ಕೃತಿಯ ನಿಜದನಿಯನ್ನು ಅರಸಿ ಪ್ರತಿಪಾದಿಸುವಂತೆ ತಮ್ಮ ಬದುಕಿನ ಸಂದರ್ಭದ ನಿಜವನ್ನು ಪ್ರತಿಪಾದಿಸುವ ಕೆಲಸವನ್ನು ಸಹ ಮಾಡಿದ್ದಾರೆ. ಅವರು ತಮ್ಮ ಬದುಕಿನ ಉತ್ತರಾರ್ಧದಲ್ಲಿ ನಿಂತು ಪೂರ್ವಾರ್ಧವನ್ನು ನಿರುಕಿಸಿದ್ದಾರೆ. ತೇಜಸ್ವಿಯವರನ್ನು ಕುರಿತ ಅವರ ಬರೆಹದಲ್ಲಿ ಸಂಬಂಧದ ಭಾವನೆಗಳಿರುವಂತೆ ಕಾಲಗರ್ಭದಲ್ಲಿ ಅಡಗಿ ಹೋಗುವ ಕೆಲವು ನಿಷ್ಠುರ ಸಾಂಸ್ಕೃತಿಕ ಸತ್ಯವನ್ನು ಹೇಳುವ ಪ್ರಯತ್ನವೂ ಇದೆ.

ನಿಜಕ್ಕೆ ನಿಷ್ಠುರಾದ ನಾಯಕರ ದನಿಯನ್ನು 'ಶುದ್ಧಾಂಗ ಸುಳ್ಳು' ಎಂದು ಕರೆದುದ್ದು ವಿಪರ್ಯಾಸ. ಅದನ್ನು ಸಾಧಾರಪೂರ್ವಕವಾಗಿ ಅಲ್ಲಗೆಳೆಯಲು ಮಾಡಿದ ಪ್ರಯತ್ನವನ್ನು ಮಾಧ್ಯಮ ವಿಫಲಗೊಳಿಸಿದೆ. ಮಾಧ್ಯಮಗಳು ಅತ್ಯಂತ ಪ್ರಬಲವಾಗಿದ್ದು ನಾಡಿನ, ದೇಶದ ಯಾವ ಮೂಲೆಯ ಸಣ್ಣ ದನಿಯನ್ನಾದರೂ ಇಡೀ ಜಗತ್ತಿಗೆ ಕೇಳಿಸಬಲ್ಲವು ಎಂದು ಬೀಗುವ ಅವು ಎಷ್ಟರ ಮಟ್ಟಿಗೆ ಸತ್ಯದ ಪರವಾಗಿವೆ ಎಂಬ ಪ್ರಶ್ನೆಯನ್ನು ಅವರ ಮುಂದಿಟ್ಟಿದ್ದಾರೆ.

ಈ ಕೃತಿಯ ಮೊದಲ ಮೂರು ಲೇಖನಗಳು ಕೃತಿನಿಷ್ಠ ವಿಮರ್ಶೆಯವು. ಮೊದಲ ಎರಡು ಲೇಖನಗಳು ಕ್ರಮವಾಗಿ ಕಲೆ, ಕಲಾವಿದರನ್ನು ಕುರಿತ ಕಾರಂತರ ಎರಡು ಕಾದಂಬರಿಗಳಾದ 'ಮೊಗ ಪಡೆದ ಮನ' ಮತ್ತು 'ಒಂಟಿದನಿ'ಗಳನ್ನು ವಿಮರ್ಶಿಸುತ್ತವೆ. ಮೊದಲನೆಯದರಲ್ಲಿ ವಿಶ್ಲೇಷಣೆಗಿಂತ ಕಥಾನಿರೂಪಣೆಯೇ ಹೆಚ್ಚು. ಎರಡನೆಯದರಲ್ಲಿ ಎರಡೂ ಸಮಸಮವಾಗಿವೆ. ಮೊದಲನೆಯದರಲ್ಲಿ ಸಿನಿಮಾ ಕುರಿತ ಕಾರಂತರ ನಿಲುವನ್ನು ವಿಮರ್ಶಿಸಲಾಗಿದೆ. ಎರಡರಲ್ಲಿಯೂ ಕುರಿತ ಕಾದಂಬರಕಾರರ ನಿಲುವನ್ನು ಕುರಿತೂ ಚರ್ಚಿಸಲಾಗಿದೆ.

ಮೂರನೆಯದು ಬೇಂದ್ರೆಯವರ 'ಕನಸಿನೊಳಗೊಂದು ಕಣಸು' ಕವಿತೆಯ ಪ್ರಾಯೋಗಿಕ ವಿಮರ್ಶೆ. ನಾಯಕರು ತಮ್ಮ ಪ್ರಾಯೋಗಿಕ ವಿಮರ್ಶೆಗಳಲ್ಲಿ ಕೆಲವು ಪದಗಳಿಗೆ ವಿಶೇಷ ಅರ್ಥವನ್ನು ನೀಡುತ್ತಾರೆ. 'ಕನಸಿನೊಳಗೊಂದು ಕಣಸು' ಕವಿತೆಯ ಪ್ರಾಯೋಗಿಕ ವಿಮರ್ಶೆಯಲ್ಲಿಯೂ 'ಗುಪ್ತರಾಗು' ಪದಕ್ಕೆ ಹಾಗೆ ಅರ್ಥ ನೀಡಿದ್ದಾರೆ. ಅದರ ವಾಚ್ಯಾರ್ಥ ಎಂದು 'ಮರೆಯಾದರು, ಈಗ ಕಾಣುತ್ತಿಲ್ಲ' ಎಂಬುದನ್ನು ಹೇಳಿ ಜೊತೆಯಲ್ಲಿ ನಾಯಕರು 'ಖ್ಯಾತಿಯ ಸಾಮ್ರಾಜ್ಯವನ್ನು ಕಟ್ಟಿ ಒಂದು ಕಾಲದಲ್ಲಿ ಮೆರೆದ ಗುಪ್ತವಂಶದವರು ಇಂದು ಮರೆಯಾಗಿ' ಹೋದಂತೆ ಆಗು ಎಂಬ ವಿಶೇಷ ಅರ್ಥವನ್ನೂ ನೀಡಿದ್ದಾರೆ.

ಈ ಪುಸ್ತಕದ ವಿಶೇಷವೇನೆಂದರೆ ಜೀವಮಾನ ಪೂರ್ತಿ ವಿಮರ್ಶೆಯನ್ನು ಬರೆದು ವಿಮರ್ಶಕರೆಂದೇ ಹೆಸರಾದ ನಾಯಕರು ಆಗಾಗ್ಗೆ ಬರೆದ ಕೆಲವು ಕವಿತೆಗಳನ್ನೂ ಒಳಗೊಂಡಿರುವುದು. ಹಿಂದೆ ಬರೆದ ಕವಿತೆಗಳು ಜೀವನದ ಸತ್ಯವನ್ನು ಶೋಧಿಸುವಂಥವಾಗಿದ್ದರೆ, ಇತ್ತೀಚೆಗೆ ಬರೆದ ಕವಿತೆಗಳು ತಮಗೆ ಗುರುಗಳೂ ಗುರುಸಮಾನರೂ ಆಪ್ತರೂ ಆದ ವ್ಯಕ್ತಿಗಳ ಕುರಿತು ಬರೆದುವಾಗಿವೆ. ಅವು ಆ ವ್ಯಕ್ತಿಗಳ ಬಗೆಗಿನ ಅವರ ಭಾವಸಂಬಂಧವನ್ನು ಅಭಿವ್ಯಕ್ತಿಸುತ್ತವೆಯಾದರೂ ಸಿಪ್ಪುರವಾದ ಸಂಗತಿಗಳನ್ನು ಸಹ ಅರುಹುತ್ತವೆ. ಅವು ಹೆಚ್ಚು ಕಡಿಮೆಯಾಗದಂತೆ ಎಚ್ಚರಿಕೆಯಲ್ಲಿ ಕಡೆದ ವ್ಯಕ್ತಿಚಿತ್ರಣಗಳು. ಅವೂ ಒಂದು ಬಗೆಯಲ್ಲಿ ವಿಮರ್ಶೆಯಿದ್ದಂತಿವೆ.

'ಸಂಜೆ, ಸೂರ್ಯ' ಕವನದಲ್ಲಿ ನಾಯಕರು ತಮಗೆ ಆಪ್ತರಾದ ವಿಷ್ಣುನಾಯ್ಕರ ಪುಸ್ತಕದ ಶೀರ್ಷಿಕೆಯಿಂದ ದಿಗಿಲುಗೊಂಡು ಸಾವಿನ ಯೋಚನೆಯನ್ನು ದೂರಮಾಡುವಂತೆ ಅವರನ್ನು ಸಮಾಧಾನಪಡಿಸುವ ಪ್ರಯತ್ನ ಮಾಡಿದ್ದಾರೆ. ಆ ದೃಷ್ಟಿಯಿಂದ ನೋಡಿದರೆ 'ಉತ್ತರಾರ್ಧ' ಎಂಬ ಶೀರ್ಷಿಕೆಯಲ್ಲಿ ಇನ್ನೂ ಅರ್ಧ ಇರುವುದರ ಸೂಚನೆ ಇದೆ. ಅದು ಸುಣ್ಣ ಬಣ್ಣ ಹೊಡೆದು ರಿಪೇರಿ ಮಾಡಿದರೆ ಇನ್ನರ್ಧ ಶತಮಾನ ಗ್ಯಾರೆಂಟಿ' ಎಂಬ, ಕೆ. ಎಸ್. ನರಸಿಂಹಸ್ವಾಮಿಯವರ 'ಮನೆಯಿಂದ ಮನೆಗೆ' ಕವಿತೆಯ ಸಾಲನ್ನು ನೆನಪಿಸುತ್ತದೆ.

'ನಾಡವರು' ಗಟ್ಟಿಯಾದ ಸಂಶೋಧನೆಯಿಂದ ಕೂಡಿದ ಲೇಖನ. ತಮ್ಮ ವಾದಕ್ಕೆ ಆಧಾರವಾಗಿ ಅವರು ನೀಡಿರುವ ದಾಖಲೆಗಳು ಸಂಶೋಧನೆಯ ಗಟ್ಟಿತನಕ್ಕೆ ಕಾರಣವಾಗಿವೆ. ಅವರ ವಿಮರ್ಶೆಗೂ ಈ ಬಗೆಯ ಸಂಶೋಧಕ ಗುಣವಿದೆ. ಅಂತೆಯೇ ಈ ಸಂಶೋಧನ ಲೇಖನಕ್ಕೆ ವಿಮರ್ಶೆಯ ಗುಣವೂ ಇದೆ. ಬೇರೊಂದು ಲೇಖನದ ವಿವೇಚನೆಯಾಗಿರುವ ಇದರಲ್ಲಿ ಅದರ ಸಾಲುಸಾಲು ಅಭಿಪ್ರಾಯಗಳನ್ನು ಉಜ್ಜಿ ತೀಡಿ ನೋಡಿರುವುದರಲ್ಲಿ ವಿಮರ್ಶೆಯ ಗುಣವಿದೆ. ವಿಮರ್ಶಕರಾಗಿ ಹೆಚ್ಚಾಗಿ ಸಾಹಿತ್ಯ ವಿಮರ್ಶೆಯನ್ನು ಮಾತ್ರ ಬರೆದ ನಾಯಕರು, ಸಾಹಿತ್ಯ ವಿಮರ್ಶೆಯನ್ನು ಮಾತ್ರ ಬರೆಯುತ್ತಿದ್ದ ಕಾಲದಲ್ಲಿ ಸಾಹಿತ್ಯೇತರ ವಿಷಯದ ಬಗೆಗೆ ಬರೆದಿರುವುದು ಗಮನಾರ್ಹ. ಇದು ನಾಡವ ಸಮುದಾಯವನ್ನು ಕುರಿತ ಲೇಖನ. ಯಾವುದೇ ಸಮುದಾಯದ ಬಗೆಗೆ ಬೇರೆಯವರು ತಪ್ಪು ಮಾಹಿತಿಯನ್ನು ನೀಡಿದಾಗ ದಾಖಲಿಸುವುದು ಸಾಂಸ್ಕೃತಿಕವಾಗಿ ಅಗತ್ಯ. ಆದರೆ ಜಾತಿ-ಮತ ಧರ್ಮ ನಿರಪೇಕ್ಷ ನಿಲುವಿನ ಲೇಖಕರು ಅದಕ್ಕೆ ಧಕ್ಕೆ ಬರದ ಹಾಗೆ ದಾಖಲಿಸುವುದು ಸವಾಲೇ ಸರಿ. ಆ ಬಗೆಗಿನ ತೀವ್ರಾಸಕ್ತಿ, ದಾಟಗಳೇ ಅವರನ್ನು ದಾರಿತಪ್ಪಿಸುವ ಸಾಧ್ಯತೆ ಹೆಚ್ಚು. ಆ ದೃಷ್ಟಿಯಿಂದ ಗಮನಿಸಬೇಕಾದ ಲೇಖನವಿದು. ಇದರಲ್ಲಿ ನಾಯಕರು ಪ್ರತಿಪಾದಿಸುವ ಕೆಲವು ಸಂಗತಿಗಳು ಅವರ ಜಾತಿ-ಮತ ಧರ್ಮ ನಿರಪೇಕ್ಷ ನಿಲುವಿಗೆ ಹೊಂದಿಕೆಯಾಗುವುದಿಲ್ಲ ಎನಿಸುತ್ತದೆ. 'ಕೆರೆಮನೆ ಶಂಭು ಹೆಗಡೆ ನೆನಪಿನ ಸುತ್ತ' ಲೇಖನದಲ್ಲಿ ನಾಯಕರು ಆಸ್ತಿಕ ಭಾವುಕತೆಗೆ ಸ್ಪಂದಿಸಿ ಬರೆದಿರುವುದು ಆಶ್ಚರ್ಯ ಮತ್ತು ವಿಶೇಷ.

● ಎಂ. ಶಂಕರ

ಗಾಂಧಾರ : ಶಂಕರ ಶೇಷ / ಎಂ. ಎಸ್. ಶಶಿಕಲಾ ಗೌಡ

(ಭುವನಸಿರಿ ಪ್ರಕಾಶನ, ಬೆಂಗಳೂರು:೨೦೧೪)

ಹಿಂದಿ ನಾಟಕಗಳಲ್ಲಿ ಸ್ವಾತಂತ್ರ್ಯದ ನಂತರ ಹೊಸತನ ಎದ್ದು ಕಾಣುತ್ತದೆ. ಹಿಂದಿಯಲ್ಲಿ ಪಾರಂಪರಿಕ ಶೈಲಿಯ ನಾಟಕಗಳ ಸಂಖ್ಯೆ ಸಾಕಷ್ಟಿದೆ. ಆದರೆ ಹೊಸ ಅಲೆಯ ನಾಟಕಗಳ ಸಂಖ್ಯೆ ಬಹಳ ಕಡಿಮೆ ಇದ್ದರೂ ಅವು ನಾಟಕ ಪ್ರೇಮಿಗಳ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಗಿವೆ. ಅವುಗಳ ರಂಗ ಪ್ರಯೋಗ ನಿರಂತರವಾಗಿ ನಡೆದಿದೆ. ಒಂದು ರೀತಿಯಿಂದ ಜಗದೀಶಚಂದ್ರ ಮಾಥುರ ಅವರ ನಾಟಕ 'ಕೋಣಾರ್ಕ' ದಿಂದ ಹೊಸ ಅಲೆ ಗುರುತಿಸಬಹುದಾಗಿದೆ. ಆ ನಂತರದಲ್ಲಿ ಧರ್ಮವೀರ ಭಾರತಿ ಅವರ 'ಅಂಧಾಯುಗ', ನಾಟಕದಿಂದ ಹೊಸ ನಾಟಕಗಳಿಗೆ ಒಂದು ನಿಶ್ಚಿತ ಸ್ವರೂಪ ದೊರಕಿತು. ಅವರು ವಸ್ತುವಿನಲ್ಲಿ ಹೊಸತನ ತಂದರೆ, ಮೋಹನ ರಾಕೇಶ ಅವರು ಶೈಲಿಯಲ್ಲಿ ಹೊಸತನ ತಂದವರು. ಅದಕ್ಕೆ ಶಂಕರ ಶೇಷ ಅವರು ವೈಚಾರಿಕ ಸ್ಪರ್ಶವನ್ನು ಕೊಟ್ಟದ್ದಲ್ಲದೇ ವಸ್ತುವಿನಲ್ಲಿಯೂ ಹೊಸತನ ತಂದರು. ಏನೇ ಇರಲಿ, ಹೊಸ ಅಲೆಯ ನಾಟಕಕಾರ ತ್ರಿಮೂರ್ತಿಗಳಾದ ಧರ್ಮವೀರ ಭಾರತಿ, ಮೋಹನ ರಾಕೇಶ ಹಾಗೂ ಶಂಕರ ಶೇಷ ಅವರು ಈ ಪರಂಪರೆಯ ಪ್ರಮುಖರು. ಆದರೆ ಶಂಕರ ಶೇಷ ಅವರ ಅಲಕ್ಷಿತರಾದದ್ದು ಒಂದು ವಿಚಿತ್ರವೆನಿಸುತ್ತದೆ. ಅಂದರೆ ಅವರಿಗೆ ಸಿಗಬೇಕಾದಷ್ಟು ಗೌರವ ಪ್ರಾಪ್ತವಾಗಲಿಲ್ಲವೆನ್ನಿಸುತ್ತದೆ.

ಶಂಕರ ಶೇಷ ಅವರ ಪ್ರಮುಖ ನಾಟಕಗಳಲ್ಲೊಂದು 'ಕೋಮಲ ಗಾಂಧಾರ' ಈ ನಾಟಕ ಪೂರ್ವಾರ್ಧ ಮತ್ತು ಉತ್ತರಾರ್ಧ ಎರಡು ಭಾಗಗಳಲ್ಲಿದೆ. ಪೂರ್ವಾರ್ಧದಲ್ಲಿ ಗಾಂಧಾರದಿಂದ ಹಸ್ತಿನಾಪುರದವರೆಗಿನ ಗಾಂಧಾರಿಯ ಪಯಣ ಹಾಗೂ ಭೀಷ್ಮನು ತನ್ನ ಅಧಿಕಾರ ಬಲದಿಂದ ಗಾಂಧಾರದ ರಾಜಕುಮಾರಿ ಗಾಂಧಾರಿಯ ವಿವಾಹವನ್ನು ಅಂಧನಾದ ಧೃತರಾಷ್ಟ್ರನೊಂದಿಗೆ ಮಾಡುತ್ತಾನೆ. ವಿವಾಹದ ಹಿಂದಿನ ದಿನದವರೆಗೂ ಗಾಂಧಾರಿಗೆ ತನ್ನ ಪತಿಯಾಗುವವ ಅಂಧನೆಂದು ತಿಳಿಯುವುದೇ ಇಲ್ಲ. ತನ್ನ ವೈವಾಹಿಕ ಜೀವನದ ಬಗ್ಗೆ ಹಲವಾರು ಸುಂದರ ಕನಸುಗಳನ್ನು ಕಟ್ಟಿಕೊಂಡ ಅವಳು ವಿವಾಹ ಮಂಟಪದಲ್ಲಿಯೇ ತನ್ನ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಿಡುತ್ತಾಳೆ. ಅವಳ ಈ ಆಚರಣೆ ವ್ಯವಸ್ಥೆಯ ವಿರುದ್ಧ ಮತ್ತು ತನಗಾದ ಅನ್ಯಾಯದ ವಿರುದ್ಧ ಪ್ರತಿಭಟನೆ. ಪಾಂಡುರಾಜನೂ ಕೂಡ ತನ್ನ ಪತ್ನಿಯರೊಂದಿಗೆ ಕಾಡಿಗೆ ಹೋಗುತ್ತಾನೆ. ಅಲ್ಲಿಯೇ ಅವನ ಮರಣವಾಗುತ್ತದೆ. ಮಾದ್ರಿ ಸಹಗಮನ ಗೈಯುತ್ತಾಳೆ. ಕುಂತಿ ತನ್ನ ಮಕ್ಕಳೊಂದಿಗೆ ಹಸ್ತಿನಾಪುರಕ್ಕೆ ಮರಳುತ್ತಾಳೆ. ಹೀಗೆ ಹೆಣ್ಣಿಗಾಗುವ ಅನ್ಯಾಯದ ಚಿತ್ರಣ ಮುಂದುವರೆಯುತ್ತದೆ.

ಉತ್ತರಾರ್ಧದಲ್ಲಿ ಗಾಂಧಾರಿ ದುರ್ಯೋಧನನಿಗೆ ಬುದ್ಧಿವಾದ ಹೇಳಲು ಧೃತರಾಷ್ಟ್ರನಿಗೆ ಬಲವಂತ ಮಾಡುತ್ತಾಳೆ. ದುರ್ಯೋಧನ ಪಾಂಡವರಿಗೆ ಸೂಜಿ ಮುರುಕಿನಷ್ಟೂ ನೆಲ ಕೊಡುವುದಿಲ್ಲವೆಂದು ಹೇಳುತ್ತಾನೆ. ಯುದ್ಧದಲ್ಲಿ ಪಾಂಡವರಿಗೆ ಜಯ. ಧೃತರಾಷ್ಟ್ರ ಗಾಂಧಾರಿ, ಕುಂತಿ ಹಾಗೂ ವಿದುರರ ವನಗಮನದೊಂದಿಗೆ ನಾಟಕ ಮುಕ್ತಾಯ.

ನಾಟಕದುದ್ದಕ್ಕೂ ಮಹಿಳೆಗಾಗುವ ಅನ್ಯಾಯದ ಧ್ವನಿ ಪ್ರತಿಧ್ವನಿಸುತ್ತಲೇ ಹೋಗುತ್ತದೆ. ಗಾಂಧಾರಿಯ ಬದುಕನ್ನು ಹೊಸ ದೃಷ್ಟಿಕೋನದಿಂದ ನೋಡಲಾಗಿದೆ. ಅವಳಿಗಾದ ಅನ್ಯಾಯ ಅಬಲೆಯರಿಗಾಗುವ ಅನ್ಯಾಯ. ಅದಕ್ಕೆ ಅವಳು ಕಣ್ಣಿಗೆ ಪಟ್ಟಿ ಕಟ್ಟಿಕೊಳ್ಳುವುದರ ಮೂಲಕ ಪ್ರತಿಭಟಿಸುತ್ತಾಳೆ. ಇಂಥ ಒಂದು ಪ್ರಮುಖ ನಾಟಕವನ್ನು ಕನ್ನಡಕ್ಕೆ ಕೊಟ್ಟ ಎಂ. ಎಸ್. ಶಶಿಕಲಾ ಗೌಡ ಅವರ ಅಭಿನಂದನಾರ್ಹರು. ಏಕೆಂದರೆ ಅವರ 'ಗಾಂಧಾರಿ' ಕೃತಿ ಅತ್ಯಂತ ಸುಂದರ ಅನುವಾದವಾಗಿದೆ.

ಇಂದು ನಾವು ಜಾಗತೀಕರಣದ ಸಂದರ್ಭದಲ್ಲಿದ್ದೇವೆ. ಇಂಥ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ಅರಿತುಕೊಳ್ಳಬೇಕಾದುದು ಬಹಳ ಮುಖ್ಯ. ಈ ಅರಿತುಕೊಳ್ಳುವ ಕೆಲಸ ವಿಚಾರ ವಿನಿಮಯದ ಮೂಲಕ ಸುಲಭವಾಗಿ ನೆರವೇರುತ್ತದೆ. ವಿಚಾರಗಳ ವಿನಿಮಯ ಆಯಾ ಪ್ರದೇಶದ ಸಾಹಿತ್ಯದ ಪರಿಚಯ ಮೂಲಕ ಆಗುತ್ತದೆಂಬುದು ಸ್ಪಷ್ಟ. ಆ ಕೆಲಸವನ್ನು ಭಾಷಾಂತರ ಮಾಡುತ್ತದೆ. Catford ಎಂಬ ವಿದ್ವಾಂಸ ಭಾಷಾಂತರದ ಬಗ್ಗೆ "The replacement to texual material in one language by equivalant texual material in another language" ಎಂದು ಹೇಳುತ್ತಾನೆ. ಅನುವಾದಕನಿಗೆ ಎರಡೂ ಭಾಷೆಗಳ ಮೇಲೆ ಸಮನಾದ ಹಿಡಿತವಿರಬೇಕಾದದ್ದು ಅವಶ್ಯ. ಎರಡೂ ಭಾಷೆಯ ಪದನುಡಿಗಳು, ಗಾದೆ ಮಾತುಗಳು, ಸೂಕ್ಷ್ಮಗಳು ಭಾಷೆಯ ಜಾಯಮಾನ ಗೊತ್ತಿರಬೇಕು. ಇಲ್ಲದಿದ್ದರೆ ಮೂಲ ಕೃತಿ ವಿಕೃತಿಯಾಗುವ ಗಂಡಾಂತರವಿರುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಶಿಕಲಾ ಗೌಡ ಅವರ 'ಗಾಂಧಾರಿ' ನಾಟಕವನ್ನು ನೋಡಿದಾಗ ಒಂದು ಸಮರ್ಥ ಅನುವಾದ ಎಂದು ಅನ್ನಿಸುತ್ತದೆ. ನಾಟಕದ ಆರಂಭದಿಂದಲೇ ಓದುಗ ಅಥವಾ ಪ್ರೇಕ್ಷಕ ಆಸ್ವಾದನೆಯಲ್ಲಿ ಮುಳುಗಿಬಿಡುತ್ತಾನೆ. ಎಲ್ಲಿಯೂ ಭಾಷೆ ಎಡವುವುದಿಲ್ಲ. ನಿರರ್ಗಳವಾಗಿ ಹರಿಯುತ್ತದೆ. ಜೊತೆಗೆ ಮೂಲ ಲೇಖಕನ ಆಶಯಕ್ಕೆ ಎಲ್ಲಿಯೂ ಧಕ್ಕೆ ಬರದಂತೆ ಅನುವಾದಕಿ ಎಚ್ಚರ ವಹಿಸಿದ್ದಾರೆ.

ಉದಾ:

"ಸಂಜಯ : ಸತ್ಯ ಕೊ ಕಬ್ ತಕ್ ಛುಪಾಕರ್ ರಖ್ ಸಕೇಂಗೆ ಹಮ್? ಅಜ ನಹೀಂ ತೊ ಕಲ್......, ಕಲ್ ನಹೀಂ ತೋ ಪರಸೋ..."

ಸಂಜಯ : ಸತ್ಯವನ್ನು ಎಲ್ಲಿಯ ವರೆಗೆ ಮುಚ್ಚಿಡಬಲ್ಲೆವು ನಾವು? ಇಂದಲ್ಲದಿದ್ದರೆ ನಾಳೆ ನಾಳೆ ಅಲ್ಲದಿದ್ದರೆ ನಾಡಿದ್ದು...."

ಭೀಷ : ಪರಂತು ಕಲ್ ಕೆಲಿಯೆ ತುಮ್ ಆಜ ಕ್ಯೂಂ ಘೋಷಣಾ ಕರ್ ರಹೇ ಹೋ?

ಭೀಷ್ಮ : ಆದರೆ ನಾಳೆಗಾಗಿ ಇಂದೇ ಏಕೆ ಘೋಷಣೆ ಮಾಡುತ್ತಿರುವೆ.

ಹೀಗೆ ನಾಟಕದುದ್ದಕ್ಕೂ ಎಲ್ಲಿಯೂ ಅನುವಾದದ ವಾಸನೆ ಬರುವುದಿಲ್ಲ. ಇದು ಮೂಲ ಕೃತಿಯೇ ಎಂಬಷ್ಟು ಸಮರ್ಥ ಅನುವಾದವಾಗಿದೆ.

ಇನ್ನೊಂದು ಉದಾಹರಣೆ :

ಧೃತರಾಷ್ಟ್ರ: ಕಭೀ ಸೋಚಾ ಹೈ ಕೀ ಐಸಾ ಕ್ಯೂಂ ಹೋ ರಹಾ ಹೈ? ಅಪನೆ ವಿಜಯ ಮೆ ವಿಶ್ವಾಸ್ ರಖನೆ ಕಾ ಅಧಿಕಾರ ದುರ್ಯೋಧನ ಕೋ ಹೈ ಗಾಂಧಾರಿ. ಉಸಕೆ ಸಾಥ, ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಕೃಪಾಚಾರ್ಯ ಇತ್ಯಾದಿ ಬಡೀ ಸೇನಾ ಹೈ.

ಧೃತರಾಷ್ಟ್ರ: ಹೀಗೇಕಾಗುತ್ತಿದೆ ಎಂದು ಎಂದಾದರೂ ಯೋಚಿಸಿದ್ದೀಯೇನು? ತನ್ನ ಜಯದಲ್ಲಿ ವಿಶ್ವಾಸವನ್ನಿಡುವ ಅಧಿಕಾರವು ದುರ್ಯೋಧನನಿಗಿದೆ ಗಾಂಧಾರಿ. ಅವನ ಜೊತೆ ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಕೃಪಾಚಾರ್ಯಾದಿಯಾಗಿ ದೊಡ್ಡ ಸೇನಾ ಪಡೆಯಿದೆ.

ಇಂಗ್ಲಿಷಿನಲ್ಲಿ ಒಂದು ಗಾದೆ ಇದೆ. "ಭಾಷಾಂತರ ಒಂದು ಹೆಣ್ಣಿನಂತೆ, ಸುಂದರವಾಗಿದ್ದರೆ ನಿಷ್ಠಾವಂತೆಯಾಗಿರುವುದಿಲ್ಲ, ನಿಷ್ಠಾವಂತೆಯಾಗಿದ್ದರೆ ಸುಂದರವಾಗಿರುವುದಿಲ್ಲ" ಎಂದು. ಆದರೆ ಶಶಿಕಲಾ ಅವರ 'ಗಾಂಧಾರಿ' ಸುಂದರ ಅನುವಾದವೂ ಹೌದು, ಮೂಲ ಕೃತಿಗೆ ನಿಷ್ಠವಾಗಿಯೂ ಇದೆ. ಇವರಿಂದ ಇನ್ನೂ ಶ್ರೇಷ್ಠ ಅನುವಾದಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರ ನಿರೀಕ್ಷಿಸಬಹುದು.

• ಧರಣೇಂದ್ರ ಕುರಕುರಿ

ದಿನಚರಿಯ ಕಡೇ ಪುಟದಿಂದ : ಜಯಶ್ರೀ ಕಾಸರವಳ್ಳಿ

(ಮನೋಹರ ಗ್ರಂಥ ಮಾಲೆ, ಧಾರವಾಡ; ೨೦೧೪)

ನವೋತ್ತರದ ಗಮನಾರ್ಹ ಸಂಗತಿಯೆಂದರೆ ಮೆಲುದನಿ, ಗಟ್ಟಿದನಿಯ ಲೇಖಕಿಯರ ಕಥೆಗಳು. ಮೊದಲನೆಯ ರೀತಿಗೆ ಜಯಶ್ರೀ ಕಾಸರವಳ್ಳಿಯವರ ಕಥೆಗಳೂ ಎರಡನೆಯ ಮಾದರಿಗೆ ಅನುಸೂಯಾ ಕಾಂಬಳೆಯಂತವರ ಕಥೆಗಳೂ ನಿದರ್ಶನವೆನ್ನಬಹುದು. ಸುಶಿಕ್ಷಿತಳಾದ, ಹೊಸ ಮಣ್ಣಿನಲ್ಲಿ ಬೇರೂರಲು ತವಕಿಸುವ ನಾಯಕಿಯರೂ, ಸ್ವವಿಮರ್ಶೆ ಮಾಡಿಕೊಂಡು, ಕ್ರಾಂತಿಕಾರಕ ನಿರ್ಧಾರಗಳನ್ನು ಕೈಗೊಳ್ಳುವ ನಾಯಕಿಯರೂ ಈ ಕಥಾ ಪ್ರಪಂಚದಲ್ಲಿದ್ದಾರೆ. ಜಯಶ್ರೀ ಕಾಸರವಳ್ಳಿಯವರ 'ದಿನಚರಿಯ ಕಡೇ ಪುಟದಿಂದ...' ಸಂವೇದನಾ ಶೀಲೆಯಾದ, ಹಳವಂಡದಲ್ಲಿರುವ, ಒಮ್ಮೊಮ್ಮೆ ತನ್ನನ್ನೇ ತಮಾಷೆ ಮಾಡಿಕೊಳ್ಳುವ, ತುಂಬಿಯೂ ತುಳುಕದ ಕಂಗಳಿಂದ ಪ್ರಕೃತಿಯನ್ನು ಪರಿಸರವನ್ನು ಅವಲೋಕಿಸುವ ನಾಯಕಿಯನ್ನು ಕಣ್ಮುಂದೆ ನಿಲ್ಲಿಸುತ್ತದೆ.

ಲೇಖಕಿ ಒಮ್ಮೆ ನಿರೂಪಕಿಯಾಗಿ, ಮತ್ತೊಮ್ಮೆ ಸಾಕ್ಷಿಯಾಗಿ, ಮಗದೊಮ್ಮೆ ಪಾತ್ರವೇ ಆಗಿ ಓದುಗರನ್ನು ಸ್ಪಂದಿಸುತ್ತಾರೆ. ಆದರೆ ಘೋಷಿತ ಸ್ತ್ರೀವಾದಿ ಎಂ. ಎಸ್. ಆಶಾದೇವಿ ಯವರು 'ಮುನ್ನುಡಿ'ಯಲ್ಲಿ ಹೇಳಿದಂತೆ 'ಬದುಕು ಮತ್ತು ಮನುಷ್ಯ ಸಂಬಂಧಗಳಲ್ಲಿನ ಆಪ್ತತೆ,

ಸಮೀಕರಣಗಳು ಜಯಶ್ರೀ ಕಥೆಗಳ ಕಾಳಜಿ ಎನ್ನಬಹುದು.' ಇತ್ತೀಚೆಗೆ ಮಲೆಯಾಳಂ ಲೇಖಕಿ 'ರಾಜಲಕ್ಷ್ಮಿ'ಯವರ ಕಥೆಗಳನ್ನೋದುತ್ತಿದ್ದೆ. ಅವರಂತೆ ಇವರೂ ಹೆಣ್ಣಿನದ್ದೇ ಅನುಭವ, ಅಭಿವ್ಯಕ್ತಿಗಳಿಗೆ ಒತ್ತು ಕೊಟ್ಟಿದ್ದಾರೆ.

ಸಂಕಲನದ ಮೊದಲ ಕಥೆಯಾದ 'ಕೊಪ್ಪರಿಗೆ ಹೊತ್ತವರು' ನ ಅಮಾಯಕ 'ಸೀನು ಕಕ್ಕ' ಅವನ ಕುರಿತ ಅಂತಃಕರಣ 'ಅಪ್ಪ' ಮಾತ್ರ ಅವನನ್ನು ಅನುಮಾನಿಸುವುದು, ಮುಗ್ಧವಾದ ಆತ ಹರಿದ ಪತ್ರ. ಜೈಲಿಗೆ ಹೋಗಿ ಬಂದಾಗಲೂ ಹೀಯಾಳಿಸುವುದು ಇವೆಲ್ಲ 'ರಾಜಲಕ್ಷ್ಮಿ'ಯವರ ಮತ್ತಾಯಿಯನ್ನು ನೆನಪಿಸುತ್ತವೆ. ಅಮ್ಮ ಸೀನುಕಕ್ಕನನ್ನು ವಹಿಸಿಕೊಂಡು ಹೇಳುವ ಈ ಮಾತು ಎಷ್ಟು ಸಂತೋಷ ವಿಸ್ಮಯಗಳನ್ನುಂಟು ಮಾಡುತ್ತದೆ.

'ಅಂವಾ ಯಂತಾ ಪ್ರಾಣಿಯಾ? ನಮ್ಮಂಗೆ ಮನುಷ್ಯ ಅಲ್ವಾ?' ಅಲ್ಲದೆ ಬಾಲ್ಯದಲ್ಲೇ ಅಪ್ಪನನ್ನು ವಿಮರ್ಶಿಸಬಲ್ಲವರಾದ 'ಬಾಲೆ'ಯೂ ಗಮನ ಸೆಳೆಯುತ್ತಾಳೆ. ಸತ್ಯವನ್ನು ತೂಗಿ ನೋಡುವ ಅವರ 'ಋಜುತ್ವ' ಮನಸ್ಸು ತಟ್ಟುತ್ತದೆ. ವಿಶೇಷವೆಂದರೆ, ಎಲ್ಲೂ ಅತಿಶಯವಲ್ಲದಂತೆ ಬಳಕೆಗೊಂಡ ಹವ್ಯಕ ಭಾಷೆ! "ಅಯ್ಯಾರಿಗೆಲ್ಲಾ ಗೊತ್ತುಂಟು ಬಾಯಲ್ಲಿ ಕಡುಬು ಹಾಕ್ಕೊಂಡು ಅದಾರ!" ಹೀಗೆ ಪಾಡಿಕೆ ರೂಪಕಗಳ ಬಳಕೆ, ಆಕರ್ಷಕವಾಗಿದೆ. ಗುಡ್ಡದಲ್ಲಿ ಹುಗಿದಿದ್ದ ರೆನ್ನಲಾದ 'ಕೊಪ್ಪರಿಗೆ' ಯ ಸುತ್ತ ಎಲ್ಲ ಪಾತ್ರಗಳ ಲಕ್ಷ್ಯ. ಕಡೆಗೂ ಒಗಟು ಒಡೆಯುವುದಿಲ್ಲ. 'ಸೀನು ನಕ್ಕ' ಹಾಗೂ 'ಅಪ್ಪ' ಕಪ್ಪು ಬಿಳಿಯ ಪಾತ್ರ ಗಳಂತೆ ಅಚ್ಚಳಿಯದೆ ಮನದಲ್ಲಿಯೇ ಉಳಿಯುತ್ತಾರೆ.

ಜಯಶ್ರೀಯವರ ಕಥೆಗಳು ಹರಟೆಯ ವ್ಯಕ್ತಿ ಚಿತ್ರದ ಆಕೃತಿಯಲ್ಲೂ ಕಾಣಬಲ್ಲುದೆಂಬದಕ್ಕೆ, 'ಅಂಬುಜಾ ಕಂಡದ್ದೇನು?' ಹಾಗೂ 'ಒಬ್ಬ ಕೋಲೆಗಾರರನ್ನು ನೋಡುವುದು ಹೇಗೆ? ನಿದರ್ಶನಗಳು, ನಾಟಕೀಯವಾಗಿ, ವಿನೋದ ಪೂರ್ಣ ಶೈಲಿಯಲ್ಲಿ ಅವು ಪ್ರಸ್ತುತ ಗೊಳ್ಳುತ್ತವೆ. ಕೌತುಕ ಪೂರ್ಣವಾಗಿಯೂ ತೋರುತ್ತವೆ. ಆದರೆ 'ದಿನಚರಿಯ ಕಡೇ ಪುಟ ದಿಂದ ದಂಥ ಕತೆಗಳು ಅವರ ಜೀವನ ದರ್ಶನವನ್ನೂ ತಾತ್ವಿಕತೆಯನ್ನೂ ಗಂಭೀರವಾಗಿ ಮಂಡಿಸುತ್ತವೆ. ಒಂದು ಹೆಣ್ಣಿನ ಮರಣಾನಂತರ, ಆಸೆಪಟ್ಟ ಪಾಡೆಲ್ಲವೂ 'ಫ್ಲ್ಯಾಶ್ ಬ್ಯಾಕ್'ನಲ್ಲಿ ಮೂಡಿ ಮನಸ್ಸುಗಳನ್ನು ವಿಷಾದದಲ್ಲಿ ಅದ್ದುತ್ತದೆ. ಅಗಾಗ್ಗೆ ಬಂದು ಬಿರುಗಾಳಿಯಂತೆ ಹೋಗಿ ಬಿಡುತ್ತಿದ್ದ ತಂದೆ, ತಾಯಿಯ ಕೊರಗು, ಎಲ್ಲಕ್ಕೂ ಸಾಕ್ಷಿಯಾದ ಇಬ್ಬರ ಮಕ್ಕಳು ಆಕೆಗೆ ಸಾವಿನಲ್ಲಾದರೂ ಶಾಂತಿ ಸಿಗಲಿ ಎಂದು ಹಾರೈಸುವ ಪರಿ ಇವು ಹೆಣ್ಣಿನ ಅಭದ್ರತೆಯನ್ನು ತಲ್ಲಣಿಸುವಂತೆ ತೆರೆದಿಟ್ಟ ರೀತಿ ಅನನ್ಯವಾಗಿದೆ.

ಒಟ್ಟಾರೆ, ಇವರ ಎಲ್ಲ ಕಥೆಗಳ ಹಿಂದೆ ಹೆಂಗರುಳಿದೆ. ಹೆಣ್ಣಿನ ಕಂಗಳಿವೆ. ಸಂವೇದನಾಶೀಲ ಮನಸ್ಸೊಂದರ ಸ್ಪರ್ಶವಿದೆ. ಇವರ ಮನಸ್ಸು, ಕಾಳಜಿ, ಸ್ವಗತದಾಚೆಗೂ ಚಾಚಿಕೊಂಡಿವೆ.

ಅನೇಕ ಕಥೆಗಳ ಭೂಮಿಕೆಯು ಮದ್ರಾಸ್ ಆದರೂ ಮಲೆನಾಡಿನ ಸೊಗಡು ಮೆರುಗು ನೀಡಿದೆ. ಹೆಣ್ಣು ಹೆಣ್ಣನ್ನು ಗೌರವಿಸುವ ಅಂಶ ಪ್ಲಸ್ ಪಾಯಿಂಟ್.

• ಕಮಲಾ ಹೆಮ್ಮಿಗೆ

ಪರಿಸರ ಜಿಜ್ಞಾಸೆ : ಕುಶಾಲ ಬರಗೂರು

(ಅಭಿರುಚಿ ಪ್ರಕಾಶನ, ಮೈಸೂರು; ೨೦೧೨)

ನಮ್ಮಲ್ಲೊಂದು ಗಾದೆ ಇದೆ "ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು" ಅಂತ. ಪರಿಸರ ನಾಶವಾಗಿದೆ ಅಂತ ದಶಕಗಳಿಂದಲೂ ಬೊಬ್ಬೆ ಹೊಡೀತಾ ಇದ್ದರೂ ಯಾರೂ ಅದಕ್ಕೆ ಗಮನ ಕೊಡದೆ ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಪರಿಸರದಲ್ಲಿನ ಪ್ರತಿಯೊಂದು ಸಂಪನ್ಮೂಲವನ್ನೂ ಕೊಳ್ಳೆ ಹೊಡೆದ ಮೇಲೆ ಪರಿಸರ ಸಂರಕ್ಷಣೆ, ಕಾಳಜಿ ಇತ್ಯಾದಿಗಳ ಬಗ್ಗೆ ಅರಿವು ಬರ್ತಾ ಇದೆ. ಪರಿಸರ ತಜ್ಞರು ಏನು ಹೇಳುತ್ತಾರೆ, ವಿಜ್ಞಾನಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿ ಸುಮ್ಮನಾಗುವುದಲ್ಲ, ಅದನ್ನು ಅನುಸರಿಸಬೇಕು ಎನ್ನುವ ಪ್ರಜ್ಞೆ ಇನ್ನೂ ನಮ್ಮಲ್ಲಿ ಮೂಡಿ ಬಂದಿಲ್ಲ. ಇದಕ್ಕಿಂತ ಭಿನ್ನವಾಗಿ ನಮ್ಮ ಸಾಹಿತಿಗಳು ಅದರ ಬಗ್ಗೆ ಏನು ಹೇಳ್ತಾರೆ, ಏನು ದಾಖಲಾಗಿದೆ ಎನ್ನುವ ವಿಷಯವಂತೂ ಬಹಳಷ್ಟು ಜನರಿಗೆ ಗೊತ್ತೇ ಇಲ್ಲ. ಅವರಲ್ಲೂ ಹಿಂದಿನ ಸಾಹಿತ್ಯದ ಬಗ್ಗೆ, ಜನಪದ ಸಾಹಿತ್ಯದ ಬಗ್ಗೆ ಯಾರೂ ಗಮನ ಹರಿಸುವುದಿಲ್ಲ. ಈ ನಿಟ್ಟಿನಲ್ಲಿ ಕುಶಾಲ ಬರಗೂರುರವರು ತಮ್ಮ ಜಿಜ್ಞಾಸೆಯನ್ನು ಸಾರ್ವತ್ರಿಕರಣಗೊಳಿಸಿಕೊಳ್ಳುವುದಕ್ಕಾಗಿ ಮಂಡಿಸಿ ತದನಂತರ ಪ್ರಕಟಿಸಿದ 'ಪರಿಸರ ಜಿಜ್ಞಾಸೆ' ಪುಸ್ತಕವು ಕನ್ನಡ ಸಾಹಿತ್ಯದಲ್ಲಿ ಒಂದು ಅಪರೂಪದ ಗ್ರಂಥ.

ಕನ್ನಡದ ಹಿಂದಿನ ಹಾಗೂ ಇಂದಿನ ಅಮೂಲಾಗ್ರ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನೂ ಶೋಧಿಸಿ, ಸಂಶೋಧಿಸಿ, ವಿಶ್ಲೇಷಿಸಿ, ಮಂಡಿಸಿ ನಿರೂಪಿಸುವುದು ಒಂದು ಸಾಹಸದ ಕೆಲಸವೇ ಸರಿ. ಈ ಕೃತಿಯು ೩೭೨ ಪುಟಗಳಷ್ಟಿದ್ದು ಜೊತೆಗೆ ೨೩ ಪುಟಗಳಷ್ಟು ಸುದೀರ್ಘ ಪರಾಮರ್ಶನ ಸಾಹಿತ್ಯ ಕೃತಿಗಳ ವಿವರಗಳನ್ನು ನೀಡುತ್ತದೆ. ಅವುಗಳಲ್ಲಿ ಪ್ರಾಚೀನ (ಧರ್ಮ, ಪುರಾಣ) ಕೃತಿಗಳು, ಸೃಜನಶೀಲ ಮತ್ತು ವಿಮರ್ಶಾ ಕೃತಿಗಳು, ಸಂಪಾದನ ಕೃತಿಗಳು, ವೈಚಾರಿಕ ಕೃತಿಗಳು, ವೈಚಾರಿಕ ಮತ್ತು ವೈಜ್ಞಾನಿಕ ಕೃತಿಗಳು, ಅನುವಾದಿತ ಕೃತಿಗಳು, ವಿಶ್ವಕೋಶ ಮತ್ತು ಅರ್ಥಕೋಶಗಳು, ಪತ್ರಿಕೆ ಮತ್ತು ನಿಯತಕಾಲಿಕೆಗಳು ಹಾಗೂ ವಿಶೇಷ ಪದಕೋಶಗಳ ಬಗ್ಗೆ ಉತ್ತಮ ವಿವರಗಳಿವೆ.

ಈ ಸೃಷ್ಟಿಯ ಬಗ್ಗೆ ಹಾಗೂ ಇದರಲ್ಲಿನ ನಿಗೂಢಗಳ ಬಗ್ಗೆ ಆದಿ ಮಾನವರಿಂದ ಹಿಡಿದು ಎಲ್ಲಾ ಧರ್ಮ ಪಂಥದವರೂ ತಮ್ಮದೇ ಆದ ವಿಚಾರ ಪರಂಪರೆ ಹಾಗೂ ನಂಬಿಕೆಗಳನ್ನು ಬಳಸಿಕೊಂಡು ಉಳಿಸಿಕೊಂಡು ಬಂದಿದ್ದಾರೆ. ಕ್ರೈಸ್ತ ಧರ್ಮ, ಮುಸ್ಲಿಂ ಧರ್ಮ, ಗ್ರೀಕ್ ಧರ್ಮ, ಐಗುಪ್ತ ಧರ್ಮ, ಚೈನಾದ ಧರ್ಮ, ಮಾಯಾ, ಇನ್ಕಾ ಆದಿವಾಸಿ, ಬುಡಕಟ್ಟುಗಳು ಹೀಗೆ ಎಲ್ಲರೂ ತಮ್ಮದೇ ಆದ ಕಲ್ಪನಾಲಹರಿಯಲ್ಲಿ ವಿಹರಿಸಿದ್ದಾರೆ. ಯಾರು ಸರಿ, ಯಾರು ತಪ್ಪು ಎಂದು ಹೇಳುವ ಕೆಲಸವನ್ನು ಮಾಡದೆ ಅತ್ಯಂತ ನಾಜೂಕಾಗಿ ಈ ಎಲ್ಲಾ ವಿಚಾರಗಳನ್ನು ಒಂದೊಂದಾಗಿ ತಮ್ಮ ಮಹಾಪ್ರಬಂಧದಲ್ಲಿ ಓದುಗನ ಮುಂದಿಡುತ್ತಾ ಹೋಗುತ್ತಾರೆ. ಎಲ್ಲ ಕಡೆಯೂ ವಿಶ್ಲೇಷಣಾತ್ಮಕವಾಗಿ ಮಂಡಿಸುತ್ತಾರೆಯೇ ವಿನಹಃ ಇತ್ಯರ್ಥಕವಾಗಿ ಎಲ್ಲಿಯೂ ಚರ್ಚಿಸುವುದಿಲ್ಲ. ಕೆಲವು ವಿಷಯಗಳಲ್ಲಿ ಯಾರೂ ಸಹ ಅಂದರೆ ವಿಜ್ಞಾನಿಗಳೂ ಸಹ

ಅದರಲ್ಲೂ ಭೂ ವಿಜ್ಞಾನಿಗಳೂ ಸಹ 'ಇದಮಿತ್ಥಂ' ಎಂದು ಹೇಳುವುದು ಕಷ್ಟವಾಗುತ್ತದೆ. ಭೂ ವೈಜ್ಞಾನಿಕ ಅಂಶಗಳನ್ನು ಅತ್ಯಂತ ಕ್ಲುಪ್ತವಾಗಿ ಸಂಗ್ರಹಿಸಿ ಯಥಾವತ್ತಾಗಿ ಓದುಗರ ಮುಂದಿಟ್ಟಿದ್ದಾರೆ.

ಭೂಮಿಯ ಪರಿಸರದ ಬಗ್ಗೆ ಎಲ್ಲರಿಗೂ ಅಪಾರವಾದ ಗೌರವಿದ್ದರೂ ಅದಕ್ಕೆ ಬೇಕಾದ ಕಾಳಜಿ ಮಾತ್ರ ಕೆಲವರಲ್ಲಿ ಕಂಡು ಬರುತ್ತದೆ. ಇಂಥ ಕಾಳಜಿಯು ಸಾಹಿತ್ಯ ಪ್ರಕಾರಗಳಲ್ಲಿ ಯಾವ ರೀತಿ ಬೆಳೆದು ಬಂದಿದೆಯೆಂಬ ಈ ಅಧ್ಯಯನವು ನಮಗೆ ಗೊತ್ತಿಲ್ಲದ ಅನೇಕ ವಿಷಯಗಳನ್ನು ತಿಳಿಸುತ್ತಾ ಹೋಗುತ್ತದೆ. ಅದು ಜಾನಪದವಿರಬಹುದು, ಪುರಾಣೇತಿಹಾಸ ಇರಬಹುದು, ಕುವೆಂಪುರವರ ಕಾವ್ಯ ಕಾದಂಬರಿಗಳಿರಬಹುದು, ಬುಡಕಟ್ಟು ಜನರ ಪ್ರಾಣಿಪಕ್ಷಿಗಳ ಒಡನಾಟವಿರಬಹುದು, ಬುದ್ಧ ಪರಂಪರೆಯಿರಬಹುದು ಅಥವಾ ಇಂದಿನ ಆಧುನಿಕ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರದ ಮೇಲಿನ ಹಾನಿಕಾರಕ ದಾಳಿಯಿರಬಹುದು - ಇವೆಲ್ಲದರ ಬಗ್ಗೆ ಅತ್ಯಂತ ಕುತೂಹಲಕಾರಿಯಾಗಿ ತಮ್ಮ ನಿರೂಪಣೆಯನ್ನು ಮಂಡಿಸಿದ್ದಾರೆ.

ಇದರಲ್ಲಿ ಮಂಟೆಸ್ವಾಮಿಯ ಕಥೆಯಿಂದ ಆಯ್ದ ಭಾಗವಿದೆ, ಮರುಳ ಮುನಿಯನ ಕಗ್ಗದ ಕವನವಿದೆ, ಭೂಮಿಗೀತೆಯ ಉಲ್ಲೇಖವಿದೆ, ಬೇಂದ್ರೆಯವರ 'ಪ್ರಾರ್ಥನೆ' ಯಿದೆ. ಕೆ. ಎಸ್. ನ.ರವರ 'ಕುಂಕುಮ ಭೂಮಿ'ಯಿದೆ, ಹೆಚ್. ಎಲ್. ನಾಗೇಗೌಡರು, ಸಿದ್ಧಲಿಂಗಯ್ಯ, ದೇವನೂರು, ಅರವಿಂದ ಮಾಲಗತ್ತಿ, ಬರಗೂರು ರಾಮಚಂದ್ರಪ್ಪ, ವಂದನಾ ಶಿವ, ಮೇಧಾ ಪಾಟ್ಕರ್, ಬಹುಗುಣ, ಅಣ್ಣಾ ಹಜಾರೆ, ಸಾಲು ಮರದ ತಿಮ್ಮಕ್ಕ, ಹಳೆಯ ಹಾಗೂ ಹೊಸ ತಲೆಮಾರಿನ ಲೇಖಕರ ಬರಹಗಳ ಮತ್ತು ಸಮಾಜ ಸೇವಕರ ನೋಟವಿದೆ. ಅವರ ದೃಷ್ಟಿ ಕೋನವಿದೆ. ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ಪುಸ್ತಕದ ಮೂಲಕ ಓದುಗನು ಪರಿಸರದ ಬಗೆಗಿನ ಸಾಹಿತ್ಯದೊಳಗಿನ ಜಿಜ್ಞಾಸೆಯ ಒಂದು ಸ್ಥೂಲನೋಟವನ್ನು ಪಡೆಯಬಹುದು.

ಭೂವಿಜ್ಞಾನಿಯಾಗಿ ನನಗೂ ಸಹ ಈ ಪ್ರಕೃತಿಯ ಮೇಲಿನ ಹಾಗೂ ಒಳಗಿನ ಪ್ರಕ್ರಿಯೆಗಳ ಬಗ್ಗೆ ಸಾಕಷ್ಟು ಕುತೂಹಲವಿದೆ. ಆದರೆ ಕವಿಯಾಗಿ ಡಿ.ವಿ.ಜಿ.ಯವರು ಕಂಡ ಪ್ರಕೃತಿದರ್ಶನವು ಅವರ ಈ ಪದ್ಯದ ಮೂಲಕ ಅವರನ್ನು ದಾರ್ಶನಿಕರನ್ನಾಗಿ ಮಾಡಿದೆ (ಇದರ ಉಲ್ಲೇಖ ಈ ಪುಸ್ತಕದಲ್ಲಿದೆ)

'ಹುಳು ಹುಟ್ಟಿ ಸಾಯುತಿರೆ, ನೆಲ ಸವೆದು ಕರಗುತಿರೆ
ಕಡಲೊಳೆತ್ತಲೊ ಹೊಸ ದ್ವೀಪವೇಳುವುದು
ಕಳೆಯುತೊಂದಿರಲಿಲ್ಲ, ಬೆಳೆವುದಿನ್ನೊಂದೆಲ್ಲೊ
ಅಳಿವಿಲ್ಲ ವಿಶ್ವಕ್ಕೆ ಮಂಕು ತಿಮ್ಮ।

ಭೂ ಚರಿತ್ರೆಯಲ್ಲಿ ಕಂಡುಬರುವ ಕ್ರಮೇಣವಾದ, ಸ್ವಾಭಾವಿಕವಾದ, ಸಹಜವಾದ ಭೂ ಬದಲಾವಣೆಗಳನ್ನು ನಾವು ಸ್ವೀಕರಿಸಲೇಬೇಕು. ಆದರೆ ಇದಕ್ಕೆ ಪ್ರತಿಕೂಲವಾದ ಮಾನವ ಹಸ್ತಕ್ಷೇಪಿತ ಬದಲಾವಣೆಗಳನ್ನು ನಾವು ತಿರಸ್ಕರಿಸಬೇಕು. ಇದು ಈ ಪುಸ್ತಕದ ಒಟ್ಟಾರೆ ಆಶಯವಾಗಿ ಹೊರಹೊಮ್ಮಿದೆ.

● ಹೆಚ್. ಎಸ್. ಎಂ. ಪ್ರಕಾಶ

ಹೊನ್ನಬೀಜ ನುಂಗುವ ಹುನ್ನಾರ*

● ಚೇತನ ಸೊಲಗಿ

ಹುನ್ನಾರ ನಡೆಸಿವೆ
ಹೊನ್ನ ಕೊಡುವ ಬೀಜಗಳು
ಬಿತ್ತ ಹೊರಟ ಬಡ ರೈತಗೆ
'ಬೆತ್ತ ಮಾಡಿ' ಹೊಡಿಯುತ್ತಿವೆ
ಸುಂದರ ಮೋಡಗಳು
ಆಧುನಿಕ ಮೋಡಗಳು
ಕಾರ್ಬನ್ ಶೇಡಿನ ಒಳಹರಿವ ನುಂಗಿ

ಮಬ್ಬು ಹಿಡಿದ ವಾತಾವರಣಕ್ಕೆ
ಹುಬ್ಬು ಎತ್ತಿ ನೋಡುವ ರೈತಗೆ
ಕಂಡೂ ಕಾಣದಂತೆ ಜಗದೊಡೆಯನೆಂದುಕೊಂಡವ
ನೀರು ಕುಡಿದು ದೇಗ ಬಿಡುತ್ತಾನೆ
ಕೂಳಿಲ್ಲದೇ ಬೆಂದು
ಎದೆಗವಚಿಟ್ಟ ಎಲುಬಿನ ಚೀಲದಂತಾದ
ಅನ್ನದಾತನ ಪರಿಯ ಕಂಡು

ಸಂತೈಸ ಹೊರಟ
ಸುಳ್ಳರು ಯಾರೋ ಗೊತ್ತಿಲ್ಲ
ಮುನಿಸಿ ಮರೆಯಾಗಿ
ಸಾಗುವ ಮೋಡಗಳ ತಡೆದು
ಕಾಪ್ಟರ್ ಹತ್ತಿ ಕರಗಿಸ ಹೊರಟಿದ್ದಾರೆ
ಭುವಿಯಂಗಳದಲ್ಲೊಂದು ಬೀಜ ಬಿತ್ತಲೊಲ್ಲದ ಭೂಪರು!

ಬೇಸತ್ತ ಒಡಲವ್ವ
ಆಗಸದತ್ತ ಕಣ್ಣರಳಿಸಿ ಹೇಳುತ್ತಾಳೆ
ಹನಿಯನೂ ಚೆಲ್ಲಬೇಡ ಕೆಳಗೆ
ನನ್ನೊಡಲು ತಂಪಾಗದಿದ್ದರೂ ತಕರಾರಿಲ್ಲ
ಕಬ್ಬಿಣವ ಬಗಿಯಲು
ಹಮಾಲನಾಗಿ ಹೋಗಬಯಸುವ
ಹಾಳು ಮನುಜನಿಗೆ...

*ಸಾಫ್ಟ್ ಜಗತ್ತಿನಲ್ಲಿ (೨೦೧೪) ಸಂಕಲನದಿಂದ

೨೦೧೪ರ ಪ್ರಕಟನೆಗಳು

೨೮. **ಕನಕದಾಸ ಮತ್ತು ಅಂಬೇಡ್ಕರ್** : ತೌಲನಿಕ ಅಧ್ಯಯನ
ಬಹುಜನ ಮಾಧ್ಯಮ ಕೇಂದ್ರ, ಮೈಸೂರು - ೨೨ ರೂ. ೫೦೦

೨೯. **ಪುಣ್ಯಕೋಟಿ – ಸಮಗ್ರ ಸಾಹಿತ್ಯ** : ಎಸ್. ಕೃಷ್ಣ ಸ್ವರ್ಣಸಂದ್ರ
ತಾರಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ಮೈಸೂರು. ರೂ. ೩೫೦

೩೦. **ಸುವರ್ಣ ವಚನಗಳು** : ಶಿಮಂತೂರು ಚಂದ್ರಹಾಸ ಸುವರ್ಣ
ಪೂಜಾ ಪ್ರಕಾಶನ, ಮುಂಬಯಿ - ೯೧ ರೂ. ೧೦೦

೩೧. **ಮಿಸೆಸ್ ಅಂಬೇಡ್ಕರ್ (ನಾಟಕ)** : ಸಿದ್ರಾಮ ಕಾರಣಿಕ
ಸಂಸ್ಕೃತಿ ಪ್ರಕಾಶನ, ಬಳ್ಳಾರಿ - ೪ ರೂ. ೧೦೦

೩೨. **ಹಸಬ (ಕಾವ್ಯ)** : ವಿನಯಾ
ಅಭಿನವ ಪ್ರಕಾಶನ, ಬೆಂಗಳೂರು- ೪೦ ರೂ. ೯೦

•

ಮೇಘನಾ ಪ್ರಕಾಶನ, ಕೊಪ್ಪಳ

೩೩. **ಸಂಸಾರ ಸಗ್ಗ** : ಸಿದ್ಧಲಿಂಗಪ್ಪ ಕೊಟ್ನೆಕಲ್ ರೂ. ೧೦೦

೩೪. **ಮಾನ್ವಿಯ ಮಹನೀಯರು** : ಸಿದ್ಧಲಿಂಗಪ್ಪ ಕೊಟ್ನೆಕಲ್ ರೂ. ೨೦೦

•

೩೫. **ಕಿರುನುಡಿಯ ಕಿರಣಗಳು** : ಶಶಿಧರ ಪಾಟೀಲ
ಐಶ್ವರ್ಯ, ಪ್ರಗತಿ ಕಾಲನಿ, ಸಪ್ತಾಪುರ, ಧಾರವಾಡ-೧ ರೂ. ೪೦

೩೬. **ಪ್ರಗತಿ ಕಂದನ ಆಕ್ರಂದನ** : ಸಂ. ಮೊಗೇರಿ ಶೇಖರ ದೇವಾಡಿಗ
ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ (ಉ.ಕ.) ರೂ. ೧೧೦

೩೭. **ಜಾಗೃತಿ (ನಾಟಕ)** : ಅನಂತರಾಯಪ್ಪ
ಅಶೋಕ ಪಬ್ಲಿಕೇಷನ್, ಬೆಂಗಳೂರು - ೭೨ ರೂ. ೧೫೦

೩೮. **ಹತ್ತಾರು ಮುಖ (ಕಾವ್ಯ)** : ನೇ. ಭ. ರಾಮಲಿಂಗಶೆಟ್ಟಿ
ಗಂಗಾ ಪ್ರಕಾಶನ, (ಕರವೇ) ಬೆಂಗಳೂರು - ೭೨ ರೂ. ೮೦

೩೯. **ನಡೆ ನೀ ಮುಂದೆ (ಕಾವ್ಯ)** : ಶಾರದಾ ಎ. ಅಂಚನ್
ಪೂಜಾ ಪ್ರಕಾಶನ, ಮುಂಬಯಿ-೯೧ ರೂ. ೧೨೫

೪೦. **ಬೌದ್ಧ ಧರ್ಮದ ಮಹತ್ವ** : ಸಂ. ಅಪ್ಪಗೆರೆ ತಿಮ್ಮರಾಜು
ಗಂಗೋತ್ರಿ ಮಕ್ಕಳ ರಂಗಶಾಲೆ, ಬೆಂಗಳೂರು - ೧೦ ರೂ. ೭೦

೪೧. **ನೀರ್ ತೊಟ್ಟಿಲು (ಕಾವ್ಯ)** : ಮಾರ್ಷಲ್ ಶರಾಂ
ನೇಕಾರ ಪ್ರಕಾಶನ, ಸೊರಬ (ಶಿವಮೊಗ್ಗ) ರೂ. ೯೦

೪೨. **ಡಾ. ವಿಕ್ರಮ ವಿಸಾಜಿ– ಬದುಕು ಬರಹ** : ಸಂ. ಆದರ್ಶ ವಿಸಾಜಿ
ಬಸವ ಧರ್ಮ ಪ್ರಚಾರ ಸಂಸ್ಥೆ, ಭಾಲ್ಕಿ (ಬೀದರ) ರೂ. ೯೦

೪೩. **ಕೋಲಿಂ ಎಂಬ ಕೌತುಕ** : ಸಂ. ಜೆ. ಕೆ. ರಮೇಶ
ಕೋಣಂದೂರು ಲಿಂಗಪ್ಪ ಅಭಿನಂದನ ಸಮಿತಿ, ಶಿವಮೊಗ್ಗ ರೂ. ೩೦೦

೪೪. **ಗೆಜ್ಜೆನುಡದಾವ (ತ್ರಿಪದಿ ಸಂಗ್ರಹ)** : ಬಾಲಕೃಷ್ಣ ಜಂಬಗಿ
ಆದಿಗಂಗಾ ಪ್ರಕಾಶನ, ಹಾರೂಗೇರಿ (ಬೆಳಗಾವಿ) ರೂ. ೧೦೦

೪೫. **ಪ್ರಜ್ಞೆ, ಶೀಲ, ಕರುಣೆಯ ಗಜಲ್‌ಗಳು** : ಸಂ. ಜಯದೇವಿ ಗಾಯಕವಾಡ
ಶಕ್ತಿ ಪ್ರಿಂಟರ್ಸ್ ಆ್ಯಂಡ್ ಪಬ್ಲಿಕೇಷನ್, ಬೆಂಗಳೂರು ರೂ. ೭೦

೪೬. **ಸಂಗೀತ ಸಮ್ಮೋಹಿನಿ (ಕಾದಂಬರಿ)** : ಹ. ಶಿ. ಭೈರನಟ್ಟಿ
ಭಾಗೀರಥಿ ನಿಲಯ, ವಿನಾಯಕನಗರ, ಧಾರವಾಡ-೧ ರೂ. ೮೦

೪೭. **ಕಲಾನ್ವೇಷಣೆ (ದೃಶ್ಯ ಕಲೆ)** : ಬಸವರಾಜ ಎಸ್. ಕಲೆಗಾರ
ರೇಖಾ ಚಿತ್ರ ಪ್ರಕಾಶನ, ಕೊಂಕಲ್ (ಯಾದಗಿರಿ) ರೂ. ೯೦

೪೮. **ಬೀಚಿ ಬುಲ್ಲೆಟಿನ್** : ಬಿ. ಎಸ್. ಕೇಶವ ರಾವ್
ಬೀಚಿ ಪ್ರಕಾಶನ, ಬೆಂಗಳೂರು-೬೨ ರೂ. ೨೦೦

೪೯. **ಕಾಡ್ತಾವ ಮನದಾಗ (ಕಾವ್ಯ)** : ಜಿ. ಕಲೀಂ ಬಾಷ
ಸಮೀರ ಪ್ರಕಾಶನ, ಹರಿಹರ ರೂ. ೬೦

೫೦. **ಬೆಸುಗೆ (ಕಾವ್ಯ)** : ಸಂ. ಡಿ.ಎಂ.ಬಡಿಗೇರ ಮುಂ.
ಬೆರಗು ಪ್ರಕಾಶನ, ಕೊಪ್ಪಳ ರೂ. ೧೦೦

೫೧. **ಮರವನಪ್ಪಿದ ಬಳ್ಳಿ (ಕಾವ್ಯ)** : ಜಿ. ಕೆ. ರವೀಂದ್ರ ಕುಮಾರ
ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ರೂ. ೭೫

೫೨. **ಭಿತ್ತಿ ಚಿತ್ರ (ಕಾವ್ಯ)** : ರಮ್ಯ ವರ್ಷಿಣಿ ವಿ. ಎಸ್.
ಸಿರಿವರ ಪ್ರಕಾಶನ, ಬೆಂಗಳೂರು-೨೧ ರೂ. ೭೦

•

ಶರ್ಮಿಳಾ ಪ್ರಕಾಶನ : ಕನಕಗಿರಿ (ಕೊಪ್ಪಳ)

೫೩. **ತರ್ಲೆ ತಿಮ್ಮನ ಬ – ಫಾರ್ಮ** : ಅಜಮೀರ ನಂದಾಪುರ ರೂ. ೧೨೦

೫೪. **ತರ್ಲೆ ತಿಮ್ಮನ ಗಾಂಧಿ ಹೌಸ್** : ಅಜಮೀರ ನಂದಾಪುರ ರೂ. ೧೫೦

•

ಹಳ್ಳೂರ ಪ್ರಕಾಶನ : ಬೆಂಗಳೂರು-೨

೫೫. **ಮೂರ್ಕಾಲ (ಕಾವ್ಯ)** : ಗಂಗಾಧರ ನಂದಿ (ಗಮನ) ರೂ. ೧೨೦

೫೬. **ಯಾಲಕ್ಕಿ ಹಾರ (ಮಕ್ಕಳ ಕಾವ್ಯ)** : ಗಂಗಾಧರ ನಂದಿ (ಗಮನ) ರೂ. ೭೦

•

೫೭. **ಕನ್ನಡ ಹಸ್ತಪ್ರತಿಗಳು ಮತ್ತು ದೈವತ್ವದ ನೆಲೆ** : ಕೃಷ್ಣಪ್ಪ
ಮಯ ಪ್ರಕಾಶನ, ಕಮಲಾಪುರ (ಬಳ್ಳಾರಿ) ರೂ. ೧೨೫

೫೮. **ಸಾಫ್ಟ್ ಜಗತ್ತಿನಲ್ಲಿ (ಕಾವ್ಯ)** : ಚೇತನ ಸೊಲಗಿ
ದಲಿತ ಸಾಹಿತ್ಯ ಪರಿಷತ್ತು, ಗದಗ ರೂ. ೭೦

೫೯. **ಹುಚ್ಚ ಹುಚ್ಚ (ಪ್ರಣಯ ಗೀತೆಗಳು)** : ಜೀವಿ
ಕಾವ್ಯಧಾರಾ ಪ್ರಕಾಶನ, ಹುಬ್ಬಳ್ಳಿ (೩ನೇ ಮುದ್ರಣ) ರೂ. ೨೦೦

೬೦. **ನಡೆದೂ ಮುಗಿಯದ ದಾರಿ (ಕಾವ್ಯ)** : ಮಾರುತಿ ದಾಸಣ್ಣನವರ
ಶ್ರೀ ವಿಘ್ನೇಶ್ವರ ಪ್ರಕಾಶನ, ಇಲವಾಲ (ಮೈಸೂರು) ರೂ. ೬೫

೬೧. **ಎದೆಯ ಒಕ್ಕಲಿಗ** : ಚೆನ್ನಪ್ಪ ಅಂಗಡಿ
ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ (ಬೀದರ) ರೂ. ೧೦೦

೬೨. **ಪ್ರಕೃತಿ (ಕಾವ್ಯ)** : ಭಾರತೀ ಪುತ್ರ
ಭಾರತೀಯ ಸಾಹಿತ್ಯ, ನಾಗಮಂಗಲ ರೂ. ೮೦

೬೩. **ಮನಸ್ಸು ಮಲ್ಲಿಗೆ** : ಸಂ. ಹನುಮಂತಪ್ಪ ಅಂಡಗಿ
ಮಾನಸ ಪ್ರಕಾಶನ ಕೊಪ್ಪಳ. ರೂ. ೧೫೦

೬೪. **ಉಘೇ ಉಘೇ (ಸಣ್ಣ ಕತೆ)** : ಗುಬ್ಬಚ್ಚಿ ಸತೀಶ್
ಗೋಮಿನಿ ಪ್ರಕಾಶನ, ತುಕಮೂರು ರೂ. ೬೦

•

ವಿನೂತನ ಪ್ರಕಾಶನ : ಅಥಣಿ, ಬೆಳಗಾವಿ

೬೫. **ಜೇನ ಹನಿ (ಕಾವ್ಯ)** : ಅಪ್ಪಾ ಸಾಹೇಬ ಅಲಿಬಾದಿ ರೂ. ೭೦

೬೬. **ಚೈತ್ರದ ಕಾವ್ಯಾಂಜಲಿ (ಕಾವ್ಯ)** : ಅಪ್ಪಾ ಸಾಹೇಬ ಅಲಿಬಾದಿ ರೂ. ೭೦

೬೭. **ವಚನ ಚೇತನ (ಕಾವ್ಯ)** : ಅಪ್ಪಾ ಸಾಹೇಬ ಅಲಿಬಾದಿ ರೂ. ೭೦

೬೮. **ಚುಟುಕು ಚಂದನ (ಕಾವ್ಯ)** : ಅಪ್ಪಾ ಸಾಹೇಬ ಅಲಿಬಾದಿ ರೂ. ೭೦

೬೯. **ಸುವರ್ಣ ಮಿಂಚು (ಅಭಿನಂದನ)** : ಸಂ. ಎಂ. ಎಸ್. ವಾಲಿ ರೂ. ೪೦೦

•

೭೦. **ಹಗರಿ ಸಾಲಿನ ಸಾಧಕ** : ಸಂ. ಕೆ. ರವೀಂದ್ರನಾಥ
ಗುರುಮೂರ್ತಿ ಪೆಂಡಕೂರ ಅಭಿನಂದನ ಸಮಿತಿ ಬೆಂಗಳೂರು ರೂ. ....

೭೧. **ಹರಸಾಹಸಿ :** ಸಂ. ಜಿ. ಎನ್. ಉಪಾಧ್ಯ
ಎಚ್. ಬಿ. ಎಲ್. ರಾವ್ ಅಭಿನಂದನ ಸಮಿತಿ, ಮುಂಬಯಿ ರೂ. ೧೫೦

೭೨. **ಕಣ್ಣೊಳಗಿನ ಕತ್ತಲು (ಕಾವ್ಯ) :** ಕೆ. ಮುರುಗೇಶ
ಸ್ನೇಹ ಪ್ರಕಾಶನ, ಲಿಂಗಸಗೂರು (ರಾಯಚೂರು) ರೂ. ೬೦

೭೩. **ಅರಿವಿನ ಅಲೆಗಳು :** ಶಿವ ಕುಮಾರ ತಾತಾ
ಎಂ.ವಿ. ಅರಳಿ ಬುಕ್ ಸೆಲ್ಲರ್, ಗದಗ ರೂ. ೬೦

೭೪. **ಕಮಲಾ ಹಂಪನಾ ಹೆಜ್ಜೆ-೮೦ :** ಶಾಂತಲಕ್ಷ್ಮಿ
ಸಪ್ನ ಬುಕ್ ಹೌಸ್, ಬೆಂಗಳೂರು-೯ ರೂ. ೧೫೦

೭೫. **ವೈತರಣಿಯ ಆಚೆ (ನಾಟಕ) :** ಹರಿಜಿತ್ / ಎ.ಎ.ಸನದಿ
ಆದಿತ್ಯ ಪಬ್ಲಿಕೇಷನ್, ಬೆಳಗಾವಿ ರೂ. ೮೪

೭೬. **ಮುಖಾಂತರ (ಕಾದಂಬರಿ) :** ನಾ. ಮೊಗಸಾಲೆ
ಮನೋಹರ ಗ್ರಂಥಮಾಲಾ, ಧಾರವಾಡ ರೂ. ೫೫೦

•

ದೇಸಿ ಪುಸ್ತಕ : ವಿಜಯನಗರ, ಬೆಂಗಳೂರು-೪೦

೭೭. **ದೇವರು ಮತ್ತೆ ಮತ್ತೆ (ಕಾವ್ಯ)** : ನಾ. ಮೊಗಸಾಲೆ ರೂ. ೮೦

೭೮. **ಸನ್ನಿಧಿಯಲ್ಲಿ ಸೀತಾಪುರ (ಸಣ್ಣಕತೆ)** : ನಾ. ಮೊಗಸಾಲೆ ರೂ. ೧೬೦

•

೭೯. **ಗಡಿಯೊ ದೊರಪಾಲನ (ಕಾದಂಬರಿ) :** ನಾ. ಮೊಗಸಾಲೆ
ತೆಲುಗು ಅನುವಾದ : ಸಖಮುರು ರಾಮಗೋಪಾಲ
ಅಭಿಜಾತ ಕನ್ನಡ-ತೆಲುಗು ಅನುವಾದ ಕೇಂದ್ರ, ಹೈದರಾಬಾದ್ ರೂ. ೬೦೦

೮೦. **ಹೈ.ಕ.ಅಭಿವೃದ್ಧಿ ರೂವಾರಿ ವೈಜನಾಥ ಪಾಟೀಲ :** ಸಂ. ಎಚ್. ಎಸ್.ಪಾಟೀಲ
ವಿರಾಟ ಪಬ್ಲಿಕೇಷನ್, ಕಲಬುರ್ಗಿ ರೂ. ೮೪

೮೧. **ಎಲ್ಲೋ ಹಾಳಾಗಿ ಹೋಗಿದ್ದಾನೆ ವಸಂತ (ಕಾವ್ಯ) :** ವೀರಣ್ಣ ಮಡಿವಾಳರ
ಜಾನು ಪ್ರಕಾಶನ, ಕೇರೂರು (ಬೆಳಗಾವಿ) ರೂ. ೯೯

೮೨. **ನುಡಿಹಾರ ೬ (ಚಿಂತನ ಬರಹ) :** ಸಂ. ಅರುಣ ಕುಮಾರ ಎಸ್. ಆರ್.
ಕನ್ನಡ ಸಂಘ ಕಾಂತಾವರ (ಉಡುಪಿ) ರೂ. ೧೦೦

•

ಉಪಾಸನ ಪ್ರಕಾಶನ : ಬೆಂಗಳೂರು-೪೦

೮೩. **ನೀರ ಮೇಗಲ ಸಹಿ (ಕಾವ್ಯ)** : ಹಂದಲಗೆರೆ ಗಿರೀಶ ರೂ. ೮೦

೮೪. **ನೇಗಿಲ ಗೆರೆ (ಕಾವ್ಯ)** : ಹಂದಲಗೆರೆ ಗಿರೀಶ ರೂ. ೮೦

೮೫. **ಬೆತ್ತಲೆ (ಕಾವ್ಯ) :** ಮುಸಿಯಪ್ಪ ಪುಬ್ಬಳ್ಳಿ
ಮಹಾಮನೆ ಪ್ರಕಾಶನ, ಯಲಬುರ್ಗ (ಕೊಪ್ಪಳ) ರೂ. ೬೫

೮೬. **ಹೆಣ್ಣು ಹೆಜ್ಜೆ (ಕತೆ) :** ಸಾವಿತ್ರಿ ಮುಜಂದಾರ
ಜನದನಿ ಪ್ರಕಾಶನ, ಅಳವಂಡಿ (ಕೊಪ್ಪಳ) ರೂ. ೧೫೦

೮೭. **ಹಾಡುವ ಹಕ್ಕಿಯ ಶೋಕಗೀತೆ :** ಅಪ್ಪಗೆರೆ ಸೋಮಶೇಖರ
ದೇಸಿ ಪುಸ್ತಕ, ಬೆಂಗಳೂರು - ೪೦ ರೂ. ೧೫೦

೮೮. **ಇದ್ದೇನಯ್ಯಾ ಇಲ್ಲದಂತೆ (ಕಾದಂಬರಿ) :** ಶಶಿಕಲಾ ವಸ್ತದ
ಬಿ.ಬಿ.ಸಿ.ಪಬ್ಲಿಕೇಶನ್, ಬೆಂಗಳೂರು- ೪ ರೂ. ೨೦೦

೮೯. **ಹಿಂದು ಧರ್ಮ ಪತನದ ಹಾದಿಯಲ್ಲಿ :** ಎಸ್. ಬೀಮಪ್ಪ / ಜಿ. ಶರಣಪ್ಪ
ಪುಷ್ಪ ಶಂ. ಭೀಮಪ್ಪ, ಆರ್. ಕೆ. ಲೇಔಟ್, ಬೆಂಗಳೂರು-೭೯ ರೂ. ೨೨೫

೯೦. **ಮನುಷ್ಯರು ಬೇಕಾಗಿದ್ದಾರೆ (ಕಾವ್ಯ) :** ಲಕ್ಷ್ಮಣ ಬಾದಾಮಿ
ಅಭಿಲಾಷ ಪ್ರಕಾಶನ, ಸೀರೂರು (ಬಾಗಲಕೋಟೆ) ರೂ. ೬೦

೯೧. **ಆದರ್ಶ ಕಳ್ಳ (ಸಣ್ಣ ಕತೆ) :** ಬಸವರಾಜ ನಾಯ್ಕರ
ಗೀತಾಂಜಲಿ ಪಬ್ಲಿಕೇಷನ್, ಬೆಂಗಳೂರು- ೭೨ ರೂ. ೨೦೦

೯೨. **ಶಬ್ದ ಸಂಪದ :** ಸಂ. ಶಾಂತಾ ಇಮ್ರಾಪುರ / ಜಿನದತ್ತ ಹಡಗಲಿ
ಪ್ರೊ. ಹಸನಬಿ ಬೀಳಗಿ ಅಭಿನಂದನ ಗ್ರಂಥ
ಚಂದ್ರನಾಥ ಪ್ರಕಾಶನ, ಧಾರವಾಡ ರೂ. ೧೫೦

೯೩. **ಕಲ್ಯಾಣವೆಂಬ ಪ್ರಣತಿ (ಕಾವ್ಯ) :** ಮಹಾಂತಪ್ಪ ನಂದೂರ
ಎಚ್ಚೆಸ್ವಿ ಪ್ರಕಾಶನ, ಬೆಂಗಳೂರು- ೮೫ ರೂ. ೬೦

೯೪. **ತೇರನೆಳೆವ ಜನ (ಭಾಷಣಗಳು) :** ಸಂ. ಗುರುಪಾದ ಮರಿಗುದ್ದಿ
ಕನ್ನಡ ಜಾಗೃತಿ ಪುಸ್ತಕ ಮಾಲೆ, ಚಿಂಚಣಿ (ಬೆಳಗಾವಿ) ರೂ. ೨೦೦

೯೫. **ನೋವ ನುಂಗಿ ನಕ್ಕವರು (ಲೇಖನಗಳು) :** ವೀಣಾ ಸಂಕನಗೌಡರ
ಚಂದ್ರನಾಥ ಪ್ರಕಾಶನ, ಧಾರವಾಡ ರೂ. ೧೨೦

೯೬. **ಎಂದಿಗೂ ಮಾಸದ ಜೇನು (ಕಾವ್ಯ) :** ಮಹಾಂತೇಶ ಕಾತರಕಿ
ಸಿದ್ಧಲಿಂಗೇಶ್ವರ ಲ್ಯಾಬ್, ಗುಳೇದ ಗುಡ್ಡ (ಬಾಗಲಕೋಟ) ರೂ. ೮೦

೯೭. **ಅನಂತಮೂರ್ತಿ ವಾಙ್ಮಯ :** ಟಿ. ಪಿ. ಅಶೋಕ
ಅಕ್ಷರ ಪ್ರಕಾಶನ, ಹೆಗ್ಗೋಡು (ಶಿವಮೊಗ್ಗ) ರೂ. ೧೬೦

•

ಲೋಕ ಶಿಕ್ಷಣ ಟ್ರಸ್ಟ್ : ಬೆಂಗಳೂರು-ಹುಬ್ಬಳ್ಳಿ

೯೮. **ಇದಮಿತ್ಥಮ್ (ಅಂಕಣ)** : ಶಿವಾನಂದ ಶಿವಾಚಾರ್ಯ ರೂ. ೧೬೫

೯೯. **ಅಕ್ಷರ ಯಾನ (ಅಂಕಣ)** : ಶಿವಾನಂದ ಶಿವಾಚಾರ್ಯ ರೂ. ೧೬೦

•

ಕೇಂದ್ರ ಸಾಹಿತ್ಯ ಅಕಾಡೆಮಿ : ನವದೆಹಲಿ

೧೦೦. **ಗಾಲಿಬ್ – ವ್ಯಕ್ತಿತ್ವ – ಯುಗಾಂತ** : ವರ್ಮ / ಬಿದರಹಳ್ಳಿ ರೂ. ೧೩೫

೧೦೧. **ಪುದು ಮೈಪಿತ್ತನ್** : ನಲ್ಲಿ ಕಣ್ಣನ್ / ಮಲರ್‌ವಿಳಿ ಕೆ. ರೂ. ೫೦

•

೧೦೨. **ಶತನಮನ (ಅಭಿನಂದನ)** : ಜಿ. ಅಬ್ದುಲ್ ಬಷೀರ್
ಆಚಾರ್ಯ ಪಾಠಶಾಲಾ ಶಿಕ್ಷಣ ದತ್ತಿ, ಬೆಂಗಳೂರು ರೂ. ೩೦

೧೦೩. **ಬಸವಣ್ಣ-ಮುಹಮ್ಮದ್ ಪೈಗಂಬರ್** : ಜಿ. ಅಬ್ದುಲ್ ಬಷೀರ್
ಮುರುಘಾಮಠ, ಧಾರವಾಡ - ೬ ರೂ. ೫೦

೧೦೪. **ವಚನ ವಾಙ್ಮಯ ವಿಹಾರ** : ಜಿ. ಅಬ್ದುಲ್ ಬಷೀರ್
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ರೂ. ೨೦೦

೧೦೫. **ಉಲುಹಿನ ವೃತ್ತದ ನೆಳಲು** : ಸಂ. ಬಿ. ಕೆ. ಹಿರೇಮಠ
(ಶ್ರೀ ನಿರೂಪಾಧೀಶ ವಚನ ಸಮಗ್ರ)
ಅನಿಮಿಷ ಪ್ರಕಾಶನ, ಬಾಗಲಕೋಟ ರೂ. ೪೦೦

೧೦೬. **ಸಿರಿಮುಡಿ ಪರಿಕ್ರಮಣ (ಮಹಾಕಾವ್ಯ)** :
ಎಂ. ವೀರಪ್ಪ ಮೊಯಿಲಿ
ಮಾಹೇಶ್ವರಿ ಪ್ರಕಾಶನ, ಬೆಂಗಳೂರು - ೩೨ ರೂ. ೬೦೦

೧೦೭. **ಶ್ರೀರಾಮ ಮಹಾದರ್ಶನ (ಮಹಾಕಾವ್ಯ)** : ಲತಾ ರಾಜಶೇಖರ
ಕಾವೇರಿ ಪ್ರಕಾಶನ, ಮೈಸೂರು-೨೮ ರೂ. ೬೦೦

೧೦೮. **ಕರ್ನಾಟಕದಲ್ಲಿ ಬೌದ್ಧಧರ್ಮದ ಪುನರುಜ್ಜೀವನ** :
ಬಿ. ಕೆ. ಎಸ್. ವರ್ಧನ್
ಶಿಕ್ಷಣ ಸಂಗ್ರಾಮ ಪ್ರಕಾಶನ, ಧಾರವಾಡ ರೂ. ೪೦೦

•

ಲಡಾಯಿ ಪ್ರಕಾಶನ : ಗದಗ

೧೦೯. **ಹೋರಾಟಗಾರ ಎಚ್ಚೆನ್** : ಬಿ. ಗಂಗಾಧರ ಮೂರ್ತಿ ರೂ. ೯೦

೧೧೦. **ಛತ್ರಪತಿ ಶಾಹೂ (ಕಾವ್ಯ)** : ಎಚ್. ಎಸ್. ಅನುಪಮಾ ರೂ. ೧೧೦

೧೧೧. **ಒಳ ಮೀಸಲಾತಿ (ಲೇಖನಗಳು)** : ಸಂ. ಶ್ರೀನಿವಾಸ ಮರಡ್ಡಿ ರೂ. ೧೦೦

೧೧೨. **ದೇವರ ರಾಜಕೀಯ ತತ್ವ** : ಕಂ.ಚ. ಐಲಯ್ಯ / ಜಾಜಿ ದೇವೇಂದ್ರಪ್ಪ ರೂ. ೧೮೦

೧೧೩. **ಮೋಟಾರು ಸೈಕಲ್ ಡೈರಿ** : ಚೆಗವಾರ / ಅನುಪಮಾ ರೂ. ೧೫೦

೧೧೪. **ಸೂಫಿ ಕಥಾ ಲೋಕ** : ಅನು: ಬಿ. ಗಂಗಾಧರ ಮೂರ್ತಿ ರೂ. ೨೫೦

೧೧೫. **ಹುಲಿಯ ನೆರಳಿನೊಳಗೆ (ಆತ್ಮಕತೆ)** : ನಾಮದೇವ ನಿಮ್ಗಾಡೆ / ಶ್ರೀಪಾದ ರೂ. ೬೦

೧೧೬. **ಚಿ. ಕ್ರಾಂತಿಯ ಸಹಜೀವನ** : ಸಂ. ಡೇವಿಡ್ ಡಬ್ ಮನ್ / ನಾ. ದಿವಾಕರ ರೂ. ೧೬೦

೧೧೭. **ಮಹಿಳೆ ಇಂದಿನ ಸವಾಲುಗಳು** : ಸಬಿಹಾ ಭೂಮಿಗೌಡ ರೂ. ೧೨೦

೧೧೮. **ಖಲೀಲ್ ಜಿಬ್ರಾನ್ ಪ್ರೇಮ ಪತ್ರಗಳು** : ಅನು: ಕಸ್ತೂರಿ ಬಾಯರಿ ರೂ. ೧೨೦

೧೧೯. **ಬಾಡೂಟದ ಜೊತೆಗೆ ಗಾಂಧಿ ಜಯಂತಿ** : ಬಿ. ಎಂ. ಬಶೀರ್ ರೂ. ೧೨೦

೧೨೦. **ನೆನಪಿನ ಹಕ್ಕಿ** : ಸೋನ ಕಾಂಬಳೆ / ಚಂದ್ರಕಾಂತ ಪೋಕಳೆ ರೂ. ೧೪೦

೧೨೧. **ಹರಿದ ಪತ್ರ (ಸಣ್ಣಕತೆ)** : ಅನಸೂಯ ಕಾಂಬಳೆ ರೂ. ೬೦

•

ಮನೋಹರ ಗ್ರಂಥಮಾಲಾ : ಧಾರವಾಡ

೧೨೨. **ಜನಪದ ರಮ್ಯ ಕಥಾನಕಗಳು** : ಕೃಷ್ಣಮೂರ್ತಿ ಹನೂರು ರೂ. ೧೪೦

೧೨೩. **ದಿನಚರಿಯ ಕಡೇ ಪುಟದಿಂದ** : ಜಯಶ್ರೀ ಕಾಸರವಳ್ಳಿ ರೂ. ೧೧೦

೧೨೪. **ಮುಸುಕು ಬೆಟ್ಟದ ದಾರಿ** : ಎಂ. ಆರ್. ದತ್ತಾತ್ರಿ ರೂ. ೩೦೦

೧೨೫. **ಇನ್ನೊಂದು ಸಂತೆ** : ಶ್ರೀನಿವಾಸ ವೈದ್ಯ ರೂ. ೧೦೦

•

ಜಡಭರತ ಪ್ರಕಾಶನ : ಧಾರವಾಡ

೧೨೬. **ಸುನಾಮಿಯ ಸುಳಿಯಲ್ಲಿ** : ಆರ್. ಕೆ. ಶಾನಭೋಗ ರೂ. ೬೦

೧೨೭. **ಅಬ್ಬಾಲಕ್ಕೀ ಅಬ್ಬೀಮನೆಗೆ ಹೋಗಿದ್ದು** : ವೈದೇಹಿ ರೂ. ೭೦

•

೧೨೮. **ಒಲವಿನ ಹಾಡು (ಕಾವ್ಯ)** : ಲಿಂಗಾರೆಡ್ಡಿ ಶೇರಿ
ಶ್ರೀ ಸ.ಸಾ.ಪ್ರಕಾಶನ, ಜಾಕನಹಳ್ಳಿ (ಸೇಡಂ-ಕಲಬುರ್ಗಿ) ರೂ. ೭೫

೧೨೯. **ಅಲ್ಲಮನ ಚಿತ್ತಾರ : ಸಂಪುಟ ೨** : ಅಲ್ಲಮಪ್ರಭು ಸ್ವಾಮಿಗಳು
ಶ್ರೀ ತೋಂಟದಾರ್ಯಮಠ, ಶಿರೋಳ (ಗದಗ) ರೂ. ೭೦

•

ಪ್ರಜಾವಾಣಿ ಪ್ರಕಾಶನ : ಬೆಂಗಳೂರು

೧೩೦. **ವಚನ ಸಾಹಿತ್ಯ ಸಂವಾದ** : ಸಂ. ಕೆ. ಎನ್. ಶಾಂತಕುಮಾರ ರೂ. ೮೦

೧೩೧. **ಜಾತಿ ಸಂವಾದ** : ಸಂ. ಕೆ. ಎನ್. ಶಾಂತಕುಮಾರ ರೂ. ೨೦೦

•

ಸಂಚಯ ಪ್ರಕಾಶನ : ಬೆಂಗಳೂರು

೧೩೨. **ಅನುದಿನವಿದ್ದು** : ಡಿ. ವಿ. ಪ್ರಹ್ಲಾದ ರೂ. ೪೦

೧೩೩. **ಹೊಳೆದದ್ದು ತಾರೆ** : ಡಿ. ವಿ. ಪ್ರಹ್ಲಾದ ರೂ. ೫೦

•

೧೩೪. **ಬಸವ ಪ್ರಭೆ (ಭಾಗ -೩)** : ಮಹಾಂತಪ್ಪ / ಪಾರ್ವತಮ್ಮ
ಶರಣ ಪ್ರಕಾಶನ, ಸಂತೇ ಕಡೂರು, (ಶಿವಮೊಗ್ಗ) ರೂ. ...

೧೩೫. **ಗಂಗೋದಕ (ಕಾವ್ಯ)** : ಜನಾರ್ದನ ನಾಯಕ
ವಿಭವ ಪ್ರಕಾಶನ, ಧಾರವಾಡ ರೂ. ೭೫

೧೩೬. **ನೋಡಿರಿ ಧರ್ಮಜ ಫಲುಗುಣಾದಿಗಳು** : ಸಂ. ಎಂ. ಎ. ಹೆಗಡೆ
ಯಾಜಿ ಪ್ರಕಾಶನ, ಹೊಸಪೇಟೆ ರೂ. ೧೨೦

೧೩೭. **ಜೋಕುಮಾರ (ನಾಟಕ)** : ಬಶೀರ ಅಹ್ಮದ ಹೊಸಮನಿ
ಹೊಸಮನಿ ಪ್ರಕಾಶನ, ರಾಯಚೂರು ರೂ. ೭೫

೧೩೮. **ಹಸ್ತಪ್ರತಿ ಸಂಕಥನ** : ವೀರೇಶ ಬಡಿಗೇರ
ಮಯ ಪ್ರಕಾಶನ, ಕಮಲಾಪುರ (ಬಳ್ಳಾರಿ) ರೂ. ೧೬೦

೧೩೯. **ಭಾರತದ ಬೇಸಾಯಗಾರರೆಲ್ಲ ಬೌದ್ಧರು** : ಕೆ. ಎಸ್. ಭಗವಾನ್
ಮಹಿಮ ಪ್ರಕಾಶನ, ಮೈಸೂರು - ೨೩ ರೂ. ೮೦

೧೪೦. **ಮುತ್ತು ಕೊಡುವ ಹುಡುಗಿಯರು (ಕಾವ್ಯ)** : ಮ. ಗಂ. ರೇಣುಕ ಪ್ರಸನ್ನ
ವಿಜ್ಞಾನ ಪ್ರಕಾಶನ, ತುಮಕೂರು ರೂ. ೧೦೦

೧೪೧. **ಭಾವ ತರಂಗ (ಕಾವ್ಯ)** : ಶಾಂತಿ ಕುಟ್ಟಪ್ಪ, ಮಚ್ಚಾಮಡ
ಇಗ್ಗುತಪ್ಪ ಪ್ರಕಾಶನ, ಬೆಂಗಳೂರು - ೬೮ ರೂ. ೧೦೦

೧೪೨. **ಕ್ರಾಂತಿ ಕಹಳೆ (ಕಾವ್ಯ)** : ಮಾರುತಿ ತಳವಾರ
ಸಿರಗನ್ನಡ ಯುವ ಸಂಘ, ಮೆಡ್ಲೇರಿ (ಹಾವೇರಿ) ರೂ. ೪೦

೧೪೩. **ವಚನ ಸುಧೆ (ಕಾವ್ಯ)** : ಬೋಗಂಧ (ಬಿ. ಗಂಗಾಧರ)
ಹಿತೈಷಿ ಪ್ರಕಾಶನ, ಬೆಂಗಳೂರು - ೫೦ ರೂ. ೭೫

೧೪೪. **ನೂರರ ಸಂಭ್ರಮಕ್ಕೆ ನೂರು ಕವಿತೆಗಳು** : ಭೀಮರಾಯ ಹೂಗಾರ
ಬೀ.ಹೂ. ಪಬ್ಲಿಕೇಷನ್, ಹೂವಿನ ಹಿಪ್ಪರಗಿ (ವಿಜಯಪುರ) ರೂ. ೫೦

೧೪೫. **ಕನ್ನಡ ವನದ ತಂಗಾಳಿ** : ಸುಮಿತ್ರಾ ದಳವಾಯಿ
(ಶಿವಾನಂದ ಗಾಳಿ ಅಭಿನಂದನ)
ಧಾರವಾಡ ಜಿಲ್ಲಾ ಕ. ಸಾ. ಪರಿಷತ್ತು, ಧಾರವಾಡ ರೂ. ೨೦೦

೧೪೬. **ತೆರೆದ ಪುಸ್ತಕ** : ಜಿ. ಬಿ. ಹೊಂಬಳ
ಸಾಹಿತ್ಯ ಸೌಧ ಪ್ರಕಾಶನ, ಧಾರವಾಡ ರೂ. ೧೨೫

•



ಸಂಕ್ರಮಣ

ಸುವರ್ಣ ಸಂಪುಟಗಳು



- **ಸಂಕ್ರಮಣ** ಸಾಹಿತ್ಯ ಪತ್ರಿಕೆಯ ೫೦ ವರ್ಷಗಳ ೪೨೪ ಸಂಚಿಕೆಗಳು ಇಡಿಯಾಗಿ ಮರು ಮುದ್ರಣಗೊಂಡು ಅಂದಾಜು ಇಪ್ಪತ್ತೈದು ಸಂಪುಗಳಲ್ಲಿ ನಿಮಗೆ ಲಭ್ಯ.

- ಸಂಪುಟಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಕಳಿಸುತ್ತೇವೆ.

- ಅರ್ಧಶತಮಾನದ- (೧೯೬೪-೨೦೧೪) -ಕನ್ನಡ ನಾಡಿನ ಸಾಹಿತ್ಯಿಕ-ಸಾಮಾಜಿಕ- ಸಾಂಸ್ಕೃತಿಕ ವಿದ್ಯಮಾನಗಳ ಚಾರಿತ್ರಿಕ ದಾಖಲೆ ಈ ಸಂಪುಟಗಳು. ನವ್ಯ-ನವ್ಯೋತ್ತರ-ದಲಿತ-ಬಂಡಾಯ ಪರ್ವಗಳ ಅಪರೂಪದ ಸೃಜನಾತ್ಮಕ ಮತ್ತು ಸೃಜನೇತರ ಬರಹಗಳು ಅಂದಾಜು ಇಪ್ಪತ್ತೈದು ಸಾವಿರ ಪುಟಗಳಲ್ಲಿ.

- ಈ ೨೫ ಸಂಪುಟಗಳ ಇಡೀ ಸೆಟ್‌ಗೆ ರೂ. ೮೦೦೦/-. ಈಗಾಗಲೇ ಮೊದಲ ಎರಡು ಸಂಪುಟ ಹೊರ ಬಂದಿವೆ. ಮೂರನೆಯದು ಅಚ್ಚಾಗುತ್ತಿದೆ. ಈ ವರ್ಷದ ಕೊನೆಯೊಳಗಾಗಿ ಎಲ್ಲ ೨೫ ಸಂಪುಟ ತರುವ ಯೋಜನೆ ಇದೆ. ದಯವಿಟ್ಟು ಹಣವನ್ನು **ದೊಡ್ಡ** ಕಂತುಗಳಲ್ಲಿ ನೀಡಿದರೆ ಅನುಕೂಲ. ಒಂದು ಸಂಪುಟಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ. ನಿಮ್ಮ ನಿರಂತರ ಸಹಕಾರ ಮುಖ್ಯ.

- **ಒಂದು ಸಲಹೆ :** ಎಲ್ಲ ೨೫ ಸಂಪುಟ ಖರೀದಿಸುವ ಅವಶ್ಯಕತೆ ಎಲ್ಲರಿಗೂ ಇರಲಿಕ್ಕಿಲ್ಲ. ಆದ್ದರಿಂದ ತಮಗೆ ಎಷ್ಟು ಸಂಪುಟ - ಅಂದರೆ, ಯಾವ ವರ್ಷದ ವರೆಗೆ - ಬೇಕೆಂಬುದನ್ನು **ಮುಂಚೆಯೇ** ತಿಳಿಸಿದರೆ ನಮಗೆ ಅನುಕೂಲ.

- ಸಂಸ್ಥೆಗಳು - (ಉದಾ: ಹೈಸ್ಕೂಲ್-ಕಾಲೇಜು) - ಆಯಾ ವರ್ಷ ಹೊರಬರಲಿರುವ ಸಂಪುಟಗಳನ್ನು ಪಡೆಯುವ ಅವಕಾಶವಿದೆ. ಮೊದಲೇ ಆದೇಶ ನೀಡಿದರೆ ಬಿಲ್ ಇತ್ಯಾದಿ ಕಳಿಸುತ್ತೇವೆ.

– ಸಂಪಾದಕರು

ಬಿ. ಆರ್. ಲಕ್ಷ್ಮಣ ರಾವ್
ಮೊ: ೯೮೪೫೬ ೯೩೬೧೪
೧೭/೬, ಚಿಂತಾಮಣಿ, ಕ್ರಾಸ್-೫, ಮೇನ್-೧೬
ಬಾಲಾಜಿ ಲೇಔಟ್, ಪದ್ಮನಾಭನಗರ,
ಬೆಂಗಳೂರು ೫೬೦೦೭೦

ಅನಿತ ಮಂಗಲ
ಮೊ: ೯೫೩೮೦ ೨೬೮೮೯
ಅನಿತ ಎಂ. ಎಸ್.,
ಇ/ಮ ಹೇಮಾವತಿ ಶ್ರೀನಿವಾಸ ಎಂ. ಕೆ
ಮಂಗಲ ೫೭೧ ೪೦೩ (ಕೊತ್ತತ್ತಿ ಹೋಬಳಿ-ಮಂಡ್ಯ)

ಡಾ. ಸಿ. ಎನ್. ರಾಮಚಂದ್ರನ್
ಮೊ: ೯೮೮೬೮ ೬೧೪೯೫
ಎ ೭-೮೦೩. ಎಲಿಟಾ ಪ್ರಮೆನೇಡ್, ಮೇನ್-೧೮
ಜೆ.ಪಿ.ನಗರ ಹಂತ-೭, ಬೆಂಗಳೂರು ೫೬೦೦೭೮

ಡಾ. ಅಪ್ಪಗೆರೆ ಸೋಮಶೇಖರ
ಮೊ: ೯೯೦೨೯ ೩೩೭೭೨
ಕನ್ನಡ ವಿಭಾಗ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ
ಕಡಗಂಚಿ, ಕಲಬುರ್ಗಿ ೫೮೫೩೧೧

ಡಾ. ವಿಜಯಕುಮಾರಿ ಎಸ್. ಕರಿಕಲ್
ಮೊ: ೯೪೪೮೭ ೯೪೯೯೨
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಪ್ರಭು ಖಾನಾಪುರೆ
ಮೊ: ೯೪೪೮೬ ೫೧೪೩೩
೧೪, ಶರಣ ನಿಲಯ, ಪ್ರಶಾಂತನಗರ ಬಿ
ಕಲಬುರಗಿ ೫೮೫ ೧೦೫

ಡಾ. ಉಪ್ಪಂಗಳ ರಾಮಭಟ್ಟ
ದೂ : ೦೮೨೦ ೨೫೨೯೯೦
ಪರಾಶರ, ೮-೧-೬೪ಬಿ, ಸುಧೀಂದ್ರತೀರ್ಥ ಮಾರ್ಗ
ಕುಂಜಿಬೆಟ್ಟು, ಉಡುಪಿ ೫೭೬ ೧೦೧

ರೇಖಾ ವಿ. ಬನ್ನಾಡಿ
ಮೊ: ೯೪೪೮೯೨ ೫೭೨೬೩
ತಿಂಗಳ ಬೆಳಕು, ಜೆ.ಎಲ್.ಬಿ. ರಸ್ತೆ , ವಡೇರ
ಹೋಬಳಿ, ಕುಂದಾಪುರ ೫೭೬೨೦೧ (ಉಡುಪಿ)

ಡಾ. ವಿ. ಎಸ್. ಮಾಳಿ
ಮೊ: ೯೪೪೯೧ ೮೭೯೭೩
ನಿರ್ದೇಶಕರು, ಶ್ರೀ ಬಿ.ಆರ್. ದರೂರ ಸಂಶೋಧನ
ಕೇಂದ್ರ, ಹಾರೂಗೇರಿ ೫೯೧೨೨೦ (ಬೆಳಗಾವಿ)

ಕೆ. ಬಿ. ಪವಾರ
ಮೊ: ೯೪೪೪೮೫ ೬೪೪೨೭
ಕೃಪಾ ನರ್ಸಿಂಗ್ ಹೋಮ್, ಕೆ.ಎಚ್.ಬಿ. ಕಾಲನಿ
ಶಿರಸಿ ೫೮೧೪೦೨ (ಉ. ಕ.)

ಸತೀಶ ಕುಲಕರ್ಣಿ
ಮೊ: ೯೮೪೫೪ ೦೮೯೩೪
೨೪೨, ಬಸವೇಶ್ವರನಗರ, ಕ್ರಾಸ್-೯, ಬ್ಲಾಕ್-ಬಿ
ಹಾವೇರಿ ೫೮೧ ೧೧೦

ಡಾ. ಎಂ. ಶಂಕರ
ಮೊ: ೯೪೪೯೦ ೪೬೬೩೮
ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ,
ಹೇಮಗಂಗೋತ್ರಿ, ಹಾಸನ ೫೭೩ ೨೨೦

ಧರಣೇಂದ್ರ ಕುರಕುರಿ
ಮೊ: ೯೮೪೫೧೦೫೮೮೬
ಸನ್ಮತಿ, ಸಿ.ಎಂ. ಉದಾಸಿ ನಗರ,
ಶಿರಸಿ ೫೮೧೪೦೨ (ಉ. ಕ.)

ಡಾ. ಕಮಲಾ ಹೆಮ್ಮಿಗೆ
ಮೊ: ೦೯೪೪೬೬ ೧೯೭೦೯
ಸಂಪನ್ಮೂಲ ವ್ಯಕ್ತಿ, ದೂರದರ್ಶನ ಕೇಂದ್ರ
ಕೊಡಪ್ಪನಕುನ್ನು, ತ್ರಿವೇಂದ್ರಂ-೪೩ (ಕೇರಳ)

ಡಾ. ಎಚ್. ಎಸ್. ಎಂ. ಪ್ರಕಾಶ
ಮೊ: ೯೫೩೫೪ ೧೬೬೩
೦೯, ಸಿದ್ಧಿ, ಕ್ರಾಸ್-೧, ಹಂತ-೧, ಟೀಚರ್ಸ್
ಕಾಲನಿ, ದಯಾನಂದ ಸಾಗರ ಕಾಲೇಜು ರಸ್ತೆ,
ಬೆಂಗಳೂರು ೫೬೦ ೦೭೮

ಚೇತನ ಸೊಲಗಿ
ಮೊ: ೯೧೬೪೨ ೩೫೦೫೧
ಸಮತಾ, ವಿದ್ಯಾನಗರ
ಮುಂಡರಗಿ ೫೮೨೧೧೮ (ಗದಗ)

50th YEAR

OF PUBLICATION

ಸಂಕ್ರಮಣ

Jan. - Feb.

2015

SANKRAMANA : PERIODICAL

REGD. WITH THE REGISTRAR OF NEWSPAPERS FOR INDIA

VIDE RNI No. 29730/76

EDITOR: CHANDRASHEKHAR PATIL

Vol. 50 : No. 01 January - February 2015

ಬಿ. ಆರ್. ಲಕ್ಷ್ಮಣರಾವ್

ಅನಿತ ಮಂಗಲ

ಸಿ. ಎನ್. ರಾಮಚಂದ್ರನ್

ಅಪ್ಪಗೆರೆ ಸೋಮಶೇಖರ

ವಿಜಯಕುಮಾರಿ ಎಸ್. ಕರಿಕಲ್

ಪ್ರಭು ಖಾನಾಪುರೆ

ಉಪ್ಪಂಗಳ ರಾಮಭಟ್ಟ

ರೇಖಾ ವಿ. ಬನ್ನಾಡಿ

ವಿ. ಎಸ್. ಮಾಳಿ

ಕೆ. ಬಿ. ಪವಾರ

ಸತೀಶ ಕುಲಕರ್ಣಿ

ಎಂ. ಶಂಕರ

ಧರಣೇಂದ್ರ ಕುರಕುರಿ

ಕಮಲಾ ಹೆಮ್ಮಿಗೆ

ಹೆಚ್. ಎಸ್. ಎಂ. ಪ್ರಕಾಶ

ಚೇತನ ಸೊಲಗಿ

ಚಂಪಾ

SANKRAMANA PRAKASHANA

2nd Main, Jyothi Layout, Yelachenahalli

J. P. Nagar Post, Bangalore–560 078

✆080-2632 33 44, Mob.: 94490-69344